
"VARTHA JANAPADA" Monthly - June 2019
"ವಾರ್ತಾ ಜನಪದ" ಮಾಸಿಕ - ಜೂನ್ 2019
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No, PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



## ವಿಶ್ವ ಪರಿಸರ ದಿನಾಚರಣೆ

downloaded from: www.hosvaani.com



# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-
ಜೂನ್ 2019

## ಮಳೆ ನೀರು ಸಂಗ್ರಹಿಸಿ ನೀರಿನ ಸಮಸ್ಯೆ ನಿವಾರಿಸಿ

downloaded from: www.kpscvaani.com



ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಅವರು ಬರ ಮತ್ತು ಕುಡಿಯುವ ನೀರಿನ ಸಮಸ್ಯೆ ಕುರಿತು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸುತ್ತಿರುವುದು. ಈ ಸಂದರ್ಭದಲ್ಲಿ ಸಚಿವರಾದ ಆರ್.ವಿ.ದೇಶಪಾಂಡೆ, ಕೃಷ್ಣಬೈರೇಗೌಡ, ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್‌ಭಾಸ್ಕರ್ ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದಾರೆ.



ಮೇ 7 ರಂದು ಬಸವ ಜಯಂತಿ ಅಂಗವಾಗಿ ಬೆಂಗಳೂರಿನ ಬಸವೇಶ್ವರ ಸರ್ಕಲ್‌ನಲ್ಲಿರುವ ಬಸವೇಶ್ವರ ಪ್ರತಿಮೆಗೆ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ಮಾಲಾರ್ಪಣೆ ಮಾಡುತ್ತಿರುವುದು. ಸಚಿವರಾದ ಎಂ.ಬಿ.ಪಾಟೀಲ್ ಹಾಗೂ ಮತ್ತಿತರ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದಾರೆ.

# ವಾರ್ತಾ ಜನಪದ

ಸಂಪುಟ–02 • ಸಂಚಿಕೆ–9 • ಜೂನ್ 2019




05 ಮಳೆ ನೀರು ಸಂಗ್ರಹಿಸಲು ಸಿದ್ಧರಾಗೋಣ
• ರಮಾ ಎಸ್. ಅರಕಲಗೂಡು

10 ಬರ ನಿರ್ವಹಣೆಗೆ ವರುಣ ಮಿತ್ರ ಸಹಾಯವಾಣಿ
• ರಮ್ಯಾ ಜಿ.ಎಸ್

16 ಯೋಗದಿಂದ ಸುಯೋಗ
• ಡಾ.ಗುರುರಾಜ ಪೋ ಶೆಟ್ಟಿಹಳ್ಳಿ

20 ಜೇನು ಅಭಿವೃದ್ಧಿಗೆ ಸಂಘ ಕಟ್ಟಿದ ರೈತರು
• ಬಸವರಾಜ ಎಸ್. ಬೋದೂರು

23 ಫಲ ಪುಷ್ಪ ಪ್ರದರ್ಶನದ ಮೂಲಕ ಇಸ್ರೇಲ್ ತಂತ್ರಜ್ಞಾನ ಜಾಗೃತಿ
• ತುಕಾರಾಂರಾವ್ ಬಿ.ವಿ

26 ಜಲಪಾತ್ರೆಗಳ ಸಂರಕ್ಷಣೆ
• ರವಿ ಮೂಡಿಗೆರೆ

30 ಗಡಿನಾಡಿನಾಚೆ ಕನ್ನಡದ ಕಂಪು ಸೂಸಿದ ಸರ್ ಸಿದ್ದಪ್ಪ ಕಂಬಳಿ
• ಆರ್.ಜಿ. ಹಳ್ಳಿ ನಾಗರಾಜ

34 ಬಿಂಕದ ಬನವಾಸಿ
• ರಮೇಶ ಕೆಂಗೇರಿ

37 ಕೊಡಗಿನ ನಾಡಿನಲ್ಲಿ ಮಹಾತ್ಮ ಗಾಂಧೀಜಿ
• ವೇಮಗಲ್ ಸೋಮಶೇಖರ್

41 ಅನ್ನದಾತನ ಆಪ್ತಮಿತ್ರ ಎರೆಹುಳು
• ಸಂಗಮೇಶ ಜವಾದಿ ಕೊಡಂಬಲ

43 ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಸರ್ಕಾರಿ ಶಾಲೆಗಳ ಸಾಧನೆ.

46 ಸರ್ವ ವ್ಯಾಪಿ ಪ್ಲಾಸ್ಟಿಕ್
• ಕೆ.ಎಸ್.ಸೋಮೇಶ್

49 ಸದಭಿರುಚಿಯ ಚಿತ್ರ ನಿರ್ಮಾಪಕ ಜಿ. ಎನ್. ಲಕ್ಷ್ಮೀಪತಿ
• ಡಾ. ಕೆ. ಪುಟ್ಟಸ್ವಾಮಿ



ಪ್ರಧಾನ ಸಂಪಾದಕರು
ಎನ್. ಭೃಂಗೀಶ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಉಪ ನಿರ್ದೇಶಕರು


ಉಪ ಸಂಪಾದಕರು
ಬಿ. ಪಿ. ಪೂರ್ಣಿಮಾ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

downloaded from: www.kpscvaani.com




## ಓದುಗರಿಂದ...

ಮೇ ತಿಂಗಳ ಜನಪದ ಸಂಚಿಕೆಯಲ್ಲಿ ಕಾಯಕಯೋಗಿ ಬಸವಣ್ಣನವರ ಬಗ್ಗೆ ಪ್ರಕಟಗೊಂಡಿರುವ ಲೇಖನ ಚೆನ್ನಾಗಿದೆ. ಮಹಾ ಮಾನವತಾವಾದಿ ಬಸವಣ್ಣನವರ ತತ್ವ–ಆದರ್ಶಗಳು ಇಂದಿನ ಸಮಾಜಕ್ಕೆ ಅದರಲ್ಲೂ ಎಲ್ಲಾ ವರ್ಗದ ಜನರಿಗೆ ಅತ್ಯಂತ ಸೂಕ್ತವಾದ ಬದುಕಿನ ಮಾರ್ಗ ಎಂಬುದು ಸ್ಪಷ್ಟವಾಗುತ್ತದೆ. ವಚನ ಸಾಹಿತ್ಯದ ಮೂಲಕ ಬಸವಣ್ಣನವರು ನೀಡಿರುವ ವಿಚಾರ ಸದ್ಯದ ಪರಿಸ್ಥಿತಿಯಲ್ಲೂ ಕ್ರಾಂತಿಕಾರಕ ಮತ್ತು ಅವಶ್ಯಕವಾದದ್ದು.

**–ಶಿವರುದ್ರಪ್ಪ**, ದಾವಣಗೆರೆ

ಗಾಂಧಿ ಅಂಬೇಡ್ಕರ್ ಸಂಬಂಧ ಕುರಿತ ಬರಹ ಅರ್ಥಪೂರ್ಣವಾಗಿದೆ. ಸ್ವತಃ ಗಾಂಧೀಜಿ ಅವರ ಮೊಮ್ಮಗ ರಾಜಮೋಹನ್ ಗಾಂಧಿಯವರು ಬರೆದಿರುವ ಕೃತಿಯ ಅನುವಾದದ ಮೂಲಕ ಲೇಖಕರು ಕೃತಿಯ ಅಂತರಂಗವನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಹಾಗೇ ಕಾರ್ಮಿಕ ದಿನಾಚರಣೆಯ ಕುರಿತ ಲೇಖನವು ಹೋರಾಟದ ಹಿಂದಿನ ದಿನಗಳನ್ನು ಹಿಡಿದಿಡುವ ಮೂಲಕ ಮೇ 1 ರ ಕಾರ್ಮಿಕ ದಿನಾಚರಣೆಯ ಹಿನ್ನೆಲೆಯನ್ನು ಬಿಚ್ಚಿಟ್ಟಿದೆ.

**– ಯೋಗಾನಂದ**, ಕನುಗನಹಳ್ಳಿ

ವಿಶ್ವ ಪ್ರಸಿದ್ಧ ಚೆನ್ನಪಟ್ಟಣದ ಆಟಿಕೆಗಳ ಬಗ್ಗೆ ಲೇಖನ ಸಮಗ್ರವಾಗಿ ಮೂಡಿ ಬಂದಿದೆ. ಆದರೆ ನಶಿಸುತ್ತಿರುವ ಈ ಕರಕುಶಲಕಲೆಯ ಉದ್ಯಮವನ್ನು ಬೆಂಬಲಿಸಿ ಕುಶಲಕರ್ಮಿಗಳು ಆರ್ಥಿಕವಾಗಿ ಸದೃಢರಾಗಿ ಬದುಕುವಂತಹ ಮಾರ್ಗಗಳನ್ನು ಸರ್ಕಾರ ರೂಪಿಸಬೇಕಾಗಿದೆ. ಬಸವಣ್ಣನವರ ಕುರಿತ ಲೇಖನವೂ ಸೇರಿದಂತೆ ಮೇ ಮಾಹೆಯ ವಾರ್ತಾ ಜನಪದ ಚೆನ್ನಾಗಿದೆ. ಇದೇ ರೀತಿ ಪ್ರತಿ ತಿಂಗಳು ವಿಭಿನ್ನ ವೈವಿಧ್ಯತೆಯೊಂದಿಗೆ ಜನಪದ ಮೂಡಿ ಬರಲಿ.

**–ಚನ್ನಗಿರಿ**, ಶಿವಪುರ

2019 ರ ಮೇ ಸಂಚಿಕೆಯನ್ನು ನೋಡಿ ತುಂಬಾ ಸಂತೋಷವಾಯಿತು. ಜಗಜ್ಯೋತಿ ಬಸವೇಶ್ವರರು, ಮನಮೋಹಕ ಚೆನ್ನಪಟ್ಟಣದ ಬೊಂಬೆಗಳು ಮತ್ತು ನೇಕಾರ ಹಕ್ಕಿಯ ಚಂದನೆಯ ಗೂಡು ಎಂಬ ಲೇಖನಗಳನ್ನು ಓದಿ ಸಂತೋಷವಾಯಿತು. ಮುಖಪುಟವಂತೂ ಮಹಾತ್ಮಾ ಬಸವಣ್ಣನವರ ಭಾವಚಿತ್ರ ಭಕ್ತಿಯಲ್ಲಿ ಮುಳುಗಿಸುವಂತಿತ್ತು. ಒಟ್ಟಾರೆ ಈ ಸಂಚಿಕೆಯು ಎಲ್ಲಾ ವರ್ಗದ ಓದುಗರಿಗೂ ಹಿಡಿಸುವಂತಿತ್ತು.

**–ಶಂಕ್ರಪ್ಪ ತೊಂಡಿಹಾಳು**, ಗದಗ

ವಾರ್ತಾ ಜನಪದ ಮೇ 2019 ರ ಮುಖಪುಟದಲ್ಲಿ ಕೈಯಲ್ಲಿ ಬರೆಯುವ ಅಲಗ ಹಿಡಿದಿರುವ ನಮ್ಮ ಜಗಜ್ಯೋತಿ ಬಸವೇಶ್ವರರ ಭಾವಚಿತ್ರ ತುಂಬಾ ಆಕರ್ಷಣೆಯಾಗಿ 'ಕಾಯಕವೇ ಕೈಲಾಸ' ಎಂಬ ಶೀರ್ಷಿಕೆಯಡಿ ಮೂಡಿ ಬಂದಿರುವುದನ್ನು ನೋಡಿ ಬಹಳ ಆನಂದವಾಯಿತು.

ಅದರಂತೆ ನಮ್ಮ ಜನಪದ ಮಾಸಿಕವು ಓದುಗರಿಗೆ ಬಹಳಷ್ಟು ಮಾಹಿತಿಯನ್ನು ಒದಗಿಸಿದೆ. ಬೇಸಿಗೆಯಲ್ಲಿ ಆರೋಗ್ಯ ನಿರ್ವಹಣೆ ಮಾಡುವುದು, ನೇಕಾರ ಹಕ್ಕಿಯ ಚಂದನೆಯ ಗೂಡು, ರಾಜಮುಡಿಗೆ ಇನ್ನು ರಾಜಯೋಗ, ಕರ್ನಾಟಕದಲ್ಲಿ ಬೇಸಿಗೆಯ ಪ್ರವಾಸಿ ತಾಣಗಳು ಸೇರಿದಂತೆ ಉತ್ತಮ ಲೇಖನಗಳು ಮೂಡಿ ಬಂದಿರುವುದು ಶ್ಲಾಘನೀಯವಾಗಿದೆ. ಜನಪದ ಬಳಗದವರಿಗೆ ಅಭಿನಂದನೆಗಳು.

**–ಯುವರಾಜ ಚೋಳಕೆ**, ವಿಜಯಪುರ

ಭರವಸೆಯ ಗ್ರಾಮೀಣ ಪ್ರತಿಭೆ ಅಂಜಲಿ ಕುರಿತ ಲೇಖನ ಉತ್ತಮ ಮಾಹಿತಿ ನೀಡಿದೆ. ಮುಖ್ಯವಾಗಿ ಈ ರೀತಿಯಾಗಿಯೇ ನಮ್ಮ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಪ್ರತಿಭೆಗಳು ಉತ್ತಮ ಅವಕಾಶ ಹಾಗೂ ಸೂಕ್ತ ಮಾರ್ಗದರ್ಶನವಿಲ್ಲದೆ ಅವಕಾಶ ವಂಚಿತರಾಗುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದರೆ ಒಲಂಪಿಕ್ಸ್‌ನಲ್ಲಿ ಭಾರತದ ಪದಕ ಪಟ್ಟಿ ಮೇಲೇರುವುದರಲ್ಲಿ ಸಂಶಯವಿಲ್ಲ. ಸರಕಾರ ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಗಮನ ಹರಿಸಿ, ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹಿಸಬೇಕು. ಪ್ರವಾಸಿ ತಾಣಗಳು ಮತ್ತು ತಂಬಾಕು ಕುರಿತಂತೆ ಪ್ರಕಟಿಸಲಾಗಿರುವ ಲೇಖನಗಳು ಉಪಯುಕ್ತ ಮಾಹಿತಿಯನ್ನು ಒದಗಿಸಿದೆ.

**–ಮಾನಸ**, ಆಳಂದ

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

downloaded from: www.kpscvaani.com

# ಮಳೆ ನೀರು ಸಂಗ್ರಹಿಸಲು ಸಿದ್ಧರಾಗೋಣ

ರಮಾ ಎಸ್ ಅರಕಲಗೂಡು



ಒಂದೆರಡು ವರ್ಷಗಳ ಹಿಂದೆ ಇರಬಹುದು. ಮಳೆ ಕಡಿಮೆ ಬೀಳುವ ಕಲಬುರಗಿ, ರಾಯಚೂರು, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ವಾರ್ಷಿಕ ಸರಾಸರಿ ವಾಡಿಕೆಗಿಂತ ಹೆಚ್ಚು ಮಳೆಯಾಯಿತು. ಕೆಲವು ಕಡೆ ಒಂದೇ ರಾತ್ರಿಯ ಮಳೆಗೆ ಕೆರೆ, ಕಟ್ಟೆಗಳು ಭರ್ತಿಯಾದವು. ಇನ್ನೂ ಕೆಲವು ಕಡೆ ಪ್ರವಾಹವೂ ಹರಿದು, ಜಲಾಶಯಗಳೂ ಅಪಾಯ ಮಟ್ಟ ತಲುಪಿದವು ಎಂಬ ವರದಿಯಾಯಿತು. ವಾರ್ಷಿಕವಾಗಿ 600 ಮಿಮೀ ಮಳೆ ಬೀಳುವ ಪ್ರದೇಶಗಳಲ್ಲಿ ಅದರ ಅರ್ಧದಷ್ಟು ಮಳೆ ನಾಲ್ಕೈದು ದಿನಗಳೊಳಗೆ ಸುರಿದು, ಪ್ರವಾಹ ಸೃಷ್ಟಿಸಿತು. ಆದರೆ, ಆ ಪ್ರದೇಶಗಳಲ್ಲಿ ಯಥಾ ಪ್ರಕಾರ ಚಳಿಗಾಲದಿಂದಲೇ ನೀರಿನ ಕೊರತೆ ಆರಂಭವಾಯಿತು.

ಈ ಎಲ್ಲ ಉದಾಹರಣೆಗಳು, ಪ್ರಸ್ತುತ ಕಾಲಘಟ್ಟದ ಮಳೆ ಅನಿಶ್ಚತತೆಯನ್ನು ಪ್ರತಿನಿಧಿಸುತ್ತಿವೆ. ಅಷ್ಟೇ ಅಲ್ಲ, ಎಷ್ಟು ಮಳೆ ಸುರಿದರೂ ಬದಲಾಗದ ನೀರಿನ ಸ್ಥಿತಿ–ಗತಿಯನ್ನು ಉದಾಹರಿಸುತ್ತವೆ. ಇದು ಜಾಗತಿಕ ತಾಪಮಾನ, ಹವಾಮಾನ ವೈಪರೀತ್ಯದ ಕೊಡುಗೆ.

ಒಂದು ಕಾಲದಲ್ಲಿ ಇಂಥ ಮಳೆ ಇಂಥ ದಿನ ಆರಂಭವಾಗಿ, ಇಷ್ಟು ದಿನ ಸುರಿಯುತ್ತದೆ ಎಂಬ ಲೆಕ್ಕಾಚಾರವಿತ್ತು. ಆದರೆ, ಹವಾಮಾನ ವೈಪರೀತ್ಯ, ಜಾಗತಿಕ ತಾಪಮಾನದ ಏರುಪೇರಿನಿಂದಾಗಿ ಮಳೆ ಸುರಿಯುವ ಅವಧಿಯೇ ವ್ಯತ್ಯಾಸವಾಗಿಬಿಟ್ಟಿದೆ.

ಮಳೆಗಾಲದ ಅವಧಿ ವ್ಯತ್ಯಾಸವಾದರೂ ವಾರ್ಷಿಕವಾಗಿ ಸುರಿಯುವ ಮಳೆ ಪ್ರಮಾಣ ಗಮನಿಸಿದಾಗ ಹೇಳಿಕೊಳ್ಳುವಂತಹ ವ್ಯತ್ಯಾಸ ಕಾಣುತ್ತಿಲ್ಲ. ಆದರೆ, ನೀರಿನ ಸಮಸ್ಯೆ ಮಾತ್ರ ದಿನದಿಂದ ದಿನಕ್ಕೆ ಏರುತ್ತಲೇ ಇದೆ.

ಇವತ್ತಿನ ಪರಿಸ್ಥಿತಿ ಅವಲೋಕಿಸಿದರೆ ಈ ನೀರಿನ ಸಮಸ್ಯೆಗೆ ಇರುವ ಶಾಶ್ವತ ಪರಿಹಾರ ಎಂದರೆ, ಮಳೆ ನೀರು ಸಂಗ್ರಹಿಸುವುದು. ಮಳೆ ಯಾವಾಗಲಾದರೂ, ಎಷ್ಟು ಜೋರಾಗಾದರೂ ಸುರಿಯಲಿ. ಸುರಿದ ಅಷ್ಟೂ ಮಳೆ ನೀರನ್ನು ಹಿಡಿದು ಬಳಸುವ ಕೆಲಸವಾಗಬೇಕು. ಹಾಗೆಯೇ ಹೆಚ್ಚಾದ ನೀರನ್ನು ಭೂಮಿಗೆ ಇಂಗಿಸಬೇಕು. ಇದು ನಿರಂತರವಾಗಿ, ಸಾಮುದಾಯಿಕವಾಗಿ ನಡೆಯುತ್ತಿರಬೇಕು.


ಇನ್ನೇನು ಮಳೆಗಾಲ ಆರಂಭವಾಗುತ್ತಿದೆ. ನಾವೆಲ್ಲ ಸುರಿಯುವ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು, ನಮ್ಮ ಮನೆಯ ತಾರಸಿ, ಅಂಗಳ, ಕೊಳವೆಬಾವಿ, ಸಂಪ್ ಟ್ಯಾಂಕ್‌ಗಳನ್ನು ಅಣಿಗೊಳಿಸಿಕೊಳ್ಳಬೇಕಿದೆ.

ಸರ್ಕಾರ ಕಾನೂನು ರೂಪಿಸಿದ ಮೇಲೆ ಕೆಲವು ನಗರ, ಪಟ್ಟಣ ಪ್ರದೇಶಗಳಲ್ಲಿ, ಕೆಲವು ಗ್ರಾಮೀಣ ಭಾಗದಲ್ಲೂ ಜನರು ಮನೆಗಳಿಗೆ, ಸರ್ಕಾರಿ ಕಚೇರಿ, ಸಮುದಾಯ ಭವನ, ಕಲ್ಯಾಣಮಂಟಪಗಳಿಗೆ ಮಳೆ ನೀರು ಕೊಯ್ಲು ವಿಧಾನ ಅಳವಡಿಸಿಕೊಂಡಿದ್ದಾರೆ. ಈ ವಿಧಾನ ಅಳವಡಿಸಿಕೊಳ್ಳದಿರುವವರು ಕಡ್ಡಾಯವಾಗಿ ಆ ವಿಧಾನ ಅಳವಡಿಸಿಕೊಳ್ಳಬೇಕು. ಈಗಾಗಲೇ ಮನೆಗಳಿಗೆ 'ಮಳೆ ನೀರು ಕೊಯ್ಲು' ವಿಧಾನ ಅಳವಡಿಸಿಕೊಂಡಿರುವವರು ಮಳೆಗಾಲಕ್ಕೆ ಮುನ್ನ ಒಂದಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ ಹೇಗಿರಬೇಕು ಎನ್ನುವುದಕ್ಕೆ ಇಲ್ಲಿದೆ ಮಾಹಿತಿ.

**ಚಾವಣಿಯ ಸ್ವಚ್ಛತೆ :**

ಮಳೆ ಬರುವ ಮುನ್ನ ಮನೆಯ ಚಾವಣಿ/ಮಾಳಿಗೆಯನ್ನು ಸ್ವಚ್ಛಗೊಳಿಸಿ. ಏಕೆಂದರೆ, ಮಳೆ ಬಂದಾಗ, ಚಾವಣಿ ಕೊಳಕಾಗಿದ್ದರೆ, ಮಳೆ ನೀರು ಕೊಯ್ಲು ಅಳವಡಿಸಿಕೊಂಡಿದ್ದರೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ಮಳೆಗಾಲದಲ್ಲಿ ಪ್ರತಿ ದಿನ ಚಾವಣಿ ಸ್ವಚ್ಛಗೊಳಿಸಿ. ಚಾವಣಿಯಲ್ಲಿ ಏನಾದರೂ ಸೋರುವಿಕೆ ಕಂಡರೆ ದುರಸ್ತಿಗೊಳಿಸಿ. ಮಾಳಿಗೆ ಮೇಲೆ ಕಬ್ಬಿಣದ ಚೂರು, ತಗಡು, ಡ್ರಂಗಳು, ಕೀಟನಾಶಕ, ಕ್ರಿಮಿನಾಶಕ ಅಥವಾ ಇನ್ನಾವುದೇ ಔಷಧಿಗಳ ಬಾಟಲಿ, ಗೊಬ್ಬರ ಇತ್ಯಾದಿ ಹಾನಿಕಾರಕ ವಸ್ತುಗಳನ್ನು ಶೇಖರಿಸಬಾರದು. ಹಾಗೆಯೇ, ಭತ್ತ, ರಾಗಿ, ಕಾಳುಗಳು, ಹಪ್ಪಳ ಸಂಡಿಗೆ ಮುಂತಾದ ಆಹಾರ ಪದಾರ್ಥಗಳನ್ನು ಒಣಗಿಸಲು ಹರಡಿ, ತೆಗೆದ ನಂತರ ಉಳಿಕೆ ವಸ್ತುಗಳನ್ನು ಮಾಳಿಗೆ ಮೇಲೆ ಉಳಿಸಬೇಡಿ. ಅಂಥವನ್ನು ಗಮನಿಸಿ, ಸ್ವಚ್ಛಗೊಳಿಸಬೇಕು. ಮಾಳಿಗೆ ಮೇಲೆ ಪಾಚಿ, ಗಿಡಗಂಟಿ ಬೆಳೆದಿದ್ದರೆ ಅವುಗಳನ್ನು ಕಿತ್ತು ಸ್ವಚ್ಛಗೊಳಿಸಿ.

ಪ್ರತಿ ವರ್ಷ ಚಾವಣಿಗೆ ಮಳೆಗಾಲಕ್ಕೆ ಮುನ್ನ ಸುಣ್ಣವನ್ನು ಬಳಿಸಿಬಿಡಿ. ಇದರಿಂದ ಚಾವಣಿ ಪರಿಶುದ್ಧವಾಗಿರುತ್ತದೆ. ಕಟ್ಟಡವೂ ತಂಪಾಗಿರುತ್ತದೆ. ಇದು ತಾರಸಿಗೆ ಚುರುಕಿ




ಹಾಕಿಸದಿದ್ದವರೂ ಅನುಸರಿಸಬಹುದು. ಆದರೆ ಯಾವುದೇ ಕಾರಣಕ್ಕೂ ತಾರಸಿಗೆ ಎನಾಮಿಲ್ ಪೇಂಟ್ ಹೊಡೆಸಬೇಡಿ ಎಂದು ಎಚ್ಚರಿಸುತ್ತಾರೆ ಜಲತಜ್ಞ ಎನ್. ದೇವರಾಜರೆಡ್ಡಿ.

ಪ್ರತಿ ಮಳೆ ಬಿದ್ದ ನಂತರವೂ ಚಾವಣಿಯನ್ನು ಪರೀಕ್ಷಿಸಿ. ಸಮಸ್ಯೆ ಇದ್ದರೆ ಸರಿ ಮಾಡಿ. ಮೊದಲೇ ಹೇಳಿದಂತೆ, ನೀರು ಹರಿಯುವ ದೋಣಿ / ಪೈಪಿನ ಜಾಲರಿಗಳಿಗೆ ಕಸ ಕಡ್ಡಿ ತುಂಬಿದ್ದರೆ, ಅದನ್ನು ಸ್ವಚ್ಛಗೊಳಿಸಿ. ಚಾವಣಿಯ ಮೇಲೆ ಮರಗಳು ಇದ್ದಲ್ಲಿ ಅದರ ಎಲೆ, ಪ್ರಾಣಿ ಪಕ್ಷಿಗಳ ರೆಕ್ಕೆ, ಪುಕ್ಕ, ಇತರೆ ಗಲೀಜು ಬೀಳದಂತೆ ಎಚ್ಚರಿಕೆ ವಹಿಸುವುದು ಬಹಳ ಮುಖ್ಯ.

ಹೆಂಚಿನ ಮನೆ ಅಥವಾ ಶೀಟ್ ಮನೆಗೆ ಮಳೆ ಕೊಯ್ಲು ವಿಧಾನ ಅನುಸರಿಸಿದ್ದರೆ ಪ್ರತಿ ಮಳೆಗಾಲಕ್ಕೆ ಮುಂಚೆ



ಚಾವಣಿ ನೀರು ಸಂಗ್ರಹಣೆ ದೊಡ್ಡ ತಂತ್ರಜ್ಞಾನವೇನಲ್ಲ. ಅದು ತುಂಬಾ ಸರಳ ಮತ್ತು ಸುಲಭವಾದ ಕೆಲಸ. ಮಳೆ ಬರುವಾಗ ನಮ್ಮ ಮನೆ ಅಥವಾ ಯಾವುದೇ ಕಟ್ಟಡದ ಚಾವಣಿಯ ಮೇಲೆ ಬಿದ್ದ ಮಳೆ ನೀರನ್ನು ಪೋಲಾಗಲು ಬಿಡದೆ ಒಂದೆಡೆ ಶೇಖರಿಸುವುದನ್ನೇ ಮಳೆ ನೀರು ಸಂಗ್ರಹಣೆ ಅಥವಾ ಮಳೆ ಕೊಯ್ಲು ವಿಧಾನ ಎನ್ನುತ್ತಾರೆ.

ಚಾವಣಿ ನೀರು ಸಂಗ್ರಹ ಎನ್ನುವುದು ಕೇವಲ ತಾರಸಿ ಸೂರಿನ ಮನೆಗಷ್ಟೇ ಸೀಮಿತವಾಗಿಲ್ಲ. ಮಣ್ಣಿನ ಮಾಳಿಗೆ, ಹೆಂಚಿನ ಮನೆ, ಆಸ್ಬೆಸ್ಟಾಸ್ ಶೀಟ್, ಅಷ್ಟೇ ಏಕೆ ಗುಡಿಸಲಿಗೂ ಅಳವಡಿಸಿಕೊಳ್ಳಬಹುದು. ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ 'ಸಚೇತನ' ಯೋಜನೆಯಡಿ ತುಮಕೂರು ಜಿಲ್ಲೆಯ ಸಿರಾ, ಮಧುಗಿರಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ತಾರಸಿಯೇತರ ಮನೆಗಳಿಗೆ ಮಳೆಕೊಯ್ಲು ವಿಧಾನ ಅಳವಡಿಸಿದೆ. ಆ ಮನೆಯ ಚಾವಣಿಗೆ ಕೊಳವೆಗಳನ್ನು ಅಳವಡಿಸಿ, ಮನೆ ಎದುರಿಗೆ ಏರು ತೊಟ್ಟಿ (ಎಲಿವೇಟೆಡ್ ಟ್ಯಾಂಕ್) ನಿರ್ಮಾಣ ಮಾಡಿ, ಚಾವಣಿಯ ನೀರನ್ನು ಆ ತೊಟ್ಟಿಯಲ್ಲಿ ಸಂಗ್ರಹವಾಗುವಂತೆ ಕೊಳವೆಗಳನ್ನು ಜೋಡಿಸಿದೆ. ಕೆಲವು ಮನೆಗಳಲ್ಲಿ ಮನೆಯ ಅಂಗಳ, ದೇವರಮನೆಯಲ್ಲೇ ಸಂಪ್ ಟ್ಯಾಂಕ್‌ಗಳನ್ನು ಮಾಡಿಸಿದೆ.

ಈ ಎಲ್ಲ ಉದಾಹರಣೆಗಳನ್ನು ಗಮನಿಸಿ. ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳದಿದ್ದವರು, ಈಗಲೇ ಸನ್ನದ್ಧರಾಗಿ.





downloaded from: www.kpscvaani.com



# ಬರ ನಿರ್ವಹಣೆಗೆ ವರುಣ ಮಿತ್ರ ಸಹಾಯವಾಣಿ

ರಮ್ಯಾ ಜಿ ಎಸ್

ಕೃಷಿ ವಲಯಕ್ಕೆ ಪ್ರೋತ್ಸಾಹ ನೀಡಿ ರೈತರ ಆರ್ಥಿಕ ಉನ್ನತಿಗೆ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳುವಲ್ಲಿ ಕರ್ನಾಟಕ ಇಡೀ ದೇಶಕ್ಕೇ ಮಾದರಿಯಾಗಿದೆ. ರೈತರಿಗೆ ಉಪಗ್ರಹಾಧಾರಿತ ಹವಾಮಾನ ಮಾಹಿತಿ ನೀಡುವ ಮೂಲಕ ಬಿತ್ತನೆ ಕಾಲ, ರಸಗೊಬ್ಬರ ಸಿಂಪಡಣೆ ಸಮಯ ತಿಳಿದು ಕೃಷಿ ಚಟುವಟಿಕೆ ವೆಚ್ಚ ತಗ್ಗಿಸಿ ವರಮಾನ ವೃದ್ಧಿಸಿಕೊಳ್ಳಬಹುದಾಗಿದೆ. ಒಂದು ರೀತಿ ಇದು ರೈತನ ಪಾಲಿಗೆ ಸಂಜೀವಿನಿ ಎಂದರೂ ಅತಿಶಯೋಕ್ತಿಯೇನಲ್ಲ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ)ಯ ಹವಾಗುಣ ಮಾಹಿತಿ ನೀಡುವ ವರುಣ ಮಿತ್ರ ಸಹಾಯವಾಣಿ ಸೇವೆಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ರೈತರ ಅಗತ್ಯಗಳಿಗೆ ತಕ್ಕಂತೆ ಸೇವಾ ಮಾಹಿತಿ ಜಾಲವನ್ನೂ ವಿಸ್ತರಿಸಲು ಸಂಸ್ಥೆ ಮುಂದಾಗಿದ್ದು ರೈತರ ಮತ್ತು ರಾಜ್ಯದ ಆರ್ಥಿಕ ಪ್ರಗತಿಗೆ ಮುನ್ನುಡಿ ಬರೆದಿದೆ. ಈಗ ಇತರೆ ರಾಜ್ಯಗಳೂ ಕೂಡ ವರುಣ ಮಿತ್ರ ಯೋಜನೆ ಅಳವಡಿಸಿಕೊಳ್ಳಲು ಹೊರಟಿರುವುದು ರಾಜ್ಯದ ಪಾಲಿಗೆ ನಿಜಕ್ಕೂ ಹೆಮ್ಮೆಯ ಸಂಗತಿ.



ಪ್ರವಾಹ, ಬರ ಪರಿಸ್ಥಿತಿ ಮತ್ತು ಅಸಮರ್ಪಕ ಮುಂಗಾರಿನಿಂದಾಗಿ ಕೃಷಿ ಚಟುವಟಿಕೆಗೆ ತೊಡಕಾಗಿದೆ. ಇದು ಮನುಷ್ಯ ಸೇರಿದಂತೆ ಎಲ್ಲ ಜೀವಿಗಳ ಮೇಲೆ ಪ್ರಭಾವ ಬೀರುತ್ತದೆ. ವಿಪತ್ತು ಉಂಟಾದ ನಂತರ ಪರಿಹಾರ ಕಾರ್ಯ ಕೈಗೊಳ್ಳುವ ಬದಲು ಹವಾಮಾನ ಮುನ್ಸೂಚನೆ ಆಧರಿಸಿ ಬರ ಅಥವಾ ಪ್ರವಾಹ ಪರಿಸ್ಥಿತಿ ನಿರ್ವಹಿಸುವುದು ಸೂಕ್ತ. ಊರು ಕೊಳ್ಳೆ ಹೋದ ಮೇಲೆ ಬಾಗಿಲು ಹಾಕಿದಂತೆ ಎಂಬಂತಾಗದೇ ಮೊದಲೇ ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಬಾಳು ಹಸನಾಗಿಸಬಹುದು.

ಬರ ಅಂದರೆ ಮಳೆಯಾಗದಿರುವಿಕೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಬರಗಾಲದ ಭೀಕರ ಸ್ಥಿತಿಗೆ ಕೇವಲ ಮಳೆಯಾಗದಿರುವುದು ಮಾತ್ರ ಕಾರಣವಲ್ಲ. ಮಳೆ ಕುರಿತ ಸೂಕ್ತ ಮಾಹಿತಿ ದೊರೆಯದಿರುವುದೂ ಕೂಡ ಬರಪರಿಸ್ಥಿತಿ ನಿರ್ವಹಣೆಗೆ ತೊಡಕಾಗುತ್ತದೆ. ಹವಾಮಾನ ಬದಲಾವಣೆ ಕೂಡ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಸಂಭಾವ್ಯ ಅಪಾಯಗಳನ್ನು ತಿಳಿದು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಲ್ಲಿ ಬರದ ಹಾಹಾಕಾರಕ್ಕೆ ನಲುಗದಿರಬಹುದು. ಈ ನಿಟ್ಟಿನಲ್ಲಿ ರೈತರಿಗೆ ಮಳೆ ಕುರಿತು ಮುನ್ಸೂಚನೆ ನೀಡಿ ಮಳೆಗಾಲಕ್ಕೆ ಅಥವಾ ಬರಗಾಲಕ್ಕೆ ರೈತರನ್ನು ಸಿದ್ಧಗೊಳಿಸಲು ರಾಜ್ಯ ಸರ್ಕಾರ ವರುಣ ಮಿತ್ರ ಎಂಬ ಸಹಾಯವಾಣಿ ಆರಂಭಿಸಿದೆ.

ವರುಣ ಅಂದರೆ ಮಳೆ, ಮಿತ್ರ ಎಂದರೆ ಸ್ನೇಹಿತ. ಸಂಸ್ಕೃತದಲ್ಲಿ ಮಿತ್ರ ಎಂದರೆ ಸೂರ್ಯ ಎಂಬ ಅರ್ಥವೂ ಇದೆ. ವರುಣ ಮಿತ್ರ ಎಂದರೆ ಮಳೆ, ಬಿಸಿಲಿನ ಮಾಹಿತಿ ನೀಡುವ ಸ್ನೇಹಿತ. ಹೀಗೆ ಬಿಸಿಲು, ಮಳೆ, ಸಾಂದ್ರತೆ ಮೊದಲಾದ ಹವಾಗುಣಗಳ ಮಾಹಿತಿ ಜೊತೆಗೆ ಬಿತ್ತನೆ ಸಲಹೆ ನೀಡುವ ರೈತ ಸ್ನೇಹಿ ಸೇವೆಯೇ ವರುಣ ಮಿತ್ರ.

ರೈತರು ಸಾಮಾನ್ಯವಾಗಿ ಕೃಷಿ ಚಟುವಟಿಕೆಗೆ ಹವಾಮಾನ ವರದಿ ಎದುರು ನೋಡುತ್ತಾರೆ. ಅದನ್ನಾಧರಿಸಿ ಬಿತ್ತನೆ ಕಾರ್ಯ ಕೈಗೊಳ್ಳುತ್ತಾರೆ. ಹೀಗಾಗಿ ಅವರಿಗೆ ಕ್ಷಣ ಕ್ಷಣದ ತಾಜಾ ಮಾಹಿತಿ ಹಾಗೂ ಅವರ ಅಗತ್ಯದ ದಿನಗಳ ಹವಾಮಾನ ವರದಿ ತಿಳಿಸಲು ರಾಜ್ಯ ಸರ್ಕಾರ ವರುಣ ಮಿತ್ರ ಸಹಾಯವಾಣಿ ಅರಂಭಿಸಿದೆ. ಇದು ದೇಶದಲ್ಲೇ ಮೊದಲ ಪ್ರಯತ್ನವಾಗಿದೆ.

ನೈಸರ್ಗಿಕ ವಿಕೋಪ ಕುರಿತು ಮುನ್ನೆಚ್ಚರಿಕೆ ದೊರೆತರೆ ಅದರಿಂದಾಗುವ ಬೆಳೆ ಹಾನಿ ಪ್ರಮಾಣ ಕಡಿಮೆ ಮಾಡಬಹುದು ಎಂಬ ಉದ್ದೇಶದಿಂದ ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ದಿನದ 24 ಗಂಟೆಯೂ ಮಳೆ ಮತ್ತು ಹವಾಮಾನಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವ ಸಹಾಯವಾಣಿ ಸಂಖ್ಯೆ ಸೇವೆ ಜಾರಿಯಲ್ಲಿದೆ. ಸಹಾಯವಾಣಿ ಸಂಖ್ಯೆ 92433 45433 ಗೆ ಕರೆ ಮಾಡುವ ಮೂಲಕ ರೈತರು ಮುಂದಿನ ದಿನಗಳಲ್ಲಿನ ಹವಾಮಾನದ ಮಾಹಿತಿ ಪಡೆದು ಬೆಳೆಯ ಕಟಾವು, ಬಿತ್ತನೆ ನಿರ್ಧರಿಸಬಹುದು. ಇದೀಗ ದೂರವಾಣಿ ಸಂಖ್ಯೆ 080 – 22745232 (ದಕ್ಷಿಣ ಒಳನಾಡು) ಮತ್ತು 080 22745234 (ಉತ್ತರ ಒಳನಾಡು) ಗೆ ಕರೆ ಮಾಡುವ ಮೂಲಕ ಸಹ ಮಾಹಿತಿ ಪಡೆಯಬಹುದು. ಹೆಚ್ಚುತ್ತಿರುವ





downloaded from: www.kpscvaani.com



ಬೇಡಿಕೆಯಿಂದಾಗಿ ಈ ದೂರವಾಣಿ ಮಾರ್ಗಗಳ ಸಂಖ್ಯೆಯನ್ನು ಹತ್ತಕ್ಕೆ ಏರಿಕೆ ಮಾಡಲಾಗಿದೆ.

ಮುಂದಿನ ಮೂರು ದಿನಗಳಲ್ಲಿ ಯಾವಾಗ ಮಳೆಯಾಗಲಿದೆ? ಎಷ್ಟು ಪ್ರಮಾಣ? ಉಷ್ಣಾಂಶ ಎಷ್ಟಿರಲಿದೆ? ಗಾಳಿ ಯಾವಾಗ ಯಾವ ದಿಕ್ಕಿಗೆ, ಎಷ್ಟು ವೇಗದಲ್ಲಿ ಬೀಸಲಿದೆ ಮೊದಲಾದ ಮಾಹಿತಿಯನ್ನು ಸಹಾಯವಾಣಿಗೆ ಕರೆ ಮಾಡಿ ಪಡೆಯಬಹುದು. ಈ ಮೂಲಕ ರೈತರು ಬಿತ್ತನೆಗೆ ಸೂಕ್ತ ಸಮಯ ಯಾವುದು, ಕಟಾವು ಮಾಡಲು ಸಕಾಲ ಯಾವಾಗ ಎಂದು ತಿಳಿಯಬಹುದು. ಇದರಿಂದಾಗಿ ದಿಢೀರ್ ಮಳೆ ಅಥವಾ ಬರಪರಿಸ್ಥಿತಿಯಿಂದಾಗುವ ನಷ್ಟ ತಪ್ಪಿಸಬಹುದು. ಹಾಗೆಯೇ ಯಾವಾಗ ಮಳೆಯಾಗಲಿದೆ ಎಂಬ ಮಾಹಿತಿ ಪಡೆದು ನೀರುಣಿಸುವ ಸಮಯ ನಿರ್ಧರಿಸಬಹುದು. ಅಂದರೆ ಮಳೆಯಾಗಲಿದೆ ಎಂದಾದಲ್ಲಿ ನೀರುಣಿಸುವ ಅಗತ್ಯವಿರುವುದಿಲ್ಲ. ಹೀಗೆ ನೀರಿನ ವೆಚ್ಚ ತಗ್ಗಿಸಬಹುದು. ಮಳೆಯಾಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ರಸಗೊಬ್ಬರ, ಕೀಟನಾಶಕ ಸಿಂಪಡಿಸಿ ಅವುಗಳ ವೃಥಾ ಸಿಂಪಡಣೆ ಮಾಡದೇ ವೆಚ್ಚ ಕಡಿಮೆ ಮಾಡಿಕೊಳ್ಳಬಹುದು.

ಕೆಎಸ್‌ಎನ್‌ಡಿಎಂಸಿ ಕೇವಲ ಮಳೆ ಮಾಹಿತಿ ಮಾತ್ರವಲ್ಲದೇ ಮಾಹಿತಿ ತಂತ್ರಜ್ಞಾನದ ಸಮರ್ಥ ಬಳಕೆಯ ಮೂಲಕ ಪ್ರಾಕೃತಿಕ ವಿಕೋಪ ಕುರಿತು ಮುನ್ಸೂಚನೆ ನೀಡುತ್ತದೆ.

ಕೆಎಸ್‌ಎನ್‌ಡಿಎಂಸಿಯ ಅಂದಿನ ನಿರ್ದೇಶಕ ಡಾ. ಪ್ರಕಾಶ್ ಅವರ ಸತತ ಪರಿಶ್ರಮದ ಫಲವಾಗಿ ಮಳೆ ಮಾಹಿತಿ ಹಂಚಿಕೆ ಕಾರ್ಯ ಸಾಧ್ಯವಾಗಿದೆ. ಕೆಎಸ್‌ಎನ್‌ಡಿಎಂಸಿ ವತಿಯಿಂದ ರಾಜ್ಯದ ಎಲ್ಲ ಹೋಬಳಿಗಳಲ್ಲೂ ಮಳೆ ಮಾಪಕ (ರೇನ್ ಗೇಜ್) ಸ್ಥಾಪಿಸಲಾಗಿದೆ. ಜಿಪಿಆರ್‌ಎಸ್ ಆಧಾರಿತ ಸೌರ ಟೆಲಿಮೆಟ್ರಿಕ್ ರೇನ್ ಗೇಜ್ ಅಳವಡಿಸಲಾಗಿದೆ. ರಾಜ್ಯದಲ್ಲಿ ಒಟ್ಟು 6,200 ಮಳೆಮಾಪನ ಕೇಂದ್ರಗಳಿವೆ. ಬದ್ಧತೆ ಹೊಂದಿರುವ ಉತ್ತಮ ಸಾಂಸ್ಥಿಕ ವ್ಯವಸ್ಥೆಯ ಇಂತಹ ಪ್ರಯತ್ನ ದೇಶದಲ್ಲಿ ಇದೇ ಮೊದಲು. ಮಳೆ, ಪ್ರವಾಹದ ನಂತರ ಪರಿಹಾರ ಕಾರ್ಯಕ್ಕೆಗೊಳ್ಳುವುದಕ್ಕಿಂತ ಆ ಪರಿಸ್ಥಿತಿಯನ್ನು ನಿರ್ವಹಿಸುವ ಉದ್ದೇಶದೊಂದಿಗೆ ಕೆಎಸ್‌ಎನ್‌ಡಿಎಂಸಿ ಯು ಕಾರ್ಯೋನ್ಮುಖವಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಶ್ರೀನಿವಾಸ ರೆಡ್ಡಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಒರಿಸ್ಸಾ, ಬಿಹಾರ, ಉತ್ತರಾಖಂಡ್ ರಾಜ್ಯಗಳು ರಾಜ್ಯದ







ಸಹಾಯವಾಣಿ ಸೇವೆಯನ್ನು ತಮ್ಮ ರಾಜ್ಯಗಳಲ್ಲೂ ಅಳವಡಿಸಿಕೊಳ್ಳಲು ಉತ್ಸುಕತೆ ಹೊಂದಿದ್ದು ಆ ರಾಜ್ಯದ ಪ್ರತಿನಿಧಿಗಳು ಬೆಂಗಳೂರಿನ ಕೇಂದ್ರಕ್ಕೆ ಭೇಟಿ ನೀಡಿ ಕಾರ್ಯವಿಧಾನದ ಮಾಹಿತಿ ಪಡೆದಿರುವುದು ಈ ಸೇವೆ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎನ್ನುತ್ತಾರೆ.

ಎಲ್ಲಾ ಹೋಬಳಿಗಳಲ್ಲಿ ಸ್ಥಾಪಿತವಾಗಿರುವ ಜಿಪಿಆರ್‌ಎಸ್ ಟವರ್ ಗಳಲ್ಲಿ ಸಂಗ್ರಹವಾಗುವ ಮಾಹಿತಿ ಅಂತರ್ಜಾಲದ ಮೂಲಕ ಸಂಸ್ಥೆಯ ಸರ್ವರ್‌ಗೆ ಲಭ್ಯವಾಗುತ್ತದೆ. ಈ ಮೂಲಕ ವರದಿ, ನಕ್ಷೆಗಳನ್ನು ಸಿದ್ಧಪಡಿಸಿ ರೈತರಿಗೆ ಹವಾಮಾನ ಮತ್ತಿತರ ಅಗತ್ಯ ಮಾಹಿತಿ ನೀಡಲಾಗುತ್ತದೆ. ಉಪಗ್ರಹ ಆಧಾರಿತ ಹವಾಮಾನ ನಿಗಾ ಕೇಂದ್ರ ಕೂಡ ಸ್ಥಾಪಿಸಲಾಗಿದ್ದು, ಇದು ಪ್ರವಾಹ ಮೊದಲಾದ ಪ್ರಾಕೃತಿಕ ವಿಕೋಪ ಕುರಿತಂತೆ ಮುನ್ನೆಚ್ಚರಿಕೆ ನೀಡುವಲ್ಲೂ ಸಹಕಾರಿಯಾಗಿದೆ. ಹೀಗಾಗಿ ಇದು ರೈತರಿಗೆ ಮಾತ್ರವಲ್ಲದೇ ಮೀನುಗಾರರು, ಕೈಗಾರಿಕೆಗಳು, ಸಾರ್ವಜನಿಕರಿಗೂ ನೆರವಾಗಿದೆ.

ಪ್ರಗತಿಪರ ರೈತರು ವೈಜ್ಞಾನಿಕ ಮಾಹಿತಿ ಆಧರಿಸಿ ಕೃಷಿ ಕಾರ್ಯದಲ್ಲಿ ನಿರತರಾಗಿದ್ದು ಉತ್ತಮ ಇಳುವರಿ ಪಡೆಯುತ್ತಿದ್ದಾರೆ, ಮತ್ತು ವೆಚ್ಚ ಕೂಡ ತಗ್ಗಿದೆ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ. ಶೇ 63 ರಷ್ಟು ರೈತರು ನಿಖರ ಹವಾಮಾನ ಮುನ್ಸೂಚನೆ ದೊರೆತಿದೆ ಎಂದು ತಿಳಿಸಿರುವುದಾಗಿ ಬೆಂಗಳೂರಿನ ಜೈವಿಕ ಆರ್ಥಿಕತೆ ಮತ್ತು ಪ್ರಾಕೃತಿಕ ಸಂಪನ್ಮೂಲ ಕೇಂದ್ರದ (ಐಎಸ್‌ಇಸಿ) ಸಹಾಯಕ ಪ್ರಾಧ್ಯಾಪಕ ಎ.ವಿ.ಮಂಜುನಾಥ್ ನೇತೃತ್ವದಲ್ಲಿನ "ಕೃಷಿಯಲ್ಲಿ ವರುಣ ಮಿತ್ರನ ಆರ್ಥಿಕ ಪರಿಣಾಮ" ಕುರಿತ ಅಧ್ಯಯನ ತಂಡ ಹೇಳಿದೆ.

ವರುಣ ಮಿತ್ರ ಮಾಹಿತಿ ಆಧರಿಸಿ ಕೃಷಿ ಚಟುವಟಿಕೆ ಕೈಗೊಂಡಿರುವುದರಿಂದ ವೆಚ್ಚ ತಗ್ಗಿದೆ ಎಂದು ಶೇ 49 ರಷ್ಟು ರೈತರು ಅಭಿಪ್ರಾಯಪಟ್ಟಿದ್ದಾರೆ. ಶೇ 50 ರಷ್ಟು ರೈತರು ಇಳುವರಿ ಹೆಚ್ಚಾಗಿದೆ ಎಂದು ಹೇಳಿದರೆ ಶೇ 53 ರಷ್ಟು ರೈತರು







downloaded from: www.kpscvaani.com



ತಮ್ಮ ನಿವ್ವಳ ಆದಾಯ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ಕೊಯ್ಲು ಸಮಯದಲ್ಲಿ ಮಳೆಯಾದಲ್ಲಿ ಅಡಿಕೆಯ ಗುಣಮಟ್ಟ ಮತ್ತು ಇಳುವರಿ ಕಡಿಮೆಯಾಗುವ ಹಿನ್ನೆಲೆಯಲ್ಲಿ ಅಡಿಕೆ ಬೆಳೆಗಾರರು ಹೆಚ್ಚಾಗಿ ವರುಣ ಮಿತ್ರ ಸೇವೆ ಬಳಸಿಕೊಂಡಿದ್ದಾರೆ. ಹವಾಮಾನ ಮಾಹಿತಿಯಿಂದಾಗಿ ಕಾಫಿ ಬೆಳೆಗಾರರಿಗೆ ಎಕರೆಗೆ 6,273 ರೂ ವೆಚ್ಚ ತಗ್ಗಿದೆ. ಅಡಿಕೆ ಬೆಳೆಗಾರರಿಗೆ ಎಕರೆಗೆ 2,571 ರೂ ವೆಚ್ಚ ತಗ್ಗಿದೆ. ಹಾಗೆಯೇ ಟೊಮಾಟೋ ಬೆಳೆಗೆ ಎಕರೆಗೆ 2,218 ಹಾಗೂ ಮಾವಿಗೆ ಎಕರೆಗೆ 1,268 ರೂ ವೆಚ್ಚ ತಗ್ಗಿದೆ. ಮಳೆ ಆಧರಿಸಿ ರೈತರು ರಸಗೊಬ್ಬರ, ಕೀಟನಾಶಕ ಸಿಂಪಡಿಸಿದ ಹಿನ್ನೆಲೆಯಲ್ಲಿ ಈ ವೆಚ್ಚ ತಗ್ಗಿದೆ. ಮಳೆ ಮುನ್ಸೂಚನೆ ದೊರೆತು ಬೆಳೆಗೆ ನೀರುಣಿಸದಿರುವುದರಿಂದ ನೀರಿನ ವೆಚ್ಚ ತಗ್ಗಿದೆ, ಜೊತೆಗೆ ಸಂಪನ್ಮೂಲದ ಸಮರ್ಥ ಬಳಕೆಯೂ ಆದಂತಾಗಿದೆ ಎಂದು ಮಂಜುನಾಥ್ ವಿವರಿಸಿದ್ದಾರೆ.

ಮಳೆ ಕುರಿತು ಮುನ್ಸೂಚನೆ ದೊರೆತು ರೈತರಿಗೆ ಒಂದು ಎಕರೆಗೆ ಸರಾಸರಿ 5,106 ರೂ ಲಾಭವಾಗಿದೆ ಎಂದೂ ಸಹ ಐಎಸ್‌ಇಸಿ ಅಧ್ಯಯನ ತಿಳಿಸಿದೆ. ಒಟ್ಟಾರೆಯಾಗಿ 500 ಕೋಟಿ ರೂಪಾಯಿ ಉಳಿತಾಯವಾಗಿದೆ ಎಂದು ಅಧ್ಯಯನ ತಿಳಿಸಿದೆ. ಇದು ವೈಯಕ್ತಿಕ ಆರ್ಥಿಕ ಪ್ರಗತಿ ಜೊತೆಗೆ ರಾಜ್ಯದ ಆರ್ಥಿಕ ಪ್ರಗತಿಗೂ ಸಹಕಾರಿಯಾಗಿದೆ. ಈ ಅಧ್ಯಯನಕ್ಕೆ ಒಂಭತ್ತು ಜಿಲ್ಲೆಗಳ 1,350 ರೈತರನ್ನು ಒಳಪಡಿಸಲಾಗಿತ್ತು.

ವರುಣ ಮಿತ್ರದಲ್ಲಿ ಕೇವಲ ಯಾವಾಗ ಮಳೆಯಾಗಲಿದೆ ಎಂಬ ಬಗ್ಗೆ ಮಾಹಿತಿ ಜೊತೆಗೆ ತೇವಾಂಶ, ಆರ್ದ್ರತೆ ಮೊದಲಾದ ಮಾಹಿತಿ ಸಹ ನೀಡಲಾಗುತ್ತದೆ. ಈ ಮೂಲಕ ಹವಾಗುಣ ಹೇಗಿರಲಿದೆ ಎಂದು ತಿಳಿಯಬಹುದಾಗಿದ್ದು ಇದು ಬಿತ್ತನೆಗೆ ಸಹಕಾರಿಯಾಗಲಿದೆ.

ಇದು ಗಣಕಯಂತ್ರ ಆಧಾರಿತ ಮಾಹಿತಿ ವ್ಯವಸ್ಥೆ ಅಲ್ಲ. ರೈತರು ಹಾಗೂ ಸಿಬ್ಬಂದಿ ನಡುವೆ ನೇರ ಸಂವಹನ ಸಾಧ್ಯವಿರುವುದರಿಂದ ರೈತರು ತಮಗೆ ಬೇಕಾದ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದಾಗಿದೆ.

ಪ್ರತಿ ದಿನ ಸುಮಾರು ಸರಾಸರಿ ಏಳು ಸಾವಿರ ರೈತರು ವರುಣ ಮಿತ್ರ ರೈತ ಸಂಪರ್ಕ ಕೇಂದ್ರಕ್ಕೆ ಕರೆ ಮಾಡಿ ಮಾಹಿತಿ ಪಡೆಯುತ್ತಿದ್ದಾರೆ. ಅವರು ತಮ್ಮ ಹಳ್ಳಿಯ ಇತರ ರೈತರಿಗೂ ಮಾಹಿತಿ ನೀಡುತ್ತಿದ್ದಾರೆ. ದಿನದಿಂದ ದಿನಕ್ಕೆ ಈ ಸೌಲಭ್ಯ ಬಳಸಿಕೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚಿದೆ.

**ಆಲಿಕಲ್ಲು ಮಳೆಯ ಮುನ್ಸೂಚನೆ:**

ಮಳೆಯಾಗಲಿದೆ ಎಂಬ ಮಾಹಿತಿಯನ್ನೇನೋ ಈ ಸಹಾಯವಾಣಿ ಮೂಲಕ ತಿಳಿಯಬಹುದು. ಗಾಳಿ ಬೀಸುವ ವೇಗ, ದಿಕ್ಕನ್ನೂ ತಿಳಿಯಬಹುದು. ಆದರೆ ಆಲಿಕಲ್ಲು ಮಳೆಯಾಗಲಿದೆಯೇ ಎಂಬ ಬಗ್ಗೆ ತಿಳಿಸುವ ತಂತ್ರಜ್ಞಾನ ಇನ್ನೂ ರೂಪುಗೊಂಡಿಲ್ಲ. ಆಲಿಕಲ್ಲು ಮಳೆ ಮುನ್ಸೂಚನೆ ದೊರತರೆ ತೋಟಗಾರಿಕಾ ಬೆಳೆ ರಕ್ಷಣೆ ಹಾಗೂ ಪರಿಹಾರ ಕ್ರಮ ಕೈಗೊಳ್ಳಬಹುದಾಗಿದೆ. ಹೀಗಾಗಿ ಈ ಮಾಹಿತಿ ಮೂಲಕ ರೈತರು ಇನ್ನಷ್ಟು ಮುಂಜಾಗ್ರತೆ ವಹಿಸುವಂತಾಗುವ ನಿಟ್ಟಿನಲ್ಲಿ ಕೆಎಸ್‌ಎನ್‌ಡಿಎಂಸಿ ಮತ್ತು ಅಲಹಾಬಾದ್ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ – ಅಲಹಾಬಾದ್) ಜಂಟಿ ಅಧ್ಯಯನ ಕೈಗೊಂಡಿದೆ. ಆಲಿಕಲ್ಲು ಮಳೆ ಮುನ್ಸೂಚನೆ ನೀಡುವ ತಂತ್ರಜ್ಞಾನ ಶೀಘ್ರವೇ ರೂಪುಗೊಂಡು ರೈತರ ಬಾಳಿನಲ್ಲಿ ಆಶಾಕಿರಣ ಮೂಡಲಿ.

ಗ್ರಾಮೀಣ ಭಾಗಗಳಲ್ಲಿ ಸಾಕ್ಷರತೆ ಪ್ರಮಾಣ ಕಡಿಮೆ ಇರುವುದು ಈ ಸೇವೆಗೆ ನಕಾರಾತ್ಮಕ ಅಂಶವಾಗಿದೆ. ಅಂದರೆ ಸಾಕ್ಷರತೆ ಪ್ರಮಾಣ ಹೆಚ್ಚಿದ್ದರೆ ಮೊಬೈಲ್ ಸಂದೇಶ ಓದಿ ಮಾಹಿತಿ ಪಡೆಯಬಹುದು. ಕೆಲವರು ಮೊಬೈಲ್ ತಂತ್ರಜ್ಞಾನದ ಬಳಕೆ ಬಗ್ಗೆ ಅಗತ್ಯ ಜ್ಞಾನ ಹೊಂದಿರುವುದಿಲ್ಲ. ಹೀಗಾಗಿ ಇದರ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಕೆಲವರು ಕರೆ ಮಾಡಿ ಮಾಹಿತಿ ಪಡೆಯುವರಾದರೂ ಇನ್ನು ಕೆಲವರು ಅದಕ್ಕೂ ಮನಸ್ಸು ಮಾಡುವುದಿಲ್ಲ. ಹಾಗೆಯೇ ಎಲ್ಲೆಡೆ ವಿದ್ಯುತ್, ಅಂತರ್ಜಾಲ ಸೌಲಭ್ಯವೂ ಇಲ್ಲ. ಇವೆಲ್ಲಾ ಈ ಸೇವೆಗೆ ತೊಡಕಾಗುವ ಸಾಧ್ಯತೆ ಇದ್ದು, ಇವನ್ನು ನಿವಾರಿಸುವ ಪ್ರಯತ್ನಗಳು ನಡೆಯಬೇಕಿದೆ.

ಗುತ್ತಿಗೆ ಆಧಾರದ ಮೇಲೆ ಬಿತ್ತನೆ ಕಾರ್ಯದಲ್ಲಿ ತೊಡಗಿರುವವರು ಈ ಸೇವೆ ಬಳಸಲು ಮನಸ್ಸು ಮಾಡುವುದಿಲ್ಲ. ಪ್ರದೇಶಾವಾರು ಭಿನ್ನ ಬೇಸಾಯ ಪದ್ಧತಿ ಇದ್ದು ಈ ಬಗ್ಗೆ ಸಹಾಯವಾಣಿ ಇನ್ನಷ್ಟು ಮಾಹಿತಿ ನೀಡುವತ್ತ ಗಮನಹರಿಸಬೇಕಿದೆ.

**ಎಸ್‌ಎಮ್‌ಎಸ್ ಸೌಲಭ್ಯ :**

ಆಸಕ್ತ ರೈತರು ಗ್ರಾಮ, ಹೋಬಳಿ ವಿವರಗಳನ್ನು ಸಂದೇಶದಲ್ಲಿ ನಮೂದಿಸಿ ಕಳುಹಿಸಿದರೆ ದಿನಕ್ಕೆರಡು ಬಾರಿ ಬೆಳಗ್ಗೆ 8.30 ಕ್ಕೆ ಮತ್ತು ಸಂಜೆ 5 ಗಂಟೆಗೆ ಹವಾಮಾನ ಮಾಹಿತಿ ಸಂದೇಶ ರವಾನೆಯಾಗುತ್ತದೆ. ಎಸ್‌ಎಮ್‌ಎಸ್ ಮೂಲಕ ಸುಮಾರು ಹತ್ತು ಲಕ್ಷ ರೈತರಿಗೆ ಮಳೆ ಮಾಹಿತಿ ಸಂದೇಶ ನೀಡಲಾಗುತ್ತಿದೆ.

**ನೋಂದಣಿ :**

ಹವಾಮಾನ ಮಾಹಿತಿ ಪಡೆಯಲು ರೈತರು ನೋಂದಾಯಿಸಿಕೊಳ್ಳುವ ಅಗತ್ಯವಿಲ್ಲ. ಈ ಉಚಿತ ಸೇವೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. ದಿನದ 24 ಗಂಟೆಯೂ ಈ ಸೇವೆ ಲಭ್ಯ. ಸೇವೆ ಉಚಿತವೇ ಹೊರತು ಕರೆ ದರ ಉಚಿತವಲ್ಲ. ಶುಲ್ಕ ರಹಿತ ದೂರವಾಣಿ ಸಂಖ್ಯೆ ಅಲ್ಲ.





**ಸಲಹೆ :** ಕೇವಲ ಮಳೆ, ಗಾಳಿ ಮಾಹಿತಿ ಮಾತ್ರವಲ್ಲ, ಬಿತ್ತನೆ ಸಲಹೆಗಳನ್ನೂ ನೀಡಲಾಗುತ್ತದೆ. ಸಿಬ್ಬಂದಿ ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಾರೆ.

ಬರ ನಿರ್ವಹಣೆಗೆ ರಾಜ್ಯ ಸರ್ಕಾರ 1988 ರಲ್ಲಿಯೇ ಬರಗಾಲ ಉಸ್ತುವಾರಿ ಕೋಶ (ಡ್ರಾಟ್ ಮಾನಿಟರಿಂಗ್ ಸೆಲ್) ಅನ್ನು ಸ್ಥಾಪಿಸಿತ್ತು. 2007 ರಲ್ಲಿ ಇದನ್ನು ಕರ್ನಾಟಕ ರಾಜ್ಯ ವಿಪತ್ತು ನಿಗಾ ಕೇಂದ್ರ ಎಂದು ಮರು ನಾಮಕರಣ ಮಾಡಲಾಯಿತು. 2010 ರ ಅಕ್ಟೋಬರ್ 1 ಒಂದು ಕೆಎಸ್‌ಎನ್‌ಡಿಎಂಸಿ ವರುಣ ಮಿತ್ರ ಸೇವೆಗೆ ಚಾಲನೆ ದೊರೆಯಿತು. ಈ ಸಹಾಯವಾಣಿ ರೈತರಿಗೆ ಅನುಕೂಲಕರವಾಗಿದೆ.


ಈ ಬಾರಿ ದುರ್ಬಲ ಮುಂಗಾರು ಎಂದು ಹೇಳಲಾಗಿದ್ದು ಹವಾಮಾನ ಮಾಹಿತಿ ಆಧರಿಸಿ ಕೃಷಿಕರು ಮುಂಜಾಗ್ರತ ಕ್ರಮ ಕೈಗೊಂಡು ನಷ್ಟ ತಗ್ಗಿಸಲು ಈ ಸೇವೆಯನ್ನು ರೈತರು ಇನ್ನಷ್ಟು ಹೆಚ್ಚಾಗಿ ಬಳಸಿಕೊಳ್ಳಬಹುದಾಗಿದೆ. ಈ ವರ್ಷ ಕರ್ನಾಟಕ ಸೇರಿದಂತೆ ದೇಶದ ಹಲವೆಡೆ ಬರ ಪರಿಸ್ಥಿತಿ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮತ್ತು ಸ್ಕೈಮೆಟ್ ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವ ವರದಿ ಸಹ ತಿಳಿಸಿದೆ. ಹೀಗಾಗಿ ಹವಾಗುಣದ ಮಾಹಿತಿ ಪಡೆದು ಕೃಷಿ ಚಟುವಟಿಕೆಯಲ್ಲಿ ತೊಡಗುವುದು ಅತ್ಯಂತ ಸೂಕ್ತ.

ಮಳೆ, ಉಷ್ಣಾಂಶ ಹೀಗೆ ಹವಾಮಾನ ಮಾಹಿತಿ ಮುನ್ಸೂಚನೆ ಪಡೆದು ರೈತರು ಅದಕ್ಕೆ ತಕ್ಕಂತೆ ಬಿತ್ತನೆ ಕಾರ್ಯ ಕೈಗೊಂಡು ಉತ್ತಮ ಇಳುವರಿ ಪಡೆಯಬಹುದಾಗಿದೆ. ಜೊತೆಗೆ ಮಳೆಯಾಗಲಿದೆ ಎಂಬ ಬಗ್ಗೆ ಮಾಹಿತಿ ತಿಳಿದು ಬೆಳೆಗೆ ನೀರುಣಿಸದೇ ನೀರಿನ ಸಮರ್ಥ ಬಳಕೆ ಮಾಡಬಹುದಾಗಿದೆ. ರಸಗೊಬ್ಬರ, ಕೀಟನಾಶಕ ಬಳಕೆಗೆ ಸೂಕ್ತ ಸಮಯ ನಿರ್ಧರಿಸಬಹುದಾಗಿದ್ದು ಬೆಳೆ ವೆಚ್ಚ ಕೂಡ ತಗ್ಗಿಸಬಹುದಾಗಿದೆ. ವರುಣ ಮಿತ್ರನ ಮಾಹಿತಿ ಆಧರಿಸಿ ರೈತರು ತಮ್ಮ ಬಿತ್ತನೆ ಕಾರ್ಯವನ್ನು ಮುಂದೂಡಿದ್ದಾರೆ ಅಥವಾ ಹಿಂದೂಡಿದ್ದಾರೆ. ನೀರಾವರಿಗೂ ಮಳೆ ಮಾಹಿತಿ ಪಡೆದಿದ್ದಾರೆ. ಹೀಗೆ ವರುಣ ಮಿತ್ರ ಸಹಾಯವಾಣಿ ಕೃಷಿ ಚಟುವಟಿಕೆಗೆ ಸಕಾಲದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿಸಿದೆ. ಇದು ನಿಜಕ್ಕೂ ರೈತನ ಪಾಲಿಗೆ ಆಪ್ತ ಮಿತ್ರ.





downloaded from: www.kpscvaani.com



# ಯೋಗದಿಂದ ಸುಯೋಗ





ಡಾ. ಗುರುರಾಜ ಪೋಶೆಟ್ಟಿಹಳ್ಳಿ

**ಯೋಗ ಭಾರತದ ಸಂಸ್ಕೃತಿಯಷ್ಟೇ ಅಲ್ಲ. ಸನಾತನ ಕಾಲದಿಂದ ನಮ್ಮ ಹಿರಿಯರು ಮುಂದಿನ ಪೀಳಿಗೆಗೆ ಅವಶ್ಯಕವಿರಲಿ ಎಂಬ ಸದುದ್ದೇಶದಿಂದ ಬಿಟ್ಟು ಹೋಗಿರುವ ಸಂಪತ್ತು. ಸಾವಿರಾರು ವರ್ಷಗಳ ಹಿಂದೆಯೇ ಈ ಯೋಗದ ಮಹತ್ವವನ್ನು ಅರಿತ ನಮ್ಮ ಋಷಿಮುನಿಗಳು ಯಾವುದೇ ರೋಗ ರುಜಿನಗಳಿಲ್ಲದೇ ಶತಾಯುಷಿಯಾಗಿ ಬಾಳಿ ಬದುಕಿ ತೋರಿಸಿದ್ದಾರೆ.**

**ಯೋ**ಗಾಸನಗಳ ಪಿತಾಮಹ ಪತಂಜಲಿ ಮಹರ್ಷಿಗಳು ಮನುಕುಲಕ್ಕೆ ನೀಡಿರುವ ಅಭೂತಪೂರ್ವ ಕೊಡುಗೆಯಾಗಿದ್ದು, ಸಾವಿರಾರು ವರ್ಷಗಳ ಹಿಂದೆಯೇ ಚಿಂತಿಸಿ ಮುಂದಿನ ಪೀಳಿಗೆಗೆ ಒದಗಿಬರಬಹುದಾದ ಕಾಯಿಲೆಗಳಿಗೆ ಯೋಗದ ಮೂಲಕ ಉತ್ತರ ಕೊಟ್ಟಿದ್ದಾರೆ.

ಇಂದಿನ ದಿನಗಳಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಹೋದರೂ ಸಹ ತಪ್ಪದ ಒತ್ತಡಮಯ ಜೀವನದಲ್ಲಿ ಜನರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ಮಾಡುವುದಿರಲಿ, ಮೂರು ಹೊತ್ತು ಸರಿಯಾಗಿ ತಿನ್ನಲೂ ಕೂಡ ಆಗದಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ದುಡಿಮೆಯೇ ಜೀವನ ಎಂಬಂತಾಗಿದ್ದಾರೆ. ಇದರಿಂದಾಗಿ ತಮಗರಿವಿಲ್ಲದೆ ಮಾನಸಿಕ ಕಾಯಿಲೆಗಳು ಸೇರಿದಂತೆ ದೈಹಿಕ ಕಾಯಿಲೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದಾರೆ. ಶತಾಯುಷಿಗಳಾಗಿ ಬಾಳಬೇಕಿದ್ದ ಜನರು 60 ರಿಂದ 65 ವರ್ಷಕ್ಕೆ ಹೃದಯಾಘಾತಗಳಂತಹ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗುತ್ತಿರುವುದು ವಿಷಾದಕರ ಸಂಗತಿ. ಅಲ್ಲದೆ ಹುಟ್ಟುತ್ತಿರುವ ಮಕ್ಕಳು ಅಪೌಷ್ಟಿಕ ಸಮಸ್ಯೆಯಿಂದ, ಯುವಕರು ದೌರ್ಬಲ್ಯತೆಯಿಂದ ಬಳಲುತ್ತಿದ್ದು, ದುರ್ಬಲ ಯುವ ಸಮಾಜದ ನಿರ್ಮಾಣಕ್ಕೆ ಕಾರಣವಾಗುತ್ತಿದ್ದಾರೆ.

ವಿಶ್ವದ ಆರೋಗ್ಯ ದೃಷ್ಟಿಯಿಂದ ಯೋಗವನ್ನು ಮತ್ತು ಇದರ ಮಹತ್ವವನ್ನು ವಿಶ್ವದಾದ್ಯಂತ ಸಾರಲು ಹೊರಟಿರುವುದು ಒಂದು ಉತ್ತಮ ಯೋಜನೆಯಾಗಿದೆ. ಪ್ರತಿಯೊಂದು ಧರ್ಮದ ಜನರು ಯೋಗದ ಮಹತ್ವವನ್ನು ಅರಿತು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯಯುಕ್ತ ಸಮಾಜ ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ಯೋಗಾಭ್ಯಾಸವನ್ನು ವಿಶ್ವಕ್ಕೆ ಭಾರತ ದೇಶ ನೀಡಿದ ಅದ್ಭುತ ಕಾಣಿಕೆ. ಕ್ರಿ.ಪೂ 3 ನೇ ಶತಮಾನದ ಹಿಂದಿನ ಇತಿಹಾಸ ಹೊಂದಿರುವ ಯೋಗದಿಂದ ವ್ಯಕ್ತಿಯ ದೈಹಿಕ, ಮಾನಸಿಕ,



ಭಾವನಾತ್ಮಕ, ಮತ್ತು ಆಧ್ಯಾತ್ಮಿಕ ಉನ್ನತಿಗೆ ಸಹಕಾರಿಯಾಗಲಿದೆ.

ಜೂನ್ 21 ರಂದು ಅಂತರಾಷ್ಟ್ರೀಯ ಯೋಗ ದಿನವೆಂದು ಸಂಯುಕ್ತ ರಾಷ್ಟ್ರ ಸಂಸ್ಥೆಯು 2015 ರಲ್ಲಿ ಘೋಷಿಸಿತು. ಜೂನ್ 21 ದೀರ್ಘಕಾಲ ಹಗಲು ಹೊಂದಿರುವ ದಿನ. ಅಲ್ಲದೆ ಈ ಕಾಲದಲ್ಲಿ ಅನೇಕ ರಾಷ್ಟ್ರಗಳಲ್ಲಿ ಜಡತ್ವ ಕಳೆದು ಹೊಸ ಹುರುಪು ತುಂಬುವ ಕಾಲ. ಹಾಗಾಗಿ ಈ ದಿನವನ್ನು ಯೋಗ ದಿನಾಚರಣೆಗೆ ಸೂಕ್ತವೆಂದು ಆಯ್ಕೆ ಮಾಡಲಾಗಿದೆ. ಅಂದು ಸುಮಾರು 177 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತದೆ.


ಯೋಗ ವ್ಯಾಯಾಮ ಮಾತ್ರವಲ್ಲದೆ ನಮ್ಮೊಂದಿಗೆ ವಿಶ್ವ ಹಾಗೂ ಪ್ರಕೃತಿಯ ಜೊತೆಗೆ ಏಕತೆಯ ಅರ್ಥವನ್ನು ಕಂಡುಹಿಡಿಯಲು ನೆರವಾಗುತ್ತದೆ. ಪ್ರಕೃತಿ ಮತ್ತು ಮನುಷ್ಯನ ನಡುವೆ ಸಾಮರಸ್ಯವನ್ನುಂಟು ಮಾಡುತ್ತದೆ. ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸುವ ವಿಶೇಷ ಕಲೆಯಾಗಿದೆ.

ಪ್ರಾಣಾಯಾಮ ಯೋಗದ ಒಂದು ಭಾಗ. ಇದು ಉಸಿರಾಟ ಮತ್ತು ವಿಶ್ರಾಂತಿಯನ್ನೊಳಗೊಂಡ ಪ್ರಕ್ರಿಯೆಯಾಗಿದ್ದು, ದೇಹಾರೋಗ್ಯಕ್ಕೆ ಇದರಿಂದ ಹೆಚ್ಚಿನ ಲಾಭವಿದೆ. ಪ್ರಾಣಾಯಾಮ ಎನ್ನುವುದು 'ಪ್ರಾಣ' ಮತ್ತು 'ಆಯಾಮ'ದ ಸಂಗಮ. ಪ್ರಾಣವೆಂದರೆ ಶಕ್ತಿ ಮತ್ತು ಆಯಾಮವೆಂದರೆ ನಿಯಂತ್ರಣವೆಂದರ್ಥ.


ಪ್ರಾಣಾಯಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕವು ಶ್ವಾಸಕೋಶಕ್ಕೆ ಒದಗುತ್ತದೆ. ಹಾಗೆಯೇ ಅಷ್ಟೇ ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಮತ್ತು ಉಸಿರಾಟದಿಂದ 500 ಕ್ಯೂಬಿಕ್ ಸೆಂ. ಮೀ. ಗಾಳಿಯನ್ನು ತೆಗೆದುಕೊಳ್ಳುತ್ತಾನೆ. ಆದರೆ ಪ್ರಾಣಾಯಾಮದಲ್ಲಿ ಸುಮಾರು 3000–4000 ಕ್ಯೂಬಿಕ್ ಸೆಂ.ಮೀ. ಗಾಳಿ ತೆಗೆದುಕೊಳ್ಳುತ್ತಾನೆ. ಸರಿಯಾಗಿ ಪ್ರಾಣಾಯಾಮ ಅಭ್ಯಾಸ ಮಾಡಿಕೊಂಡರೆ ಆಯಸ್ಸು ಹೆಚ್ಚಿಸಿಕೊಳ್ಳಬಹುದು. ಉಸಿರಾಟವನ್ನು ನಮ್ಮ ಇಚ್ಛೆಗೊಳಪಡಿಸಿ ಹತೋಟಿಗೆ ತರುವುದೇ ಪ್ರಾಣಾಯಾಮ. ಯೋಗದಲ್ಲಿ 8 ಅಂಗಗಳನ್ನು ನಿರ್ದೇಶಿಸಿ, ಅದಕ್ಕೊಂದು ವೈಜ್ಞಾನಿಕ ಚೌಕಟ್ಟು ಹಾಕಿದ ಋಷಿಗಳು ಹೇಳುವಂತೆ ಮನಸ್ಸಿನ ಚಂಚಲತೆ, ಗೊಂದಲಗಳನ್ನು ನಿವಾರಿಸುವ ಕ್ರಮಬದ್ಧ ಉಪಾಯವೇ 'ಪ್ರಾಣಾಯಾಮ'. ಪ್ರಾಣ ವಾಯುವು ಶ್ವಾಸಕೋಶಕ್ಕೆ ಸೇರಿ ಹೃದಯ ಭಾಗದಲ್ಲಿ ಚಲಿಸಿ ಆಮ್ಲಜನಕ ಪೂರೈಕೆ ಮಾಡಿ ಉಸಿರಾಟವನ್ನು ನಿಯಂತ್ರಿಸುತ್ತದೆ. ಆಹಾರ ಸ್ವೀಕಾರ ರಕ್ತ ಮತ್ತು ನಾಡಿ ಶುದ್ಧೀಕರಣ ಮಾಡುತ್ತದೆ.

- ಪ್ರತಿ ದಿನ ಒಂದು ಗಂಟೆ ಯೋಗಾಭ್ಯಾಸ ಮಾಡುವುದರಿಂದ ನೀವು ಈಗಿರುವ ವಯಸ್ಸಿಗಿಂತ 5 ವರ್ಷ ಕಡಿಮೆ ವಯಸ್ಸಿನವರಂತೆ ಕಾಣುತ್ತೀರಿ. ನಿಮ್ಮ ಚರ್ಮದ ಅಂದವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಯೋಗ ಸಹಕರಿಸುವುದಲ್ಲದೇ, ವಯಸ್ಸಾದಾಗ ಬೇಗನೇ ಚರ್ಮ ಸುಕ್ಕುಗಟ್ಟುವುದನ್ನು ನಿಯಂತ್ರಿಸಬಹುದು.
- ಸಕಾರಾತ್ಮಕ ಯೋಚನೆಗಳನ್ನು ನಿಮ್ಮೊಳಗೆ ತುಂಬಲು ಯೋಗ ಅತ್ಯಂತ ಪರಿಣಾಮಕಾರಿಯಾದ ಮಾರ್ಗವಾಗಿದೆ.
- ವ್ಯಾಯಾಮದಿಂದ ದೇಹದ ಆರೋಗ್ಯವನ್ನಷ್ಟೇ ಕಾಯ್ದುಕೊಳ್ಳಬಹುದು. ಆದರೆ ಯೋಗದಿಂದ ದೇಹ ಮತ್ತು ಮನಸ್ಸುಗಳೆರಡೂ ಆರೋಗ್ಯವಾಗಿರುತ್ತವೆ.









- ನಿಮ್ಮ ಜೀವನಶೈಲಿಯನ್ನು ಆಕರ್ಷಕವಾಗಿ ಇಟ್ಟುಕೊಳ್ಳಬೇಕಾದರೆ ದಿನಕ್ಕೊಂದು ಗಂಟೆ ಯೋಗ ಮಾಡಿ.
- ನಿರಂತರ ಯೋಗಾಭ್ಯಾಸವು ನಿಮ್ಮ ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಹಾಗೂ ಚೈತನ್ಯದಿಂದಿರಲು ಸಹಕರಿಸುತ್ತದೆ.

**ಟ್ರೆಂಡ್ ಆಗಿ ಬದಲಾದ ಯೋಗ:**

ಯೋಗದ ಮಹತ್ವವನ್ನು ವಿಶ್ವವೇ ಅರಿತು ಗುರುತಿಸಿದೆ. ಸರ್ವ ರೋಗಕ್ಕೂ ಯೋಗದಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂಬ ಸತ್ಯವೂ ಸಾಬೀತಾಗಿದೆ. ಇತ್ತೀಚೆಗೆ ಯೋಗಕ್ಕೆ ಹೆಚ್ಚು ಮಹತ್ವ ಬಂದಿದೆ. ಯೋಗ ಮಾರ್ಗದ ಮೂಲಕ ಆರೋಗ್ಯವನ್ನು ಹುಡುಕುವವರ ಸಂಖ್ಯೆಯೂ ಹೆಚ್ಚುತ್ತಿದೆ. ನಿಜ ಹೇಳಬೇಕೆಂದರೆ ಯೋಗ ಮಾಡುವುದು ಇಂದು ಯುವಜನತೆಯಲ್ಲಿ ಒಂದು ಟ್ರೆಂಡ್ ಆಗಿ ಬದಲಾಗುತ್ತಿರುವುದನ್ನು ಸ್ವಾಗತಿಸಬೇಕು. ಯೋಗದಿಂದ ಸಕಾರಾತ್ಮಕ ಯೋಚನೆಗಳು ಮೂಡುತ್ತವೆ. ಮನಸ್ಸನ್ನು ಬದಲಾಯಿಸುವ ಶಕ್ತಿ ಯೋಗಕ್ಕಿದೆ.

**ಸರ್ವ ರೋಗ ನಿವಾರಕ:**

ಧ್ಯಾನದತ್ತ ತಮ್ಮ ಗಮನವನ್ನು ಕೇಂದ್ರೀಕರಿಸಲು ನೆರವಾಗಲೆಂದು ಋಷಿ–ಮುನಿಗಳು ಬಳಸುತ್ತಿದ್ದ ಯೋಗಾಭ್ಯಾಸವು ಇಂದು 'ಸರ್ವರೋಗ ನಿವಾರಕ ವಿಜ್ಞಾನ'ವಾಗಿ ಬೆಳೆದು ನಿಂತಿದೆ. ಆಧುನಿಕ ವೈದ್ಯ ವಿಜ್ಞಾನಕ್ಕೆ ಸವಾಲಾಗಿರುವ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯಬೇನೆ, ರಕ್ತನಾಳಗಳಲ್ಲಿ ತೊಡಕು, ಬೊಜ್ಜು, ಅಸ್ತಮಾ, ಶ್ವಾಸನಾಳಗಳ ಕಾಯಿಲೆ, ಬಿಳಿತೊನ್ನು, ಖಿನ್ನತೆ, ಪಾರ್ಕಿನ್ಸನ್ ಕಾಯಿಲೆ, ನಿದ್ರಾಹೀನತೆ, ತಲೆಶೂಲೆ, ಥೈರಾಯ್ಡ್, ಸಂಧಿವಾತ, ಕತ್ತು ನೋವು, ಹೆಪಟೈಟಿಸ್, ಮೂತ್ರ ಪಿಂಡಗಳ ವೈಫಲ್ಯ, ಕ್ಯಾನ್ಸರ್, ಯಕೃತ್ತಿನ ವೈಫಲ್ಯ, ಅಜೀರ್ಣತೆ, ಮಲಬದ್ಧತೆ, ಆಮ್ಲೀಯತೆ ಇವೇ ಮುಂತಾದ ಮಾರಕ ರೋಗಗಳಿಂದ ಬಳಲುತ್ತಿರುವ ಸಹಸ್ರಾರು ಜನರಿಗೆ ಚಿಕಿತ್ಸೆ ನೀಡುವಲ್ಲಿ ಯೋಗ ಪರಿಣಾಮಕಾರಿಯಾಗಿದೆ.



downloaded from: www.kpscvaani.com



# ಜೇನು ಅಭಿವೃದ್ಧಿಗೆ ಸಂಘ ಕಟ್ಟಿದ ರೈತರು

ಬಸವರಾಜ ಎಸ್ ಬೋದೂರು



ಬಿಸಿಲುನಾಡು, ಬರಗಾಲ ಪ್ರದೇಶ ಎಂದೇ ಹೆಸರಾಗಿರುವ ಕೊಪ್ಪಳ ಜಿಲ್ಲೆಯಲ್ಲೀಗ ಜೇನು ನೊಣಗಳ ಝೇಂಕಾರನಾದ ಕೇಳಿಸಲಾರಂಭಿಸಿದೆ. ಹೇಗೆ ಅಂತಿರಾ? ಜಿಲ್ಲೆಯ ಗಂಗಾವತಿ ತಾಲೂಕಿನ ಬಸಾಪಟ್ಟಣದ ರೈತ ಅನಿಲ್ ಕುಮಾರ್ ಎಂಬಾತ ಜೇನು ಕೃಷಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಗಂಗಾವತಿ ಎಂದ ಕೂಡಲೇ ಭತ್ತದನಾಡು ಎಂಬ ಮಾತು ಬರುತ್ತದೆ. ಆದರೆ, ಅನಿಲ್ ಕುಮಾರ್ ತೋಟಗಾರಿಕೆ ಇಲಾಖೆಯ ಸಹಾಯದಿಂದ ಸಾವಯವ ಕೃಷಿ ಹಾಗೂ ಸಮಗ್ರ ಕೃಷಿ ಬಗ್ಗೆ ಮಾಹಿತಿ ಪಡೆದು ಅದರಂತೆ ಮಾವಿನ ಕೃಷಿ ಮಾಡಿಕೊಂಡಿದ್ದಾರೆ. ಅನೇಕ ತಳಿಯ ಮಾವಿನ ಮರಗಳನ್ನು ಬೆಳಸುವುದರ ಜೊತೆಗೆ ಎರೆಹುಳು ಘಟಕ, ಜೀವಸಾರ ಘಟಕ ರಚಿಸಿಕೊಂಡು ಸಂಪೂರ್ಣ ಸಾವಯವ ತೋಟಗಾರಿಕೆ ಮಾಡಲು ಪಣತೊಟ್ಟು ನಿಂತಿದ್ದಾರೆ.

ಇದರ ಜೊತೆಗೆ ಏನಾದರೊಂದು ಉಪಕಸುಬು ಮಾಡಬೇಕೆಂದು ಆಲೋಚಿಸುತ್ತಿದ್ದಾಗ ಇವರಿಗೆ ಹೊಳೆದಿದ್ದು ಜೇನುಕೃಷಿ. ಕೂಡಲೇ ಮೇಟಿಕರ್ಕಿಯ ಶಾಂತವೀರಯ್ಯ ಎಂಬುವವರಿಂದ ಜೇನು ಕೃಷಿಯ ತರಬೇತಿ ಪಡೆದು ಅವರಿಂದಲೇ 2 ಜೇನು ಪೆಟ್ಟಿಗೆಗಳನ್ನು ಪಡೆದುಕೊಂಡು 2005 ರಲ್ಲಿ ತಮ್ಮ ಮಾವಿನ ತೋಟದಲ್ಲಿ ಜೇನು ಸಾಕಾಣಿಕೆ ಪ್ರಾರಂಭಿಸಿದರು. ನಿರಂತರ ಪರಿಶ್ರಮದಿಂದ ಜೇನು ಕೃಷಿಯಲ್ಲಿ ಯಶಸ್ಸು ಕಂಡು, ತನ್ನಂತೆಯೇ ರೈತರು ಜೇನು ಕೃಷಿಯಲ್ಲಿ ತೊಡಗಬೇಕು ಎಂಬ ಹಂಬಲವನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕೊಪ್ಪಳದ ಕೃಷಿ ವಿಸ್ತರಣಾ ಘಟಕದ ಕೀಟ ತಜ್ಞರಾದ ಡಾ. ಬದರಿ ಪ್ರಸಾದ್ ಅವರ ಮುಂದೆ ವ್ಯಕ್ತಪಡಿಸಿ, ಅವರ ಸಲಹೆ ಮತ್ತು ಸಹಕಾರದಿಂದ ಆಸಕ್ತಿವಹಿಸುವ ರೈತರನ್ನು ಒಂದುಗೂಡಿಸಿಕೊಂಡು "ಸಂಜೀವಿನಿ ಜೇನು ಕೃಷಿಕರ ಸಂಘ"ವನ್ನು 2015 ರಲ್ಲಿ ಕಟ್ಟಿದ್ದಾರೆ.

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಜೇನುಕೃಷಿ ಇರಲಿಲ್ಲ, ಬೇರೆ ಭಾಗಕ್ಕೆ ಹೋಲಿಸಿದರೆ ಕೊಪ್ಪಳ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಜಾಸ್ತಿ ಬೆಳೆಯುತ್ತಾರೆ, ಜೊತೆಗೆ ಸಾಕಷ್ಟು ಪ್ರಮಾಣದಲ್ಲಿ ಬೆಟ್ಟ-ಗುಡ್ಡ, ನಿಸರ್ಗ ಇರುವುದರಿಂದ ಇಲ್ಲಿಯ ಪರಿಸರ ಜೇನು ಕೃಷಿಗೆ ಹೇಳಿ ಮಾಡಿಸಿದ ಜಾಗ. ಹಾಗಾಗಿ ರೈತರಿಗೆ ತೋಟಗಾರಿಕೆ ಬೆಳೆಯ ಜೊತೆಗೆ ಉಪಕಸುಬುಗಳಿರಬೇಕು, ಇದರಿಂದ ಎಲ್ಲಾ ರೈತರಿಗೂ ವೇದಿಕೆ ಸಿಗುವಂತಾಗಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಸಂಜೀವಿನಿ ಜೇನು ಕೃಷಿಕರ ಸಂಘವನ್ನು ಕಟ್ಟಲಾಯಿತು ಎನ್ನುತ್ತಾರೆ ಕೃಷಿ ವಿಸ್ತರಣಾ ಘಟಕದ ಕೀಟ ತಜ್ಞರಾದ ಡಾ. ಬದರಿ ಪ್ರಸಾದ ರವರು.

ಸಂಘದ ಕಾರ್ಯದರ್ಶಿಯಾಗಿರುವ ಅನಿಲ್ ಕುಮಾರ್, ಸಂಘದಲ್ಲಿರುವ ರೈತರಿಗೆ ಜೇನುಕೃಷಿ ಬಗ್ಗೆ ತಾವೇ ತರಬೇತಿ ಕೊಟ್ಟು ಅವರನ್ನು ಸಂಪೂರ್ಣ ಜೇನು ಕೃಷಿಕರನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ. ರೈತರು ಜೇನು ಅಂದಕೂಡಲೇ ಅವು ಚುಚ್ಚುತ್ತವೆ ಎಂದು ಭಯಪಡುತ್ತಾರೆ. ಆದರೆ ಜೇನುನೊಣ ಚುಚ್ಚುವುದು ಆರೋಗ್ಯಕ್ಕೆ ಒಳ್ಳೆಯದು. ಕೀಲು ನೋವಿನಂತಹ ಹಲವಾರು ಖಾಯಿಲೆಗಳು ವಾಸಿಯಾಗುತ್ತವೆ. ಇದು ರೈತರಿಗೆ ಗೊತ್ತಾದರೆ ಅವರಲ್ಲಿರುವ ಭಯ ದೂರವಾಗುತ್ತದೆ ಎನ್ನುತ್ತಾರೆ.

**ಸಂಘದ ಸದಸ್ಯರ ಕಾರ್ಯವೈಖರಿ;**

ಭೂಮಿ ಮೇಲಿಂದ ಜೇನು ನೊಣಗಳು ನಶಿಸಿದ ನಾಲ್ಕೇ ವರ್ಷಗಳಲ್ಲಿ ಮನುಷ್ಯ ಸಂತತಿಯೂ ನಿರ್ನಾಮವಾಗುತ್ತದೆ ಎಂದು ಜಗದ್ವಿಖ್ಯಾತ ಭೌತಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೀನ್ ಅವರ ಮಾತನ್ನು ಗಂಭೀರವಾಗಿ ಪರಿಗಣಿಸಿರುವ ಸಂಘದ ಸದಸ್ಯರು



ದಿನನಿತ್ಯ ಗೂಡುಗಳನ್ನು ತಯಾರಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಗೂಡುಗಳನ್ನು ಅಭಿವೃದ್ಧಿಪಡಿಸಿ, ಅವುಗಳನ್ನು ವಿಭಜನೆ ಮಾಡಿ, ಹೆಚ್ಚಿನ ಸಂಖ್ಯೆಯ ಗೂಡುಗಳನ್ನು ಉತ್ಪನ್ನ ಮಾಡಿಕೊಂಡು ಯಾದಗಿರಿ, ಗುಲ್ಬರ್ಗಾ, ಬೀದರ್, ಬಳ್ಳಾರಿ, ರಾಯಚೂರು ಸೇರಿದಂತೆ ಹಲವಾರು ಜಿಲ್ಲೆಗಳಿಗೆ ಸರಬರಾಜು ಮಾಡುತ್ತಾರೆ. ಹೆಚ್ಚುವರಿಯಾಗಿ ಜೇನು ಪರಿಕರಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. 2017 ರಲ್ಲಿ ಸುಮಾರು 350-400 ಗೂಡುಗಳನ್ನು ಮಾರಾಟ ಮಾಡಿದ್ದಾರೆ. ಪ್ರತಿ ಜೇನು ಪೆಟ್ಟಿಗೆಗೆ ವರ್ಷಕ್ಕೆ 4 ರಿಂದ 5 ಸಾವಿರದವರೆಗೆ ಆದಾಯ ಗಳಿಸುತ್ತಿದ್ದಾರೆ. ಜೊತೆಗೆ ನಿಸರ್ಗದಲ್ಲಿ ಗೂಡುಕಟ್ಟಿರುವಂತಹ ನೈಸರ್ಗಿಕ ಜೇನುಗೂಡುಗಳನ್ನು ಹಿಡಿದು, ಸಾಕಾಣಿಕೆ ಬಾಕ್ಸ್ ಗಳಿಗೆ ಹಾಕಿ, ಅವಕ್ಕೆ ಬೇಕಾಗುವಂತಹ ಆಹಾರವನ್ನು ನೀಡಲಾಗುತ್ತದೆ. ಒಂದು ವೇಳೆ ರೈತನ ಹೊಲದಲ್ಲಿ ಹೂವುಗಳ ಕೊರತೆಯಿದ್ದರೆ ಸಹಕಾರ ಭಾವದಿಂದ ಹೂವುಗಳಿರುವ ರೈತನ ಹೊಲದಲ್ಲಿ ಜೇನುಪೆಟ್ಟಿಗೆಗಳನ್ನು ಇಟ್ಟು ಜೇನು ತಯಾರಿಸುತ್ತಾರೆ.

ಇದೆಲ್ಲವನ್ನೂ ರೈತರು ಪ್ರತ್ಯೇಕವಾಗಿ ತಮ್ಮ ತಮ್ಮ ತೋಟಗಳಲ್ಲಿ ಮಾಡುತ್ತಿದ್ದಾರೆ, ಕೆಲವೊಂದಿಷ್ಟು ರೈತರು ನ್ಯಾಚುರಲ್ ಜೇನು ಹಾಗೂ ಹೆಜ್ಜೇನನ್ನು ಹಿಡಿಯುವಲ್ಲಿ ಪರಿಣತಿ ಹೊಂದಿದ್ದಾರೆ. ಸಂಘದ ಉಪಾಧ್ಯಕ್ಷ ಪಂಪಾಪತಿ ಎನ್ನುವ ರೈತ ನೈಸರ್ಗಿಕ ಜೇನು ಹಿಡಿಯುವಲ್ಲಿ ಎತ್ತಿದ ಕೈ, ಜನನಿಬಿಡ







downloaded from: www.kpscvaani.com



ಪ್ರದೇಶದಲ್ಲಿ ಗೂಡು ಕಟ್ಟಿರುವ ಹೆಜ್ಜೇನನ್ನು ಹಿಡಿಯಲು ಸಂಬಂಧಿಸಿದವರು ವ್ಯವಸ್ಥೆ ಮಾಡಿದರೆ, ರಾತ್ರಿ ಸಮಯದಲ್ಲಿ ಹುಳುಗಳಿಗೆ ಹಾಗೂ ತನಗೆ ಯಾವುದೆ ಅಪಾಯವಾಗದಂತೆ ಹಿಡಿದು ಚೀಲದಲ್ಲಿ ತುಂಬಿಕೊಂಡು ಬೆಟ್ಟ ಗುಡ್ಡಗಳಿಗೆ ಸ್ಥಳಾಂತರಿಸಿ ಬರುತ್ತಾರೆ.

ಗೂಡಿನಿಂದ ತುಪ್ಪವನ್ನು ಕೈಯಿಂದ ಹಿಂಡಿ ತೆಗೆದರೆ ಗೂಡಿನಲ್ಲಿರುವ ಮೊಟ್ಟೆಗಳು, ಉತ್ಪತ್ತಿಯಾಗುತ್ತಿರುವ ಹುಳುಗಳು ನಾಶವಾಗುತ್ತವೆ. ಹಾಗಾಗಿ ಯಂತ್ರದ ಸಹಾಯದಿಂದ ತುಪ್ಪವನ್ನು ತೆಗೆಯಲಾಗುತ್ತಿದೆ. ಇದರಿಂದ ವೈಜ್ಞಾನಿಕವಾಗಿ ತುಪ್ಪವನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆಯಬಹುದಂತೆ. ಹಾಗೂ ಮೊಟ್ಟೆ, ಹುಳುಗಳನ್ನೂ ರಕ್ಷಿಸಬಹುದು ಜೊತೆಗೆ ಜೇನು ಸಂತತಿಯೂ ಹೆಚ್ಚುತ್ತದೆ ಎನ್ನುತ್ತಾರೆ.

ಹಳ್ಳಿಗಳಲ್ಲಿ ರೈತರು ನೈಸರ್ಗಿಕವಾಗಿರುವ ಜೇನು ತಟ್ಟೆಗೆ ಬೆಂಕಿ ಹಚ್ಚಿ ಹುಳುಗಳನ್ನು ಸಾಯಿಸಿ ತುಪ್ಪ ತೆಗೆದುಕೊಳ್ಳುತ್ತಾರೆ. ಇದರಿಂದ ಜೇನು ಸಂತತಿ ನಾಶವಾಗುತ್ತದೆ, ಹಾಗಾಗಿ ಇಂತಹ ಪ್ರಸಂಗಗಳೇನಾದರೂ ಸಂಘದ ಸದಸ್ಯರ ಕಣ್ಣಿಗೆ ಬಿದ್ದರೆ ಕೂಡಲೇ ಅವರನ್ನು ತಡೆಯುತ್ತಾರೆ. ಜೇನು ನೊಣಗಳಿಂದಿರುವ ಅನುಕೂಲತೆಗಳಾದ ಕೃಷಿ ಇಳುವರಿ ಹೆಚ್ಚಳ, ಜೇನುಹುಳಗಳಿಂದ ನಡೆಯುವ ಪರಾಗಸ್ಪರ್ಶ ಕ್ರಿಯೆಯಿಂದ ಕೃಷಿಯಲ್ಲಿ ಶೇ.40 ರಷ್ಟು ಇಳುವರಿ ಹೆಚ್ಚಳವಾಗುತ್ತದೆ. ಆದರೆ ಜೇನು ಹುಳುಗಳು ಕಣ್ಮರೆಯಾದರೆ, ಕೆಲವು ಸಸ್ಯ ಪ್ರಭೇಧಗಳು, ಏಕದಳ ಧಾನ್ಯಗಳು, ಔಷಧಿ ಸಸ್ಯಗಳು, ತೋಟಗಾರಿಕೆ, ತರಕಾರಿ ಬೆಳೆಗಳು ನಾಶವಾಗುತ್ತವೆ ಹಾಗೂ ದನಕರುಗಳಿಗೆ ಮೇವಿನ ಕೊರತೆ ಉಂಟಾಗುತ್ತದೆ ಎಂದು ಅವರಿಗೆ ತಿಳಿಸಿ ಹೇಳಿ ಬೆಂಕಿಯಿಂದ ಹುಳುಗಳನ್ನು ರಕ್ಷಿಸುತ್ತಿದ್ದಾರೆ. ಜೊತೆಗೆ ವಿವಿಧ ಬೆಳೆಗಳನ್ನು ಬೆಳೆಯುವುದರಿಂದ ಮಕರಂದ ಹಾಗೂ ಪರಾಗ ಸಿಗುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಗೂಡುಗಳು ಅಭಿವೃದ್ಧಿಯಾಗುತ್ತವೆ. ಬೆಳೆಗಳು ಹೂವು ಬಿಡುವ ಹಂತದಲ್ಲಿ ವಿಷಕಾರಿ ಔಷಧ ಸಿಂಪಡಣೆ ಮಾಡುವುದರಿಂದ ಜೇನು ನೊಣಗಳು ಸಾಯುತ್ತವೆ, ಇದರಿಂದ ಪರಾಗಸ್ಪರ್ಶ ನಡೆಯುವುದಿಲ್ಲ. ಹಾಗಾಗಿ ಬೆಳೆಗಳಿಗೆ ಬೇವಿನೆಣ್ಣೆ, ಸಸ್ಯಮೂಲ ಕೀಟನಾಶ, ಜೈವಿಕ ಕೀಟನಾಶಕ, ಜೈವಿಕ ಪೀಡೆ ಕೀಟನಾಶಕಗಳಂತಹ ನೈಸರ್ಗಿಕ ಔಷಧವನ್ನು ಸಿಂಪಡಣೆ ಮಾಡಬೇಕು. ಇದರಿಂದ ಬೆಳೆಯ ಇಳುವರಿಯನ್ನೂ ಹೆಚ್ಚಿಸಬಹುದು. ಜೊತೆಗೆ ಜೇನು ಸಂತತಿಯನ್ನೂ ಕಾಪಾಡಬಹುದು. ಗಿಡಮರಗಳನ್ನು ಬೆಳೆಸಿ ಪರಿಸರವನ್ನು ರಕ್ಷಿಸಿದರೆ ನೈಸರ್ಗಿಕ ಜೇನುಗೂಡುಗಳು ತಯಾರಾಗುತ್ತವೆ. ಮೊದಲು ಜೇನನ್ನು ನಾವು ಸಾಕಬೇಕು, ಆಮೇಲೆ ಜೇನು ನಮ್ಮನ್ನು ಸಾಕುತ್ತದೆ ಎಂದು ಪರಿಸರ ಜಾಗೃತಿಯನ್ನು ಮೂಡಿಸುವಲ್ಲಿ ಸದಸ್ಯರಾದ ಶರಣಪ್ಪ ಭತ್ತದ, ದೇವೇಂದ್ರಗೌಡ ಕಷ್ಟಿಪುಡಿ, ಪ್ರಕಾಶ ಬಣಕಾರ, ವರ್ತಯ್ಯ ಸ್ವಾಮಿ, ಮಹೇಶ ಕಾರಟಗಿ, ಆನಂದರೆಡ್ಡಿ, ಶ್ರೀಧರ ಬೆಲೂರು ಸೇರಿದಂತೆ ಹಲವಾರು ಸದಸ್ಯರುಗಳು ಯಶಸ್ವಿಯಾಗಿದ್ದಾರೆ.

**ಜೇನಿನಿಂದ ವಸ್ತುಗಳ ತಯಾರಿಕೆ;**

ಜೇನು ತೆಗೆದ ನಂತರ ಗೂಡನ್ನು ಅವರು ಬಿಸಾಡುವುದಿಲ್ಲ. ಬದಲಾಗಿ ಹಾಳಾದ ಗೂಡಿನಿಂದ ಮೇಣವನ್ನು ತಯಾರಿಸುತ್ತಾರೆ, ಮೇಣದಿಂದ ವ್ಯಾಸ್ಲಿನ್, ನೋವು ನಿವಾರಕ ಬಾಮ್, ನಂತಹ ಹತ್ತಾರು ತರದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ.

**ತರಬೇತಿ:**

ತೋಟಗಾರಿಕೆ ಇಲಾಖೆ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಪ್ರಗತಿಪರ ರೈತ ಅನಿಲ್ ಕುಮಾರ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಯಾದಗಿರಿ, ರಾಯಚೂರು, ಕಲಬುರಗಿ, ಬಳ್ಳಾರಿ ಸೇರಿದಂತೆ ಆಂಧ್ರದ ತಿರುಪತಿ ಬಳಿ ಇರುವ ರಾಜಂಪೇಟೆಯ ವೈ ಎಸ್ ಆರ್ ಯುನಿವರ್ಸಿಟಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ತರಬೇತಿ ನೀಡಿ ಬಂದಿದ್ದಾರೆ. ಇಲಾಖೆಯವರು ಹೇಳಿದರೆ ಈಗಲೂ ತರಬೇತಿ ನೀಡಲು ಸಿದ್ಧನಿದ್ದೇನೆ ಎನ್ನುತ್ತಾರೆ. ಜಿಲ್ಲೆಯಾದ್ಯಂತ ಸಂಘದ ಕಾರ್ಯಕರ್ತರು ಇರುವುದರಿಂದ ಅಲ್ಲಲ್ಲಿ ಗೂಡುಗಳ ಸರಬರಾಜು ಮತ್ತು ತರಬೇತಿಯನ್ನು ಅವರೂ ನೀಡುತ್ತಿದ್ದಾರೆ.

**ಜೇನು ಮಾರಾಟಕ್ಕೆ ಮಧುಮೇಳ:**

2015 ರಲ್ಲಿ ಸ್ಥಾಪನೆಯಾದ ಸಂಜೀವಿನಿ ಜೇನು ಕೃಷಿಕರ ಸಂಘದ ಸದಸ್ಯರುಗಳು ಜೇನುಕೃಷಿಯಲ್ಲಿ ಉತ್ಪಾದಿಸಿದ ತುಪ್ಪವನ್ನು ಮಾರಾಟ ಮಾಡಲು 2016 ರಲ್ಲಿ ರಾಜ್ಯಮಟ್ಟದ ಜೇನು ಹಬ್ಬವನ್ನು ಆಯೋಜಿಸಲಾಗಿತ್ತು. ಈ ಜೇನು ಹಬ್ಬದಲ್ಲಿ ರೈತರು ಜೇನು ತುಪ್ಪ ಮತ್ತು ಜೇನಿನಿಂದ ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಿ ಕೈತುಂಬಾ ಹಣ ಸಂಪಾದಿಸಿದ್ದರು. ಅದೇ ರೀತಿಯಲ್ಲಿ 2018 ರ ನವಂಬರ್ 12 ರಿಂದ 16 ರ ವರೆಗೆ ಐದು ದಿನಗಳ ಕಾಲ ಮಧುಮೇಳವನ್ನು ಆಯೋಜಿಸಲಾಗಿತ್ತು, ಇದರಿಂದ ರೈತರು ಎರಡುವರೆ ಟನ್ ತುಪ್ಪ ಹಾಗೂ ಜೇನಿನಿಂದ ತಯಾರಿಸಿದ್ದ ಹಲವಾರು ಉತ್ಪನ್ನಗಳನ್ನು ಮಾರಿದರು. ರೈತರ ಉತ್ಸಾಹ, ಗ್ರಾಹಕರ ಆಸಕ್ತಿ ಹಾಗೂ ರೈತರು ಬೆಳೆದ ಜೇನು ಬೆಳೆಗೆ ಪೂರಕ ಬೆಲೆ ಸಿಗಲಿ ಹಾಗೂ ಗ್ರಾಹಕರಿಗೆ ಜೇನಿನ ಬಗೆಗಳ ಮಾಹಿತಿ ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಎಲ್ಲೂ ನಡೆಯದ ಮಧುಮೇಳವನ್ನು ಕೊಪ್ಪಳದಲ್ಲಿ ಮಾತ್ರ ನಡೆಸಲಾಗುತ್ತದೆ. ಮೇಳದಿಂದ ಸಾಕಷ್ಟು ರೈತರಿಗೆ ಪ್ರಚಾರ ಮತ್ತು ಮಾಹಿತಿ ಸಿಕ್ಕಂತಾಗಿದೆ. ಇದರ ಪರಿಣಾಮವಾಗಿ ಸಂಘದಲ್ಲಿ ಮೊದಲು 25 ಸದಸ್ಯರ ಬಲ ಇದ್ದದ್ದು ಈಗ 200 ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ. ಜೇನು ಕೃಷಿ ಬಗ್ಗೆ ಹೆಚ್ಚಿನ ಮಾಹಿತಿಗೆ ರೈತ ಅನಿಲ್ ಕುಮಾರ್ ಅವರನ್ನು ಮೊಬೈಲ್ ಸಂಖ್ಯೆ 9900440777 ರ ಮೂಲಕ ಸಂಪರ್ಕಿಸಬಹುದು.



ಫಲ–ಪುಷ್ಪ ಪ್ರದರ್ಶನದ ಮೂಲಕ

# ಇಸ್ರೇಲ್ ತಂತ್ರಜ್ಞಾನ ಜಾಗೃತಿ



ತುಕಾರಾಂರಾವ್ ಬಿ.ವಿ.
ವಾರ್ತಾ ಸಹಾಯಕರು

**ಕೋ**ಟೆ ಕೊತ್ತಲಗಳ ನಾಡಾದ ಚಿತ್ರದುರ್ಗ ಜಿಲ್ಲೆಯು ಕಳೆದ ನಾಲ್ಕೈದು ವರ್ಷಗಳಿಂದಲೂ ಸತತ ಬರಕ್ಕೆ ತುತ್ತಾಗಿದ್ದು, ಮಳೆಯ ಕೊರತೆ ರೈತರನ್ನು ಹೈರಾಣ ಮಾಡಿದೆ. ಸುರಿವ ಅಲ್ಪ ಮಳೆಯನ್ನು ಸದ್ಬಳಕೆ ಮಾಡಿಕೊಂಡು, ಕೃಷಿ ಅಥವಾ ತೋಟಗಾರಿಕೆ ಮಾಡಿ ಅಷ್ಟೋ ಇಷ್ಟೋ ಹಣ ಗಳಿಸುವುದು ಇಲ್ಲಿನ ರೈತರಿಗೆ ದುಸ್ತರ. ಇದೇ ಕಾರಣಕ್ಕಾಗಿ ಕಡಿಮೆ ನೀರಿನಲ್ಲಿ ಉತ್ತಮ ಹಾಗೂ ಗುಣಮಟ್ಟದ ಬೆಳೆ ಪಡೆಯಬಹುದಾದ ಇಸ್ರೇಲ್ ಮಾದರಿಯ ತಂತ್ರಜ್ಞಾನವನ್ನು ಜಿಲ್ಲೆಯ ರೈತರಿಗೆ ಪರಿಚಯಿಸುವುದು ಸರ್ಕಾರದ ಉದ್ದೇಶವಾಗಿದ್ದು, ಇದರ ಭಾಗವಾಗಿ ತೋಟಗಾರಿಕೆ ಇಲಾಖೆ ಇತ್ತೀಚೆಗೆ ಚಿತ್ರದುರ್ಗದಲ್ಲಿ ಆಯೋಜಿಸಿದ ಫಲ–ಪುಷ್ಪ ಪ್ರದರ್ಶನ ಸರ್ಕಾರದ ಸದುದ್ದೇಶಕ್ಕೆ ಮುನ್ನುಡಿ ಬರೆದಿದೆ.



ಚಿತ್ರದುರ್ಗ ನಗರದ ತೋಟಗಾರಿಕೆ ಇಲಾಖೆ ಕಚೇರಿ ಆವರಣದಲ್ಲಿ ತೋಟಗಾರಿಕೆ ಸಂಘ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಈ ಬಾರಿ ಆಯೋಜಿಸಿರುವ ಫಲ–ಪುಷ್ಪ ಪ್ರದರ್ಶನ ಜನರ ಕಣ್ಮನ ಸೆಳೆಯುವಲ್ಲಿ ಯಶಸ್ವಿಯಾಯಿತು ಈ ಬಾರಿಯ ವಿಶೇಷ ಆಕರ್ಷಣೆಯೆಂದರೆ ನಡೆದಾಡುವ ದೇವರು, ತುಮಕೂರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಸ್ವಾಮೀಜಿಗಳ ಪ್ರತಿಕೃತಿ ಹಾಗೂ ಕಲ್ಲಂಗಡಿ ಹಣ್ಣಿನಲ್ಲಿ ಕೆತ್ತಿರುವ ಅವರ ಜೀವನದ ವಿವಿಧ ಮಜಲುಗಳ ಕಲಾಕೃತಿಗಳು. ಇದರ ಜೊತೆಗೆ ಇಸ್ರೇಲ್ ತಂತ್ರಜ್ಞಾನದ ಮಾದರಿಯನ್ನು ರೈತರಿಗೆ ಪರಿಚಯಿಸುವ ಹಲವು ಬಗೆಗಳನ್ನು ಪ್ರದರ್ಶನದಲ್ಲಿ ಅಳವಡಿಸುವ ಮೂಲಕ ರೈತರ ಜಾಗೃತಿಗೆ ಶ್ರಮಿಸಿದ್ದು ಪ್ರಶಂಸನಾರ್ಹವಾಗಿದೆ.

ತೋಟಗಾರಿಕೆ ಇಲಾಖೆ ಕಚೇರಿ ಆವರಣದಲ್ಲಿ ಆಯೋಜಿಸಿದ್ದ 28ನೇ ಫಲಪುಷ್ಪ ಪ್ರದರ್ಶನದಲ್ಲಿ ವಿಶೇಷವಾಗಿ ಬಗೆಬಗೆಯ ಪುಷ್ಪಗಳು, ಸಸ್ಯಗಳು, ಹಣ್ಣುಗಳ ಪ್ರದರ್ಶನ, ಸಿರಿಧಾನ್ಯಗಳ ಮಹತ್ವ ಅರಿಯುವ ವಸ್ತು ಪ್ರದರ್ಶನ, ತೋಟಗಾರಿಕೆ ಉಪಕರಣಗಳು,



downloaded from: www.kpscvaani.com







ಅಣಬೆ ಬೇಸಾಯ, ಜೊತೆಗೆ ತೋಟಗಾರಿಕೆ ಇಲಾಖೆಯು ನೂತನ ತಂತ್ರಜ್ಞಾನಗಳನ್ನು ಸಾರ್ವಜನಿಕರಿಗೆ ವರ್ಗಾವಣೆ ಮಾಡುವ ರೀತಿಯಲ್ಲಿ ಮೇಳವನ್ನು ಆಯೋಜಿಸಲಾಗಿತ್ತು. ಪ್ರದರ್ಶನಕ್ಕೆ ಸಂಸದ ಬಿ.ಎನ್. ಚಂದ್ರಪ್ಪ, ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಜಿಲ್ಲಾಧಿಕಾರಿ ವಿನೋತ್ ಪ್ರಿಯಾ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಿ.ಎನ್. ರವೀಂದ್ರ ಚಾಲನೆ ನೀಡಿ, ರೈತರು ಆರ್ಥಿಕವಾಗಿ ಸಬಲರಾಗಲು ಬೇಸಾಯ ಕ್ರಮದಲ್ಲಿ ತಾಂತ್ರಿಕತೆ ಅಳವಡಿಕೆ ಮಾಡಿಕೊಳ್ಳುವ ಅನಿವಾರ್ಯತೆ ಬಗ್ಗೆ ರೈತರಿಗೆ ತಿಳುವಳಿಕೆ ನೀಡಿದರು.

ವಿವಿಧ ಬಣ್ಣ ಬಣ್ಣಗಳ ಪುಷ್ಪಗಳ ನಡುವೆ ಸುಂದರ ಪರಿಸರದಲ್ಲಿ ಇರಿಸಿರುವ ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ. ಶಿವಕುಮಾರ ಸ್ವಾಮೀಜಿಗಳ ಪ್ರತಿಕೃತಿ. ಸಹಸ್ರಾರು ಜನರನ್ನು ಸೂಜಿಗಲ್ಲಿನಂತೆ ಸೆಳೆಯಿತು. ಮಕ್ಕಳು, ಯುವಜನರು, ವೃದ್ಧರಾದಿಯಾಗಿ ಎಲ್ಲರೂ ಪ್ರತಿಕೃತಿಯೊಂದಿಗೆ ಭಕ್ತಿ ಭಾವ ಮೆರೆದು, ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದಿದ್ದು ಕಂಡುಬಂದಿತು. ಫಲ–ಪುಷ್ಪ ಪ್ರದರ್ಶನವನ್ನು ಜನರ ಕಣ್ಣಿಗೆ ಕಟ್ಟುವಂತಾಗಲು, ತೋಟಗಾರಿಕೆ ಇಲಾಖೆಯು ಪ್ರಕೃತಿ ಮಾತೆಯ ಕಲಾಕೃತಿಯನ್ನು ರಚಿಸಿ, ಸಕಲ ಜೀವ ರಾಶಿಗಳಿಗೂ ತಾಯಿಯಾಗಿರುವ ನಿಸರ್ಗ ಮಾತೆಗೆ ನಮನ ಸಲ್ಲಿಸುವ ಕಲಾಕೃತಿ ಮಾದರಿಯನ್ನು ಸುಮಾರು 50 ಕ್ಕೂ ಹೆಚ್ಚು ಬಗೆಯ ಹೂವುಗಳನ್ನು ಬಳಸಿ, ಸಿದ್ಧಪಡಿಸಿರುವ ಫಲ–ಪುಷ್ಪ ಪ್ರದರ್ಶನ ಸಾರ್ವಜನಿಕರ ಕಣ್ಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಪ್ರದರ್ಶನದಲ್ಲಿ ಆನೆ, ಜಿರಾಫೆಗಳ ಕಲಾಕೃತಿ ಹಾಗೂ ಜಿಂಕೆ, ಚಿರತೆಗಳ ಮಾದರಿಯು ಮರ–ಗಿಡಗಳನ್ನು ಬೆಳೆಸಿ ಕಾಡು ಪ್ರಾಣಿಗಳನ್ನು ರಕ್ಷಿಸಿ ಎಂಬ ಪರಿಕಲ್ಪನೆ ಮೂಡಿಸುವಂತಿತ್ತು. ಪಕ್ಷಿಗಳ ಕಲಾಕೃತಿಗಳು ಕೂಡ ಪಕ್ಷಿಗಳ ಸಂತತಿ ಉಳಿಸುವ ಸಂದೇಶ ಸಾರುತ್ತಿದ್ದವು. ತೆಂಗಿನ ಚಿಪ್ಪಿನಲ್ಲಿ ಕೆತ್ತನೆ ಮಾಡಿರುವ ವಿವಿಧ ರೀತಿಯ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಿದ್ದು, ಜನರ ಗಮನ ಸೆಳೆಯಿತು.



ಆಕರ್ಷಕ ಹೂಗಳು : ಫಲ–ಪುಷ್ಪ ಪ್ರದರ್ಶನದಲ್ಲಿ ಸುಮಾರು 50 ಕ್ಕೂ ಹೆಚ್ಚು ಬಗೆಯ ವಿವಿಧ ಜಾತಿಯ ಹೂಗಳನ್ನು ಪ್ರದರ್ಶಿಸಲಾಗಿದ್ದು, ಜನರಿಗೆ ಈ ಸುಂದರ ಹೂಗಳನ್ನು ಪರಿಚಯಿಸುವುದು ಉದ್ದೇಶವಾಗಿತ್ತು. ಆರ್ಕಿಡ್ಸ್, ಕಾರ್ನೆಶನ್, ಕಾಕ್ಸ್ ಕೂಂಬ್, ಸೆಲೋಸಿಯಾ, ಪ್ಲಾಕ್ಸ್, ಗಾಕ್ಷೀನಿಯ, ಕಲಂಚಾ, ಲಿಲ್ಲಿಸ್, ಇಂಪೇಷನ್ಸ್, ಡೇಲಿಯಾ, ಸಾಲ್ವಿಯಾ, ಚೆಂಡು ಹೂ, ಚಿಂತಾಮಣಿ ಚೆಂಡು ಹೂ, ಜಿನಿಯಾ ಪೆಟೂನಿಯಾ, ಕಾಸ್‌ಮಾಸ್, ಬಾಲ್ಸಂ, ಜಿರೇನಿಯಂ, ಹಾಲಿಹಾಕ್, ಆಂಟಿರಿನಮ್, ಡಯಾಂತಸ್, ಕ್ಯಾಲೆಂಡೋಲಾ, ಸೇವಂತಿಗೆ, ಪೆಂಟಾಸ್, ಫ್ಲಾಕ್ಸಿ, ಇಪೋರ್ಬಿಯಾ, ಫ್ಲಾಂಸಿಟಿಯಾ ಮುಂತಾದ ಬಗೆ ಬಗೆಯ ಚಿತ್ತಾಕರ್ಷಕ ವರ್ಣಗಳ ಹೂಗಳು ಕಣ್ಮನ ಸೆಳೆಯುತ್ತಿವೆ. ವಿವಿಧ ಜಾತಿಯ ಕುಬ್ಜ ಬೊನ್ಸಾಯ್ ಮರಗಳು ನೋಡುಗರನ್ನು ಕುತೂಹಲ ಲೋಕಕ್ಕೆ ಒಯ್ಯುವಂತಿತ್ತು.

ರೈತರಿಗೆ ಜಾಗೃತಿ : ಆಹಾರ ಭದ್ರತೆ ಇತ್ತೀಚಿನ ದಿನಗಳಲ್ಲಿ ಬಹು ಮುಖ್ಯ ವಿಷಯವಾಗಿದೆ. ಅತಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ಗಳಿಸಬಹುದಾದ ಉತ್ತಮ ಪೌಷ್ಟಿಕ ಆಹಾರವೆಂದರೆ ಅಣಬೆ. ಇದು ಸಂಪೂರ್ಣ ಸಸ್ಯಾಹಾರವಾಗಿದ್ದು, ಅಣಬೆ ಬೆಳೆಯ ಬೇಸಾಯ ಕ್ರಮಗಳನ್ನು ಸ್ತಬ್ಧ ಚಿತ್ರಗಳಲ್ಲಿ ಅಳವಡಿಸಲಾಗಿತ್ತು. ರೈತರು ಅಳವಡಿಕೆ ಮಾಡಿಕೊಳ್ಳಬೇಕಾದ ತೋಟಗಾರಿಕಾ ಕ್ಷೇತ್ರದ ಮಾದರಿಯನ್ನು ಕೂಡ ನಿರ್ಮಿಸಲಾಗಿತ್ತು, ಇತ್ತೀಚಿನ ದಿನಗಳಲ್ಲಿ ಬಹು ಚರ್ಚೆಯಲ್ಲಿರುವ ಇಸ್ರೇಲ್ ಮಾದರಿಯ ತಂತ್ರಜ್ಞಾನ ಅಂದರೆ ಕಡಿಮೆ ನೀರು ಬಳಸಿ ಉತ್ತಮ ಬೆಳೆ ಬೆಳೆಯುವ ವಿಧಾನಗಳು, ಮಲ್ಚಿಂಗ್ ಪದ್ಧತಿ, ಹೈಡ್ರೋಪೋನಿಕ್ಸ್ ಮಾದರಿಯನ್ನು ಪ್ರದರ್ಶಿಸಲಾಗಿದೆ. ಅಲ್ಪ ನೀರಿನಲ್ಲಿ ತುಂತುರು ಅಥವಾ ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿ, ಗುಣಮಟ್ಟದ ಹಾಗೂ ಕಳೆ ರಹಿತ ಬೆಳೆ ಬೆಳೆಯುವ ಮಾದರಿಯನ್ನು ಪ್ರದರ್ಶಿಸಲಾಯಿತು. ಜಿಲ್ಲೆಯ ರೈತರು ಬೆಳೆದಿರುವ ಉತ್ತಮ ಗುಣಮಟ್ಟದ ಕುಂಬಳಕಾಯಿ, ಟೊಮ್ಯಾಟೊ, ಬಾಳೆಹಣ್ಣು, ದಾಳಿಂಬೆ, ಪಪ್ಪಾಯ ಸೇರಿದಂತೆ ವಿವಿಧ ಬಗೆಯ ಹಣ್ಣು ಹಾಗೂ ತರಕಾರಿಗಳನ್ನು ಪ್ರದರ್ಶನಕ್ಕೆ ಇರಿಸಿದ್ದು, ರೈತರನ್ನು ಉತ್ತೇಜಿಸುವಂತಿತ್ತು.

ಒಟ್ಟಾರೆ ಈ ಬಾರಿ ತೋಟಗಾರಿಕೆ ಇಲಾಖೆ ಆಕರ್ಷಕ ಫಲ–ಪುಷ್ಪ ಪ್ರದರ್ಶನವನ್ನು ಆಯೋಜಿಸುವ ಮೂಲಕ, ತೋಟಗಾರಿಕೆ ಪ್ರದೇಶ ವಿಸ್ತರಣೆಯತ್ತ ತನ್ನ ಪ್ರಯತ್ನವನ್ನು ಇಲ್ಲಿ ಸಾಕಾರಗೊಳಿಸಿತು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಸವಿತಾ ಅವರ ನೇತೃತ್ವದಲ್ಲಿ ಸಾಕಾರಗೊಳಿಸಲಾಗಿದ್ದ ಫಲ–ಪುಷ್ಪ ಪ್ರದರ್ಶನ ಜನಮನ್ನಣೆಗೆ ಪಾತ್ರವಾಯಿತು. ತೋಟಗಾರಿಕೆ ಸಲಹಾ ತಜ್ಞರು ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಫಲ–ಪುಷ್ಪ ಪ್ರದರ್ಶನವನ್ನು ಆಕರ್ಷಕವಾಗಿಸುವಲ್ಲಿ ಶ್ರಮಿಸಿದರು.

ಫಲ–ಪುಷ್ಪ ಪ್ರದರ್ಶನದಲ್ಲಿ ಅತ್ಯಂತ ಕಡಿಮೆ ಸ್ಥಳಾವಕಾಶದಲ್ಲಿ ಅಲಂಕಾರಿಕ ಗಿಡಗಳನ್ನು ಬೆಳೆಸುವ ತೂಗು ಉದ್ಯಾನ, ವರ್ಟಿಕಲ್ ಗಾರ್ಡನ್ ಪದ್ಧತಿಯನ್ನು ಆಕರ್ಷಕ ರೀತಿಯಲ್ಲಿ ಪರಿಚಯಿಸಲಾಯಿತು.

ಈ ಬಾರಿಯ ಫಲ–ಪುಷ್ಪ ಪ್ರದರ್ಶನದಲ್ಲಿ ಜಿಲ್ಲೆಯ ನಾನಾ ಭಾಗದ ರೈತರು ಬೆಳೆದ ಮಾದರಿ ಹಣ್ಣು ಮತ್ತು ತರಕಾರಿ ಹಾಗೂ ವಿವಿಧ ತೋಟಗಾರಿಕೆ ಬೆಳೆಗಳ ಪ್ರದರ್ಶನ. ಔಷಧಿ ಸಸ್ಯಗಳ ಪ್ರದರ್ಶನ ಮತ್ತು ಮಾಹಿತಿ. ತೋಟಗಾರಿಕೆ ಇಲಾಖೆಯಲ್ಲಿ ಲಭ್ಯವಿರುವ ವಿವಿಧ ಯೋಜನೆಗಳ ಬಗ್ಗೆ ಫ್ಲೆಕ್ಸ್‌ಗಳ ಮೂಲಕ ಮಾಹಿತಿ ನೀಡುವ ಕಾರ್ಯವನ್ನು ಅಚ್ಚುಕಟ್ಟಾಗಿ ಇಲ್ಲಿ ನಿರ್ವಹಿಸಲಾಯಿತು. ಮಕ್ಕಳಿಗೆ ಸಾಂಸ್ಕೃತಿಕ ಸ್ಪರ್ಧೆ, ಗಿಡಗಳು, ಹೂಗಳನ್ನು ಗುರುತಿಸುವ ಸ್ಪರ್ಧೆ ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಪ್ರದರ್ಶನವನ್ನು ಜನಸ್ನೇಹಿಯಾಗಿಸಲಾಯಿತು.

ಇಂತಹ ಪ್ರದರ್ಶನಗಳನ್ನು ಆಗಾಗ್ಗೆ ಆಯೋಜಿಸುವ ಮೂಲಕ, ಸಾರ್ವಜನಿಕರು, ಮಕ್ಕಳ ಮನಸ್ಸಿಗೆ ಆಹ್ಲಾದಕರ ವಾತಾವರಣ ನಿರ್ಮಿಸಿದರೆ, ರೈತರ ಪಾಲಿಗೆ ಇಂತಹ ಪ್ರದರ್ಶನಗಳು ಮಾಹಿತಿಯ ಕಣಜವಾಗಿ, ಅವರ ಕೃಷಿ ಚಟುವಟಿಕೆಗೆ ಉತ್ತೇಜನಕಾರಿಯಾಗಲಿವೆ.





downloaded from: www.kpscvaani.com

# ಜಲಪಾತ್ರೆಗಳ ಸಂರಕ್ಷಣೆ

ರವಿ ಮೂಡಿಗೆರೆ
ಚಿತ್ರಗಳು: ಮಲ್ಲಿಕಾರ್ಜುನ ಹೊಸಪಾಳ್ಯ



ಬರಗಾಲದಿಂದ ತತ್ತರಿಸಿರುವ ಕೃಷಿಕ ವರ್ಗ, ಮಳೆಗಾಲವನ್ನು ಎದುರು ನೋಡುತ್ತಿದೆ. ಮಳೆಗಾಲ ಎದುರು ನೋಡುತ್ತಿದ್ದರೆ ಸಾಲದು. ಆ ಕಾಲದಲ್ಲಿ ಜಮೀನಿನ ಮೇಲೆ ಸುರಿಯುವ ಅಷ್ಟೂ ಮಳೆ ನೀರನ್ನು ಹಿಡಿದಿಡುವುದು ಹೇಗೆ? ಎಂಬುದರ ಬಗ್ಗೆಯೂ ಯೋಚಿಸಬೇಕು. ಯೋಜನೆ ರೂಪಿಸಬೇಕು. ಮಳೆ ಬಂದಾಗ ಕಾರ್ಯ ಪ್ರವೃತ್ತರಾಗುವ ಬದಲು, ಮಳೆ ಬರುವ ಮುನ್ನವೇ ನೀರು ಹಿಡಿಯಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಕಾರಣ ಇಷ್ಟೇ, ಇತ್ತೀಚೆಗಿನ ದಿನಗಳಲ್ಲಿ ಮಳೆಗಾಲ 'ಹೀಗೆ' ಇರುತ್ತದೆ ಎಂದು ಅಂದಾಜಿಸುವುದೇ ಕಷ್ಟವಾಗಿದೆ. ಹೀಗೆ ಮಳೆಯ ಅನಿಶ್ಚಿತತೆ ಹಾಗೂ ಬರಗಾಲದಿಂದ ಪಾಠ ಕಲಿತಿರುವ ಅನೇಕ ರೈತರು, ಸುರಿವ ಮಳೆ ನೀರನ್ನು ಜೋಪಾನವಾಗಿ ಸಂಗ್ರಹಿಸಿಟ್ಟುಕೊಂಡು, ಎಚ್ಚರಿಕೆಯಿಂದ ಬಳಸುತ್ತಿದ್ದಾರೆ. ಅಷ್ಟೇ ಅಲ್ಲ, ಬಳಸುವಷ್ಟೇ ನೀರನ್ನು ಭೂಮಿಗೂ ಇಂಗಿಸುತ್ತಿದ್ದಾರೆ. ಇದರ ಜತೆಗೆ, ಕಡಿಮೆ ನೀರು ಕೇಳುವ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ತೋಟಗಾರಿಕಾ ಬೆಳೆ ಬೆಳೆಯುವವರೂ



ಗಿಡಗಳಿಗೆ ಪೂರೈಕೆಯಾಗುವ ನೀರು ಆವಿಯಾಗದಂತೆ ಮುಚ್ಚಿ ಬೆಳೆ ಬೆಳೆಯುತ್ತಿದ್ದಾರೆ. ಮಣ್ಣನ್ನು ಫಲವತ್ತುಗೊಳಿಸಿ, ನೀರು ಹಿಡಿದಿಡುವ ಶಕ್ತಿಯನ್ನು ಹೆಚ್ಚಿಸುತ್ತಿದ್ದಾರೆ.

ಇನ್ನು ಮುಂದೆಯೂ ಮಳೆ ಅನಿಶ್ಚಿತತೆಯ ಲಕ್ಷಣಗಳು ಕಾಣುತ್ತಿರುವ ಹಿನ್ನೆಲೆಯಲ್ಲಿ, ರೈತರು ಮಳೆಗಾಲಕ್ಕೆ ಮುನ್ನ, ಸುರಿಯುವಷ್ಟೂ ಮಳೆ ನೀರನ್ನು ಜಮೀನಿನಲ್ಲಿ ಹಿಡಿದಿಡಲು ಸಜ್ಜಾಗಬೇಕಿದೆ. ಅದಕ್ಕೊಂದು ಸಿದ್ಧತೆ ಮಾಡಿಕೊಳ್ಳಬೇಕು. ಆ ಸಿದ್ಧತೆಯ ವಿವರಗಳು ಇಲ್ಲಿವೆ.

**ಹುದಿ-ಬದು ನಿರ್ಮಾಣ :**

ಹೊಲದಲ್ಲಿ ಕೃಷಿ ಮಾಡುವವರು, ಮಳೆಗೆ ಮುನ್ನ ಇಳಿಜಾರಿಗೆ ಅಡ್ಡಲಾಗಿ ಹುದಿ ಬದುಗಳನ್ನು ಮಾಡಿ (ಟ್ರೆಂಚ್ ಕಮ್ ಬಂಡ್). ಇದು ಕಡಿಮೆ ವೆಚ್ಚದಲ್ಲಿ, ತ್ವರಿತವಾಗಿ ಮಾಡಿಕೊಳ್ಳುವಂತಹ ಜಲಸಂರಕ್ಷಣಾ ರಚನೆಗಳು. ಇಳಿಜಾರು ಪ್ರಮಾಣ ಆಧರಿಸಿ ಹುದಿ ಮತ್ತು ಬದುಗಳ ಅಳತೆಯನ್ನು ನಿರ್ಧರಿಸಿ, ನಿರ್ಮಿಸಿಕೊಳ್ಳಿ.

ಬದುಗಳನ್ನು ಬಲವರ್ಧನೆಗೊಳಿಸಲು, ಬದುವಿನ ಮೇಲೆ ಲಾವಂಚ, ಹುಲ್ಲಿನ ಬೀಜಗಳಾದ ಸ್ಟೈಲೊ ಹೆಮಟಾ, ಸ್ಟೈಲೊ ಸ್ಕ್ಯಾಬ್ರಾದಂತಹವುಗಳನ್ನು ಬೆಳೆಸಬೇಕು. ಇದರ ಜತೆಗೆ ಗೊಬ್ಬರದ ಗಿಡ (ಗ್ಲಿರಿಸೀಡಿಯಾ), ಸೀಮೆತಂಗಡಿ, ಬಸವನಪಾದ ಬೆಳೆಸಬಹುದು. ಇವೆಲ್ಲ ಬದುವನ್ನು ಬಲವರ್ಧಿಸುತ್ತವೆ. ಜತೆಗೆ ಹೊಲಕ್ಕೆ ಬೇಕಾದ ಹಸಿರೆಲೆ ಗೊಬ್ಬರವನ್ನು ಪೂರೈಸುತ್ತವೆ.

ಜಮೀನನ್ನು ಗಮನಿಸಿ. ಇಳಿಜಾರಿಗೆ ಅಡ್ಡಲಾಗಿ, ಆಳವಾಗಿ ಉಳುಮೆ ಮಾಡಿ. ಮೊದಲ ಮಳೆ ಬಿದ್ದ ನಂತರ ಹಸಿರೆಲೆ ಗೊಬ್ಬರ (ದ್ವಿದಳ ಧಾನ್ಯದ ಬೀಜಗಳಾದ ಸೆಣಬು, ಡಯಂಚಾ, ಹಲಸಂದೆ, ಹುರುಳಿ ಇತ್ಯಾದಿಗಳನ್ನು ಬಿತ್ತನೆ ಮಾಡಿ). ಈ ಪ್ರಕ್ರಿಯೆ ಮಣ್ಣಿನ ಫಲವತ್ತತೆ ಹೆಚ್ಚಿಸುವ ಜತೆಗೆ, ಮಳೆ ನೀರನ್ನು ಹಿಡಿದಿಡುತ್ತದೆ.

ಈಗಾಗಲೇ ಜಮೀನಿನಲ್ಲಿ ವಿಫಲವಾಗಿರುವ ಕೊಳವೆ ಬಾವಿಗಳಿದ್ದರೆ, ಅವುಗಳಿಗೆ ಜಲ ಮರುಪೂರಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬಹುದು. ಕೊಳವೆಬಾವಿ ಸುತ್ತ ಮಳೆ ನೀರು







downloaded from: www.kpscvaani.com



ಇಂಗುವಂತೆ ವ್ಯವಸ್ಥೆ ಮಾಡಿ. ಆದಷ್ಟು ಕೊಳವೆಬಾವಿ ಸುತ್ತ ನೀರನ್ನು ಇಂಗುವಂತೆ ಮಾಡಿ. ಚಾಲ್ತಿಯಲ್ಲಿರುವ ಕೊಳವೆ ಬಾವಿಗಳಿಗೆ ವೈಜ್ಞಾನಿಕವಾಗಿ ಜಲಮರುಪೂರಣ ಮಾಡಿಸಿ. ಕೊಳವೆ ಬಾವಿಯಿಂದ ತುಸು ದೂರದಲ್ಲಿ ಕೃಷಿ ಹೊಂಡ ಮಾಡಿಸಿ. ಅದರಲ್ಲಿ ಮಳೆ ನೀರು ಸಂಗ್ರಹಿಸಿದರೂ, ಪರೋಕ್ಷವಾಗಿ, ಬೋರ್‌ವೆಲ್ ಜಲಮರುಪೂರಣವಾಗುತ್ತದೆ.

ಪ್ರತಿ ಜಮೀನಿಗೆ ಕಡ್ಡಾಯವಾಗಿ ಕೃಷಿ ಹೊಂಡ ಮಾಡಿಸಿ. ಎರಡೂವರೆ ಎಕರೆ ಜಮೀನಿರುವವರು ರೂ 15 ಸಾವಿರ ಖರ್ಚು ಮಾಡಿದರೆ 20 ಲಕ್ಷ ಲೀಟರ್ ನೀರು ಹಿಡಿಯುವ ಸಾಮರ್ಥ್ಯದ ಕೃಷಿ ಹೊಂಡ ಮಾಡಿಕೊಳ್ಳಬಹುದು.

ಜಮೀನಿನಲ್ಲಿ ಯಾವ ಬೆಳೆ ಬೆಳೆಯುತ್ತೀರಿ? ಎಷ್ಟು ಲೀಟರ್ ನೀರು ಬೇಕಾಗುತ್ತದೆ? ಎಂಬುದನ್ನು ಲೆಕ್ಕಚಾರ ಹಾಕಿಕೊಳ್ಳಿ, ಆ ಲೆಕ್ಕಚಾರಕ್ಕೆ ತಕ್ಕಂತೆ, ಬೆಳೆಗಳಿಗೆ ಬೇಕಾದಷ್ಟು ಮಳೆ ನೀರು ಸಂಗ್ರಹಿಸಲು (ಕೃಷಿ ಹೊಂಡ, ಟ್ರಂಚ್, ಕೊಳವೆಬಾವಿ) ಜಲಸಂರಕ್ಷಣಾ ರಚನೆಗಳನ್ನು ಮಾಡಿಕೊಳ್ಳಿ. ಜಮೀನಿನಲ್ಲಿ ಸುರಿಯುವ ಮಳೆ ನೀರು ಹರಿಯುವ ದಾರಿಗಳನ್ನು ಗುರುತಿಸಿ. ಜಾಗ ನೋಡಿಕೊಂಡು, ನೀರು ಕಾಲುವೆಗಳನ್ನು ನಿರ್ಮಾಣ ಮಾಡಿ.

**ಈಗಾಗಲೇ ಹುದಿ ಬದು ಮಾಡಿರುವವರು:**

ಈಗಾಗಲೇ ಜಮೀನಿನಲ್ಲಿ ಕೃಷಿ ಹೊಂಡ ತೆಗೆಸಿರುವವರು, ಹೊಂಡದ ಹೂಳನ್ನು ತೆಗೆಸಿ. ತೆಗೆದ ಹೂಳನ್ನು ಹೊಂಡದ ದಂಡೆಯ ಮೇಲೆ ಹಾಕಿಸಿ. ಏಕೆಂದರೆ, ಅದು ಫಲವತ್ತಾದ ಮಣ್ಣು. ಆ ಮಣ್ಣಿನ ಮೇಲೆ ತರಕಾರಿ, ಹೂವು, ಹಣ್ಣಿನ ಗಿಡಗಳನ್ನು ಬೆಳೆಯಬಹುದು.

ಮಳೆಗಾಲದಲ್ಲಿ ಹೊಂಡದಲ್ಲಿ ನೀರು ಸಂಗ್ರಹವಾದ ನಂತರ, ಹೊಂಡದ ದಂಡೆಯ ಮೇಲೆ ಬೆಳೆಯುವ ಗಿಡಗಳಿಗೆ ನೀರು ಹನಿಸಲು ಸುಲಭ. ಹೀಗೆ ಹೊಂಡದ ನೀರು ಕೃಷಿಗಾಗುತ್ತದೆ, ದಂಡೆಯ ಮೇಲಿನ ಫಸಲು ಪರೋಕ್ಷ ಆದಾಯ ನೀಡುತ್ತದೆ.

ಹುದಿಗಳನ್ನು ಮಾಡಿಸಿದ್ದರೆ, ಅವುಗಳಲ್ಲಿ ಹೂಳು ತೆಗೆಸಿ. ತೆಗೆದ ಹೂಳನ್ನು ಬದುವಿನ ಮೇಲೆ ಹಾಕಿಸಿ. ಈಗಾಗಲೇ ಬದುವಿನ ಮೇಲೆ ಗಿಡಗಳನ್ನು ಬೆಳೆಸದೇ ಇದ್ದರೆ, ಹೊಸದಾಗಿ ಗಿಡಗಳನ್ನು ನಾಟಿಮಾಡಲು ಸಿದ್ಧತೆ ಮಾಡಿಕೊಳ್ಳಿ, ಮತ್ತು ಹುದಿ ಹಾಗೂ ಹೊಂಡಗಳಿಗೆ ಮಳೆ ನೀರು ಹರಿಯಲು ದಾರಿ ಮಾಡಿಕೊಡಿ.

**ತೋಟಗಾರಿಕೆ ಮಾಡುವವರು..**

ತೋಟಗಾರಿಕೆ ಬೆಳೆ (ತೆಂಗು, ಅಡಿಕೆ, ಹಣ್ಣಿನ ಬೆಳೆ ಇತ್ಯಾದಿ) ಬೆಳೆಯುವವರು ಸದ್ಯಕ್ಕೆ ಹೊಸದಾಗಿ ಕೊಳವೆಬಾವಿ ಕೊರೆಸಬೇಡಿ. ಏಕೆಂದರೆ, ಈಗ ಎಲ್ಲೂ ಅಂತರ್ಜಲ ಉತ್ತಮವಾಗಿಲ್ಲ. ಹಾಗೆ ಬೆಳೆಗೆ ನೀರು ಬೇಕೆನಿಸಿದರೆ, ಅಕ್ಕಪಕ್ಕದ ತೋಟಗಳಲ್ಲಿರುವ ಕೊಳವೆಬಾವಿಗಳಿಂದ ನೀರು ಪಡೆದುಕೊಳ್ಳಿ, ಸದ್ಯದ ಪರಿಸ್ಥಿತಿಗೆ ಈ ರೀತಿ ನೀರು ಹಂಚಿಕೆ ವಿಧಾನವೇ ಉಳಿದಿರುವ ಮಾರ್ಗ. ಹೀಗೆ ಮಾಡುವುದರಿಂದ ಹೊಸ ಕೊಳವೆಬಾವಿ ಕೊರೆಸುವುದು ತಪ್ಪುತ್ತದೆ. ಹಣ ವ್ಯರ್ಥವಾಗುವುದನ್ನು ತಪ್ಪಿಸಬಹುದು.

ನಿಮ್ಮದು ಐದು ಎಕರೆ ಜಮೀನಿದ್ದರೆ, ಅರ್ಧ ಎಕರೆಯನ್ನು ಮಳೆ ನೀರು ಸಂಗ್ರಹಿಸುವುದಕ್ಕಾಗಿಯೇ ಮೀಸಲಿಡಬೇಕು. ಇದು ಹೊಸದಾಗಿ ಜಮೀನು ಮಾಡುವವರು ಗಮನಿಸಬೇಕಾದ ಅಂಶ. ಈಗಾಗಲೇ ತೋಟ, ಹೊಲ ಮಾಡಿರುವವರೂ ಈ ವಿಧಾನ ಅನುಸರಿಸುವುದರಿಂದ, ಹೊಸದಾಗಿ ಕೊಳವೆ ಬಾವಿಗೆ ಹಣ ವ್ಯಯಿಸುವುದನ್ನು ಉಳಿಸಬಹುದು.

ತೋಟದಲ್ಲಿ ಯಾವ ಬೆಳೆ ಇದೆ? ಯಾವ ಬೆಳೆ ಬೆಳೆಯುತ್ತೀರಿ? ಬೆಳೆಯುವ ಬೆಳೆಗಳಿಗೆ ಎಷ್ಟು ನೀರು ಬೇಕು ? – ಈ ರೀತಿಯ ವಾಟರ್ ಬಜೆಟ್ ಮಾಡಿಕೊಳ್ಳಿ, ನೀವು ಬೆಳೆಯುವ ಬೆಳೆಗಳಿಗೆ ಎಷ್ಟು ಲಕ್ಷ ಲೀಟರ್ ನೀರು ಬೇಕು ಎಂಬ ಅಂದಾಜು ಸಿಕ್ಕಿದ ಮೇಲೆ, ಅದಕ್ಕೆ ಅನುಗುಣವಾಗಿ ಅಷ್ಟು ಲೀಟರ್ ನೀರು ಹಿಡಿಯುವ ಸಾಮರ್ಥ್ಯದ ಜಲಪಾತ್ರೆಗಳನ್ನು ಮಾಡಿಕೊಳ್ಳಬಹುದು.

ನಿಮ್ಮ ತೋಟಕ್ಕೆ ಅಗತ್ಯವಿರುವ ಅಷ್ಟೂ ನೀರು ಕೃಷಿ ಹೊಂಡದಿಂದ ಪೂರೈಕೆಯಾಗಬೇಕು ಎಂದು ಎನ್ನಿಸಿದರೆ, ಅಷ್ಟು ದೊಡ್ಡ ಗಾತ್ರದ ಕೃಷಿ ಹೊಂಡ ಮಾಡಿಸಬಹುದು. ಈ ಹೊಂಡ ಮಳೆಗಾಲ ಮುಗಿಯುವವರೆಗೂ ಭರ್ತಿಯಾಗುತ್ತಿರುತ್ತದೆ. ಆ ನೀರು ತೋಟಕ್ಕೂ ಬಳಕೆಯಾಗುತ್ತದೆ, ಭೂಮಿಗೂ ಇಂಗುತ್ತದೆ.

ಹೊಂಡದ ನೀರು ಇಂಗುವುದು ಬೇಡ. ಅದು ಬೇಸಿಗೆಯಲ್ಲೂ ತೋಟಕ್ಕೆ ಬಳಕೆಯಾಗುವಂತಿರಬೇಕು ಎನ್ನುವುದಾದರೆ, ಹೊಂಡದ ತಳಕ್ಕೆ ಜಿಯೋಮೆಂಬ್ರೇನ್ ಶೀಟ್ ಹಾಕಿಸಿ. ಹೀಗೆ ಮಾಡುವುದರಿಂದ, ಹೊಂಡದಲ್ಲಿ ನೀರು ಇಂಗುವುದಿಲ್ಲ. ಇನ್ನು ಬಿಸಿಲಿಗೆ ಆವಿಯಾಗುವ ನೀರಿಗೂ ಕಡಿವಾಣ ಹಾಕಬೇಕೆಂದರೆ, ಹೊಂಡದ ಮೇಲೆ ಹಸಿರು ಪರದೆಗಳನ್ನು ಹೊದಿಕೆಯಾಗಿಸಬಹುದು. ಒಂದು ದೊಡ್ಡ ಮಳೆಯಾದರೆ ಸಾಕು ಇಂಥ ಹೊಂಡಗಳು ಭರ್ತಿಯಾಗುತ್ತವೆ. ವರ್ಷಕ್ಕೆ ಎರಡು ದೊಡ್ಡ ಮಳೆಗೆ ಕೋಟಿಗಟ್ಟಲೆ ನೀರು



downloaded from: www.kpscvaani.com



ಸಂಗ್ರಹವಾಗುತ್ತದೆ. ಎಚ್ಚರದಿಂದ ಬಳಸಿದರೆ, ಕೊಳವೆಬಾವಿ ನೀರನ್ನು ಬಳಸದೇ ಕೃಷಿ ಮಾಡಬಹುದು.

ಇತ್ತೀಚೆಗೆ ಕೃಷಿ ಹೊಂಡಗಳಲ್ಲಿ ಕೋಟಿ ಕೋಟಿ ಲೀಟರ್ ನೀರು ಸಂಗ್ರಹಿಸಿಟ್ಟುಕೊಂಡು, ಅದೇ ನೀರನ್ನು ವರ್ಷ ಪೂರ್ತಿ ತೋಟಕ್ಕೆ ಬಳಸುತ್ತಿರುವ ಕೃಷಿಕರು ನಮ್ಮೊಡನಿದ್ದಾರೆ. ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿರುವ ರೈತರು ಈ ಪ್ರಯತ್ನ ಮಾಡಿ, ಯಶಸ್ವಿಯಾಗಿದ್ದಾರೆ.

ತಲಪರಿಗೆ, ಕಪಿಲೆಬಾವಿ, ಕೃಷಿ ಹೊಂಡ, ತೆರೆದ ಬಾವಿ, ಕೆರೆ, ಕಟ್ಟೆ, ಮದಕಗಳೇ ನಿಜವಾದ ಜಲಪಾತ್ರೆಗಳು. ಹೀಗಾಗಿ, ಈ ರಚನೆಗಳನ್ನು ಯಾವ ಕಾರಣಕ್ಕೂ ಮುಚ್ಚಬಾರದು. ನಾಲ್ಕು ಸಾವಿರ ಮಿಮೀ ವಾರ್ಷಿಕ ಮಳೆ ಬೀಳುವ ದಕ್ಷಿಣ ಕನ್ನಡ, ಕರಾವಳಿ, ಮಲೆನಾಡಿಗರಿಗೆ ಬಾವಿಗಳೇ 'ಜಲ ಆಸ್ತಿ'ಗಳು. ಅಲ್ಲಿಗೆ ಕೊಳವೆಬಾವಿಗಳು ಹೊಂದುವುದಿಲ್ಲ, ಈ ಬಾವಿಗಳಲ್ಲಿ ಮಳೆ ನೀರು ತುಂಬಿಸಿ, ಎಷ್ಟು ಇಂಗಿಸುತ್ತೇವೆಯೋ, ಅಷ್ಟು ಆ ಪ್ರದೇಶದಲ್ಲಿ ಅಂತರ್ಜಲ ಉತ್ತಮವಾಗಿರುತ್ತದೆ. ಬೇಸಿಗೆಯಲ್ಲೂ ಈ ಜಲಪಾತ್ರೆಗಳ ನೀರನ್ನು ಕೃಷಿ ಕಾರ್ಯಗಳಿಗೆ ಬಳಸಬಹುದು.

**ಸಮುದಾಯ ಸಹಭಾಗಿತ್ವದಲ್ಲಿ ಕೈಗೊಳ್ಳಬಹುದಾದ ಕ್ರಮಗಳು...**

- ಗ್ರಾಮಗಳಲ್ಲಿರುವ ಹಿರಿಯರು ಊರಿನ ಮೇಲೆ ಸುರಿಯುವ ಮಳೆ ನೀರನ್ನು, ಗ್ರಾಮದ ದಿಕ್ಕು ದಿಕ್ಕುಗಳಲ್ಲೂ ಇಂಗುವಂತೆ ಮಾಡಲು ಗ್ರಾಮದ ಮೂಲೆ ಮೂಲೆಗಳಲ್ಲೂ ಇಂಗು ಬಾವಿಗಳನ್ನು ಮಾಡಿಸಬೇಕು.
- ಈಗಾಗಲೇ ತೆರೆದಬಾವಿಗಳಿದ್ದರೆ, ಆ ಬಾವಿಗಳಿಗೆ ಮಳೆ ನೀರನ್ನು ಹೇಗೆ ತುಂಬಿಸಬಹುದೆಂದು ಯೋಜನೆ ರೂಪಿಸಿ, ಕಾರ್ಯರೂಪಕ್ಕೆ ತರಬೇಕು.
- ಕೆರೆ, ಕಟ್ಟೆಗಳ ಹೂಳೆತ್ತಿಸುವುದು ಎಷ್ಟು ಮುಖ್ಯವೋ, ಆ ಜಲಪಾತ್ರೆಗಳಿಗೆ ಸರಿಯಾಗಿ ಮಳೆ ನೀರು ಹೋಗಿ ತಲುಪುವುದು ಅಷ್ಟೇ ಮುಖ್ಯ. ಈ ಮಳೆಗಾಲಕ್ಕೆ ಮುನ್ನ, ನಿಮ್ಮ ನಿಮ್ಮ ಊರಿನ ಕೆರೆ ಕಟ್ಟೆಗಳಿಗೆ ಮಳೆ ನೀರು ಸೇರುವ ಕಾಲುವೆಗಳನ್ನು ಸ್ವಚ್ಛಗೊಳಿಸಿ.
- ಗ್ರಾಮಕ್ಕೆ ಎಷ್ಟು ನೀರು ಬೇಕು ಎಂಬ "ವಾಟರ್ ಬಜೆಟ್" ಮಾಡುವುದು ಅಗತ್ಯ. ವಾಟರ್ ಬಜೆಟ್ ನಲ್ಲಿ ಊರಿನಲ್ಲಿ ಸುರಿಯುವ ವಾರ್ಷಿಕ ಸರಾಸರಿ ಮಳೆ, ಗ್ರಾಮದಲ್ಲಿ ಬಳಸುವ ನೀರಿನ ಪ್ರಮಾಣ, ಬಳಕೆಗೆ ಬೇಕಾಗುವ ನೀರಿನ ಪ್ರಮಾಣ ಇವೆಲ್ಲದರ ಲೆಕ್ಕ ಇರಬೇಕು. ಈ ಲೆಕ್ಕದ ಪ್ರಕಾರ ಎಲ್ಲಿಂದ ನೀರನ್ನು ತರಬೇಕೆಂದು ಯೋಚಿಸಬಹುದು. ಅದರಲ್ಲಿ ಮಳೆ ನೀರಿನ ಪಾಲು ಎಷ್ಟಿರಬೇಕೆಂದು ಗೊತ್ತಾಗುತ್ತದೆ. ಹೀಗೆ ಲೆಕ್ಕಚಾರ ಮಾಡಿಕೊಂಡರೆ, ಭವಿಷ್ಯದಲ್ಲಿನ ನೀರಿನ ಕೊರತೆ ಎದುರಿಸಲು ಸಾಧ್ಯವಿದೆ.

ಜಲ ವಿಷಯದಲ್ಲಿ ಪರಿಣತಿಯನ್ನು ಹೊಂದಿರುವ ಪತ್ರಕರ್ತ ಶ್ರೀ ಪಡ್ರೆಯವರು ಹೇಳುವಂತೆ, ಮಳೆ ನೀರು ಬ್ಯಾಂಕ್‌ನ ಚೆಕ್ ಇದ್ದಂತೆ. 'ಮಳೆಗಾಲದಲ್ಲಿ ಭೂಮಿ ಎಂಬ ಬ್ಯಾಂಕಿನಲ್ಲಿ ನೀರನ್ನು ಠೇವಣಿ ಇಟ್ಟರೆ, ಬೇಸಿಗೆಯಲ್ಲಿ ಆ ನೀರು ತನ್ನಿಂದ ತಾನೇ ನಗದಾಗುತ್ತದೆ. ಮಾತ್ರವಲ್ಲ, ನೀರಿನ ಕೊರತೆ ಸಮಾಜವನ್ನು ಒಡೆದರೆ, ದಕ್ಷ ನಾಯಕತ್ವದಡಿ ನಡೆದ ಮಳೆ ಕೊಯ್ಲು ಸಂಗ್ರಹ ವಿಧಾನ ಸಮಾಜವನ್ನು ಒಗ್ಗೂಡಿಸುತ್ತದೆ'.

**(ಪೂರಕ ಮಾಹಿತಿ: ಡಾ. ಎನ್. ದೇವರಾಜ ರೆಡ್ಡಿ, ಜಲ ತಜ್ಞ)**

## ಗಡಿನಾಡಿನಾಚೆ ಕನ್ನಡದ ಕಂಪು ಸೂಸಿದ

# ಸರ್ ಸಿದ್ದಪ್ಪ ಕಂಬಳಿ



**ಸ್ವಾತಂತ್ರ್ಯ ಪೂರ್ವದಲ್ಲಿ 'ಸರ್' ಎಂಬ ಬಿರುದು ಪಡೆದ ಕರ್ನಾಟಕದ ಬೆರಳೆಣಿಕೆಯಷ್ಟು ಸಾಧಕರಲ್ಲಿ ಸಿದ್ದಪ್ಪ ಕಂಬಳಿ ಅವರು ಪ್ರಮುಖರು. ವೃತ್ತಿಯಲ್ಲಿ ವಕೀಲರಾಗಿ, ಸಮಾಜ ಸುಧಾರಕರಾಗಿ, ಕೆಳವರ್ಗದ ಜನರ ಬದುಕಿನ ಆಶಾಕಿರಣವಾಗಿ, ಪ್ರಾಮಾಣಿಕ ರಾಜಕಾರಣಿಯಾಗಿ ಮುಂಬೈ ಪ್ರಾಂತ್ಯದ ಸಚಿವರಾಗಿ, ಗಾಂಧೀಜಿ ಜೊತೆ ಬಿನ್ನಾಭಿಪ್ರಾಯ ಹೊಂದಿ, ಅಂಬೇಡ್ಕರ್ ಅವರಿಗೆ ಸಹಕಾರಿಯಾಗಿ – ಕನ್ನಡದ ಕಂಪನ್ನು ಗಡಿಯಾಚೆ ಹರಡಿದ ಶಿಕ್ಷಣದ ರುವಾರಿ ಸಿದ್ದಪ್ಪ ಕಂಬಳಿ ಅವರು ನಮ್ಮನ್ನಗಲಿ ಸರಿಯಾಗಿ ಅರವತ್ತು ವರ್ಷಗಳು. ಈ ಸಂದರ್ಭದ ಸವಿ ನೆನಪಿಗಾಗಿ ಈ ಲೇಖನ.**

**ಆರ್.ಜಿ. ಹಳ್ಳಿ ನಾಗರಾಜ**

**ತ**ಲೆಗೆ ಸುತ್ತಿದ ಪೇಟ, ಕಣ್ಣಿಗೆ ಬಂಗಾರ ಹೊಳಪಿನ ಕನ್ನಡಕ, ಮುಖದಲ್ಲಿ ಎದ್ದು ಕಾಣುವ ಭರ್ಜರಿ ಮೀಸೆ, ಟೈ – ಕೋಟು ಧರಿಸಿದ ಶಿಸ್ತಿನ ಸಿಪಾಯಿಯಂಥ ಈ ವ್ಯಕ್ತಿ ಸಿದ್ದಪ್ಪ ಕಂಬಳಿ. ಸ್ವಾತಂತ್ರ್ಯ ಪೂರ್ವದ ವಿದ್ಯಾವಂತರು ಬಹುತೇಕ ಉಡುಪು ವಿನ್ಯಾಸದಲ್ಲಿ ಹೀಗೆಯೇ ಕಾಣಿಸಿಕೊಳ್ಳುತ್ತಿದ್ದರೆಂಬುದಕ್ಕೆ ಕಂಬಳಿಯವರ ಬಾಹ್ಯ ವ್ಯಕ್ತಿತ್ವ ಉದಾಹರಣೆಯಾಗಿದೆ.

ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಿಗಿನಿಗಿ ಕೆಂಡದಂತೆ ಉರಿದು ಬೆಳಕು ನೀಡಿದವರು ಸರ್ ಸಿದ್ದಪ್ಪ ಕಂಬಳಿ (1882–1959). ಅವರು ನಮ್ಮನ್ನಗಲಿ ಸರಿಯಾಗಿ 60 ವರ್ಷಗಳಾಗಿವೆ. ವಕೀಲರಾಗಿ, ಸಮಾಜ ಸುಧಾರಕರಾಗಿ, ಕೆಳವರ್ಗದ ಜನರ ಆಶಾಕಿರಣವಾಗಿ, ಪ್ರಾಮಾಣಿಕ ರಾಜಕಾರಣಿಯಾಗಿ, ಶಿಕ್ಷಣತಜ್ಞರಾಗಿ, ಕರ್ನಾಟಕ ಏಕೀಕರಣ ಚಳವಳಿಯಲ್ಲಿಯೂ ಪಾಲ್ಗೊಂಡು ಹೆಸರಾದವರು ಕಂಬಳಿಯವರು. ಮಹಾತ್ಮ ಗಾಂಧೀಜಿ ಅವರು 1921ರ ಆಸುಪಾಸಿನಲ್ಲಿ ಸಿದ್ದಪ್ಪ ಕಂಬಳಿ ಅವರನ್ನು ಭೇಟಿ ಮಾಡಿ ಕೆಲವು ವಿಚಾರ ಚರ್ಚಿಸಲು ಉದ್ದೇಶಿಸಿದ್ದರು. ಅಂದರೆ ಇವರ ಪ್ರಭಾವ ಎಷ್ಟಿರಬಹುದು ಎಂದು ಯೋಚಿಸಬೇಕು.

ಅಂದುಕೊಂಡಂತೆ ಗಾಂಧೀಜಿ ಹಾಗು ಸಿದ್ದಪ್ಪ ಕಂಬಳಿ ಅವರ ಭೇಟಿ ಗೌಪ್ಯವಾಗಿ ಆಗುತ್ತದೆ. ಹಲವು ವಿಚಾರಗಳ ಚರ್ಚೆ ಆದರೂ ಸೈದ್ಧಾಂತಿಕ ವಿಚಾರಗಳಿಂದ ಒಮ್ಮತಕ್ಕೆ ಬರಲಾರದೆ ಜೊತೆಗೂಡಿ ಕೆಲಸ ಮಾಡಲಾಗಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಸರದಾರ್ ವಲ್ಲಭಬಾಯಿ ಪಟೇಲ್ ಹೆಸರು ಮುಂಚೂಣಿಗೆ ಬಂದದ್ದು ಗೊತ್ತು. ಗುಜರಾತಿನ ಈ ಪ್ರಭಾವಿಯನ್ನು ತಮ್ಮ ರಾಜಕೀಯ ಪ್ರಭಾವಕ್ಕೆ ಸೆಳೆದಂತೆ ಕರ್ನಾಟಕದ ಕಂಬಳಿ ಅವರನ್ನು ಸೆಳೆಯಲು ಗಾಂಧೀಜಿ ಅಪೇಕ್ಷಿಸಿದ್ದರು. ಅವರೀರ್ವರು ಗುಟ್ಟಾಗಿ ಚರ್ಚಿಸಿದ್ದು ಆಗ ಭಾರೀ ಸುದ್ದಿ ಮಾಡಿತ್ತು.

ಗಾಂಧೀಜಿ ಬ್ರಿಟೀಷರೊಂದಿಗೆ ಅಸಹಕಾರ ಚಳವಳಿ ಬೋಧಿಸುತ್ತಿದ್ದರೆ, ಕಂಬಳಿಯವರು ಬ್ರಿಟಿಷರೊಂದಿಗೆ ಸಹಕಾರವನ್ನು ಪ್ರತಿಪಾದಿಸುತ್ತಿದ್ದರು. ಬ್ರಿಟಿಷರೊಂದಿಗೆ ಅಸಹಕಾರ ಮಾಡಿದರೆ ತಾವು ಪ್ರತಿಪಾದಿಸುತ್ತಿದ್ದ ಹಿಂದುಳಿದ ವರ್ಗಗಳ ಶಿಕ್ಷಣ, ಅಭಿವೃದ್ಧಿ ಮತ್ತಿತರ ಕೆಲಸಗಳು ಕೈಗೂಡುವುದು ಸಾಧ್ಯವಿಲ್ಲ ಎಂದು ಅವರು ತಿಳಿದಿದ್ದರು.

ಸ್ವಾತಂತ್ರ್ಯ ಭಾರತಕ್ಕಾಗಿ ವಿದ್ಯಾರ್ಥಿಗಳು ಶಾಲೆ–ಕಾಲೇಜುಗಳನ್ನು ಬಹಿಷ್ಕರಿಸಿ ಹೋರಾಟ ಮಾಡಬೇಕು. ಚಳವಳಿಯನ್ನು ಬಲಪಡಿಸಬೇಕು ಎಂಬುದು ಗಾಂಧೀಜಿ ಆಶಯ. ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿದರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಡಕಾಗುತ್ತದೆ. ಹೀಗಾಗಿ ಅವರು ಇದರಿಂದ ದೂರವಿರಬೇಕು ಎಂಬುದು ಕಂಬಳಿ ಅವರ ಪ್ರತಿಪಾದನೆ. ಗಾಂಧೀಜಿ ಕರೆ ಕೊಟ್ಟ ಚಳವಳಿಯಿಂದ ಅವರು ದೂರವೇ ಉಳಿದರು. ತಾವು ಮಾಡುತ್ತಿರುವ ನೂರಕ್ಕೆ 80ರಷ್ಟು ಇರುವ ಹಿಂದುಳಿದ ವರ್ಗಗಳ ಜನರ ಸೇವೆಯು ರಾಷ್ಟ್ರೀಯ ಸೇವೆ ಅಲ್ಲವೆ? ಎಂದು ಕೇಳಿ ಗಾಂಧೀಜಿ ಅವರನ್ನೇ ತಬ್ಬಿಬ್ಬು ಮಾಡಿದ್ದರು.

ಇದು ಅಂಬೇಡ್ಕರ್–ಗಾಂಧೀಜಿ ಅವರಿಬ್ಬರ ನಡುವಿನ ಭಿನ್ನಾಭಿಪ್ರಾಯದ ಕತೆಯಂತೆಯೇ ಇದೆ. ಆದರೆ ಇಲ್ಲೊಂದು ಸ್ವಾರಸ್ಯ ಇದೆ. ಸಿದ್ದಪ್ಪ ಕಂಬಳಿ ಅವರ ಸಲಹೆಯಂತೆ ತಮ್ಮ ವಿದ್ಯೆ ಮತ್ತು ಬುದ್ಧಿವಂತಿಕೆಗೆ ತಕ್ಕುದಾದ ಹುದ್ದೆಯನ್ನು ಆರಿಸಿಕೊಂಡರು ಎಂಬುದು ಬಹುತೇಕರಿಗೆ ತಿಳಿದಿರುವುದಿಲ್ಲ.

ಜಾತ್ಯಾತೀತ ಹಾಗೂ ಮಾನವೀಯ ಮೌಲ್ಯ ಎತ್ತಿ ಹಿಡಿದು, ನಿಷ್ಠುರವೂ ಆಗಿದ್ದ ವ್ಯಕ್ತಿಗೆ "ಸರ್" ಎಂಬ ವಿಶೇಷವಾದ ಬಿರುದು ಏಕೆ ಬಂದಿರಬಹುದು? ಈ ಪ್ರಶ್ನೆ ಸಾರ್ವಜನಿಕರ ಕುತೂಹಲಕ್ಕೆ ಕಾರಣವಾಗಿದೆ. ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ತಳವೂರಿದ್ದ ಕಾಲದಲ್ಲಿ ಭಾರತೀಯ ಹಲವು ಸಮಾಜ ಸೇವಕರಿಗೆ ಈ ಬಿರುದು ಬಂದಿದೆ. ಸಿದ್ದಪ್ಪ ಕಂಬಳಿ ಅವರಿಗೂ ಹೀಗೆ ಬ್ರಿಟನ್ ರಾಣಿಯಿಂದ ಬಳುವಳಿಯಾಗಿ ಬಂದ ಪದವಿ ಇದು.

**ಕುಟುಂಬದ ಹಿನ್ನೆಲೆಯಿಂದ 'ಕಂಬಳಿ':**

ಸಿದ್ದಪ್ಪ ಕಂಬಳಿ ಅವರ ಸಾಮಾಜಿಕ ಕಳಕಳಿ, ಎಲ್ಲ ವರ್ಗದವರನ್ನು ಸಮಾನವಾಗಿ ಕಾಣುವ ದೃಷ್ಟಿ ಮೆಚ್ಚುಗೆಗೆ ಪಾತ್ರವಾಗುವಂತ್ತದ್ದು. ಅವರ ಬಾಲ್ಯದ ಬದುಕಿನತ್ತ ಹೊರಳು ನೋಟ ಬೀರುವುದಾದರೆ, ಕಂಬಳಿ ಮಾರಾಟದ ಕುಟುಂಬದ ಹಿನ್ನೆಲೆ ಇದ್ದುದರಿಂದ ಹೆಸರಿನ ಜೊತೆಗೆ ಕಂಬಳಿ ಸೇರ್ಪಡೆಯಾಗಿ ಅವರು 'ಸಿದ್ಧಪ್ಪ ಕಂಬಳಿ' ಎಂದೇ ಪ್ರಖ್ಯಾತರಾದರು. ತಂದೆ ತೋಟಪ್ಪ ದೃಷ್ಟಿ ಮಾಂದ್ಯರು. ಅವರ ಕುಟುಂಬ ಹುಬ್ಬಳ್ಳಿಯಲ್ಲಿ ನೆಲೆನಿಂತಿತ್ತು. ಸಿದ್ಧಾರೂಢರ ಭಕ್ತರಾದುದರಿಂದ ತೋಟಪ್ಪ ದಂಪತಿಗೆ ಹುಟ್ಟಿದ ಮಗುವಿಗೆ ಸಿದ್ಧಾರೂಢ ಸಿದ್ದಪ್ಪ ಎಂದು ನಾಮಕರಣ ಮಾಡಿದರು. ಮಗು ಸಿದ್ಧಪ್ಪ ಮೂರು ವರ್ಷದವನಿದ್ದಾಗಲೇ ತಂದೆ ತೀರಿಕೊಂಡರು. ತಾಯಿ ಗಂಗವ್ವ ಅನಕ್ಷರಸ್ಥೆ. ಗಂಡನನ್ನು ಕಳೆದುಕೊಂಡ ಆಕೆಗೆ ದಿಕ್ಕೇತೋಚದಾಯಿತು. ಕೂಲಿ ಮಾಡುತ್ತ ಮಗುವನ್ನು ಸಾಕುವುದು ಕಷ್ಟವಾದಾಗ ಲಕ್ಕುಂಡಿಯಲ್ಲಿದ್ದ ತನ್ನ ಬಂಧುಗಳ ಮನೆಗೆ ಕಳುಹಿಸುತ್ತಾರೆ. ಸಿದ್ದಪ್ಪನ ಅಕ್ಕನಿಗೆ ಬಾಲ್ಯ ವಿವಾಹ ಆಗಿದ್ದರಿಂದ ಅವನನ್ನು ಲಕ್ಕುಂಡಿಯಲ್ಲೇ ಇಟ್ಟುಕೊಂಡು ಸಾಕುತ್ತಾರೆ.

ಅಕ್ಕನ ಆಶ್ರಯದಲ್ಲಿ ಬೆಳೆದ ಬಾಲಕ ಸಿದ್ದಪ್ಪ ಶಾಲೆಗೆ ಕಲಿಯಲು ಹೋದಾಗ, ಶಿಕ್ಷಕರು ಇವನ ಬುದ್ದಿವಂತಿಕೆಗೆ



**"ಸರ್" ಎಂಬುದು ಗೌರವದ ಪ್ರತೀಕ:**

ಹೆಸರಿಗೂ ಮುನ್ನ 'ಸರ್' ಎಂದು ಸೇರಿರುವುದು ಗೌರವ ಪ್ರತಿಷ್ಠೆಯ ಪ್ರತೀಕ. ಈಚೆಗೆ 'ನಾಡೋಜ', 'ಡಾಕ್ಟರೇಟ್'ಗಳು ಸೇರ್ಪಡೆ ಆದಂತೆ 'ಸರ್' ಎಂಬುದು ಗೌರವಾನ್ವಿತವಾದ ಪದವಿ. ಸ್ವಾತಂತ್ರ್ಯ ಪೂರ್ವದಲ್ಲಿ ಬೆರಳೆಣಿಕೆಯ ಸಾಧಕರ ಕೊರಳನ್ನು ಅಲಂಕರಿಸಿದೆ. 'ಸರ್' ಪದವಿಗೆ ಪಾತ್ರರಾದವರಲ್ಲಿ ಸಿದ್ದಪ್ಪ ಕಂಬಳಿ ಅವರನ್ನು ಒಳಗೊಡಂತೆ ಹಲವರನ್ನು ಪಟ್ಟಿ ಮಾಡಬಹುದು. ಸರ್ ಮಿರ್ಜಾ ಇಸ್ಮಾಯಿಲ್, ಸರ್ ಕೆ.ಪಿ. ಪುಟ್ಟಣ್ಣಚೆಟ್ಟಿ, ಸರ್ ಸಿರಸಂಗಿ ಲಿಂಗರಾಜ ದೇಸಾಯಿ, ಸರ್ ಎಂ. ವಿಶ್ವೇಶ್ವರಯ್ಯ, ಸರ್ ಸಿ.ವಿ. ರಾಮನ್ ಮೊದಲಾದವರನ್ನು ಹೆಸರಿಸಬಹುದು.

'ಸರ್' ಎಂಬುದು ಬ್ರಿಟನ್ ರಾಣಿ ಕೊಡುವ ಬಿರುದು. KNIGHTHOOD (ನೈಟ್ ಹುಡ್) ಅಂತ ಅದರ ಹೆಸರು. KNIGHT ಅಂದರೆ ಸಾಮ್ರಾಜ್ಯದ ಸೇವೆಯ ಸರದಾರ. ಈ ಪ್ರಶಸ್ತಿ/ಬಿರುದು ಪಡೆದವರು 'ಸರ್' ಎಂದು ಹಾಕಿಕೊಳ್ಳಬಹುದು. ಈಗಲೂ ಬ್ರಿಟನ್ ರಾಣಿ ಈ ಪದವಿ ನೀಡುವುದುಂಟು. ವೆಸ್ಟ್‌ಇಂಡೀಸ್ ಕ್ರಿಕೆಟ್ ದೈತ್ಯ ವಿವಿಯನ್ ರಿಚರ್ಡ್ಸ್, ಇಂಗ್ಲೆಂಡಿನ ಇಯಾನ್ ಬಾತಮ್ ಮೊದಲಾದವರು ಈ ಪಟ್ಟಿಯಲ್ಲಿದ್ದಾರೆ.



downloaded from: www.kpscvaani.com

ತಲೆದೂಗುತ್ತಾರೆ. ತನ್ನ ಚುರುಕು ಬುದ್ಧಿಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಹುಡುಗ ಓದಿನಲ್ಲಿ ಮುಂದೆ ಇದ್ದುದರಿಂದ ಅವನಿಗೆ ಪ್ರೋತ್ಸಾಹಕವಾಗಿ ನಿಂತವರು ಭಾವನಾದ ಅಕ್ಕನ ಗಂಡ ಸಣ್ಣ ಬಸಪ್ಪ. ಪ್ರೌಢಶಿಕ್ಷಣಕ್ಕೆ ಧಾರವಾಡಕ್ಕೆ ಹೋಗಬೇಕಾದ ಸಂದರ್ಭ ಬರುತ್ತದೆ. ಅಲ್ಲಿ ಇಂಗ್ಲೀಷ್ ಕಲಿಕೆ ಆರಂಭವಾಗುತ್ತದೆ. ಆ ಕಾಲಕ್ಕೆ ಧಾರವಾಡದಲ್ಲಿ ಕನ್ನಡ ಬಳಕೆಯೂ ಅಷ್ಟಕಷ್ಟೆ. ಮರಾಠಿ ಪ್ರಾಬಲ್ಯದಲ್ಲಿ ಕನ್ನಡ ನಲುಗಿ ಹೋಗಿರುತ್ತದೆ. 'ಹಳ್ಳಿಗರು ಮಾತಾಡುವ ಭಾಷೆ ಕನ್ನಡ' ಎಂದು ಮೂದಲಿಸುತ್ತಿದ್ದ ಕಾಲ ಅದು. ಹೈಸ್ಕೂಲ್ ಓದುತ್ತಿದ್ದ ಸಿದ್ದಪ್ಪನಿಗೆ ಕನ್ನಡ ಕಡೆಗಣಿಸುತ್ತಿದ್ದುದರ ಬಗ್ಗೆ ನೋವುಂಟಾಗುತ್ತದೆ. ಕನ್ನಡ ಮಾತಾಡುವವರನ್ನು ಶೋಷಣೆ ಮಾಡಲಾಗುತ್ತದೆ ಎಂಬ ಅರಿವು ಮೂಡಿದಾಗ ಅವಮಾನ ಮಾಡಿದವರ ವಿರುದ್ಧ ತಿರುಗಿ ಬೀಳುತ್ತಾನೆ. ಮುಂದೆ ಲಕ್ಕುಂಡಿಯಿಂದ ಧಾರವಾಡಕ್ಕೆ ಕಾಲುನಡಿಗೆಯಲ್ಲೇ ಬಂದು ಆಸಕ್ತಿಯಿಂದ ಕಲಿತು ಮೆಟ್ರಿಕ್ ಪಾಸು ಮಾಡುತ್ತಾನೆ. ಸಂಬಂಧಿಕರಿಗೂ, ಅನಕ್ಷರಸ್ಥೆ ತಾಯಿಗೂ ಇದರಿಂದ ಬಹಳ ಸಂತೋಷವಾಗುತ್ತದೆ.

**ಪುಣೆ ಡೆಕ್ಕನ್ ಕಾಲೇಜು ಹಾಗೂ ಮುಂಬೈನಲ್ಲಿ ವಿದ್ಯಾಭ್ಯಾಸ:**

ಮೆಟ್ರಿಕ್ ನಂತರದ ವಿದ್ಯಾಭ್ಯಾಸಕ್ಕೆ ದೂರದ ಪುಣೆಗೆ ಹೋಗಲು ಆರ್ಥಿಕ ಪರಿಸ್ಥಿತಿ ಎದುರಾಗುತ್ತದೆ. ಪುನಃ ತನ್ನ ಅಕ್ಕ ಭಾವನವರೇ ಸಹಾಯ ಹಸ್ತ ಚಾಚಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರೆಯಲು ಅನುವು ಮಾಡಿಕೊಡುತ್ತಾರೆ. ಜೊತೆಗೆ ಓದಿನಲ್ಲಿ ಮುಂದೆ ಇದ್ದುದರಿಂದ ಸ್ಕಾಲರ್‌ಶಿಪ್ ಸಹಾ ಬರುತ್ತಿರುತ್ತದೆ. ಆ ಕಾಲದಲ್ಲಿ ಧಾರವಾಡ-ಹುಬ್ಬಳ್ಳಿ ಒಳಗೊಂಡಂತೆ ಉತ್ತರ ಕರ್ನಾಟಕದ ಭಾಗಗಳಿಗೆ ಪುಣೆ-ಮುಂಬೈ ನಗರಗಳೇ ಹತ್ತಿರದ ದೊಡ್ಡ ಕಾಲೇಜುಗಳನ್ನು ಹೊಂದಿದವುಗಳಾಗಿದ್ದವು. ಅದೇ ರೀತಿ ಹಳೆ ಮೈಸೂರು ಪ್ರಾಂತ್ಯಕ್ಕೆ ಮದ್ರಾಸ್ ಕೇಂದ್ರವಾಗಿತ್ತು.

ಪುಣೆಯ ಪರಿಸರ, ಕಾಲೇಜು ವಾತಾವರಣ, ಬೋಧಕ ವರ್ಗದ ಪ್ರೀತಿಯಿಂದ ಸಿದ್ದಪ್ಪ ಎಲ್ಲರ ವಿಶ್ವಾಸಕ್ಕೆ ಪಾತ್ರರಾದರು. ಇತಿಹಾಸ ಹಾಗೂ ಅರ್ಥಶಾಸ್ತ್ರಗಳನ್ನು ಪ್ರಧಾನ ವಿಷಯಗಳನ್ನಾಗಿ ಆಯ್ದುಕೊಂಡು ಪದವಿಯಲ್ಲಿ ಮೊದಲಿಗರಾಗಿ ಪಾಸಾದರು. ಆ ಕಾಲದಲ್ಲಿ ಪದವಿ ಶಿಕ್ಷಣ ಪಡೆದವರೆಂದರೆ ಭಾರೀ ಮರ್ಯಾದೆ, ಗೌರವ ಪ್ರಾಪ್ತವಾಗುತ್ತಿತ್ತು. ಸರ್ಕಾರವೂ ಆದ್ಯತೆಯ ಮೇರೆಗೆ ಉದ್ಯೋಗ ನೀಡುತ್ತಿತ್ತು. ಸಿದ್ದಪ್ಪನಿಗೆ ಆರ್ಥಿಕವಾಗಿ ಬಡತನ ಇದ್ದರೂ ಉದ್ಯೋಗದ ಅಪೇಕ್ಷೆ ಪಡಲಿಲ್ಲ. ಪದವಿ ನಂತರ ಶಿಕ್ಷಣ ಮುಂದುವರೆಸಲು ಮನಸ್ಸು ಮಾಡಿದರು. ಮುಂಬೈಗೆ ತೆರಳಿ ಕಾನೂನು ವಿದ್ಯಾಭ್ಯಾಸ ಮಾಡಿದರು. ಮುಂಬೈ ಪ್ರಾಂತ್ಯ/ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಹೊರಬಿದ್ದರು. ಆಗ ಅದು ಮುಂಬೈ ಹಾಗೂ ಉತ್ತರ ಕರ್ನಾಟಕಕ್ಕೆ ಮಹತ್ವದ ಸಂಗತಿಯಾಯಿತು.

**ವಕೀಲ ವೃತ್ತಿ ಹಾಗು ರಾಜಕೀಯ ಪ್ರವೇಶ:**

ಕಾನೂನು ಶಿಕ್ಷಣದಲ್ಲಿ ತೇರ್ಗಡೆ ಆದವರಿಗೆ ಆಗಿನ ಸರ್ಕಾರ ನೇರವಾಗಿ ನ್ಯಾಯಾಧೀಶರನ್ನಾಗಿ ಆಯ್ಕೆ ಮಾಡುವ ಅವಕಾಶ ಇತ್ತು. ಈ ಅವಕಾಶವನ್ನು ಪಡೆಯಲು ಅವರು ಆಸಕ್ತರಾಗಲಿಲ್ಲ. ಜನ ಸಾಮಾನ್ಯರಿಗೆ ಕಾನೂನಿನ ಸಹಾಯ ಮಾಡಬೇಕೆಂಬ ಅಪೇಕ್ಷೆಯಿಂದ ಛಲಹೊತ್ತು ವಕೀಲ ವೃತ್ತಿ ಆಯ್ದುಕೊಂಡರು. ಹುಬ್ಬಳ್ಳಿ ಅವರ ಬಾಲ್ಯವನ್ನು, ಶಿಕ್ಷಣವನ್ನು ನೀಡಿದ್ದ ಪ್ರದೇಶವಾದ್ದರಿಂದ ಅದನ್ನೇ ತಮ್ಮ ಕೇಂದ್ರವನ್ನಾಗಿಸಿಕೊಂಡರು. ಹಿಂದುಳಿದ ವರ್ಗಗಳಿಗೆ ಆಗುತ್ತಿದ್ದ ಅನ್ಯಾಯಗಳನ್ನು ತಡೆಯಲು ತಮ್ಮ ವಕೀಲ ವೃತ್ತಿಯನ್ನು ಪ್ರಾಮಾಣಿಕವಾಗಿ ಬಳಸಿಕೊಂಡರು. ಹೀಗಾಗಿ ಸಿದ್ದಪ್ಪನವರು ಮನೆತನದ ಹಿನ್ನೆಲೆಯಿಂದಾಗಿ 'ಸಿದ್ದಪ್ಪ ಕಂಬಳಿ' ಆಗಿ ಜನಾನುರಾಗಿಯಾದರು. ಇವರ ಜನಪ್ರಿಯತೆಗೆ ಮೇಲುವರ್ಗದ ವಕೀಲರು ಷಡ್ಯಂತ್ರ ರೂಪಿಸಿದರೂ, ಅದು ಯಶಸ್ವಿ ಆಗಲಿಲ್ಲ.

ಸಿದ್ದಪ್ಪ ಕಂಬಳಿ ಅವರೆಂದರೆ ಹುಬ್ಬಳ್ಳಿ-ಧಾರವಾಡದ ಹತ್ತಾರು ಹಳ್ಳಿಗಳಿಗೆ ನಮ್ಮವರು ಎಂಬ ಅಭಿಮಾನ. ಅವರ ಸರಳತೆ ನ್ಯಾಯ ಪರ ನಿಲುವು, ಶಿಸ್ತು, ಜನರನ್ನು ಮತ್ತಷ್ಟು ಹತ್ತಿರಕ್ಕೆ ಸೆಳೆಯಿತು. ಹಿಂದುಳಿದ ಮತ್ತು ತುಳಿತಕ್ಕೊಳಗಾದವರ ಆಶಾಕಿರಣವಾಗಿ ಅವರು ಗೋಚರಿಸಿದರು. ಈ ನಡುವೆ ಅಕ್ಕನ ಮಗಳನ್ನೇ ಕೈ ಹಿಡಿದು ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ತಮ್ಮ ಜನಪ್ರಿಯತೆಯನ್ನು ಹೊರೆಗಚ್ಚಲು ಹುಬ್ಬಳ್ಳಿ ನಗರಸಭಾ ಚುನಾವಣೆಗೆ ಸ್ಪರ್ಧಿಸಿ ಗೆಲುವಿನ ನಗೆ ಬೀರಿದರು. ಮುಂದೆ ಹುಬ್ಬಳ್ಳಿ ನಗರಸಭೆಯ ಅಧಿಕಾರೇತರ ಅಧ್ಯಕ್ಷರಾಗಿ, ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ ಸದಸ್ಯರಾಗಿ, ಅಧ್ಯಕ್ಷರಾಗಿ ಆಯ್ಕೆಯಾದರು. ಮೇಲ್ಜಾತಿಯ ವಕೀಲರು, ನ್ಯಾಯಾಧೀಶರ ನಡುವೆ ಬುದ್ಧಿವಂತರಾದ ಕಂಬಳಿ ಏಳಿಗೆ ಪಡೆಯಲು ಹೋರಾಟ ಮಾಡಬೇಕಾದಾಗ ಧಾರವಾಡ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದದ್ದು ಹೆಚ್ಚುಗಾರಿಕೆಯೂ ಹೌದು.

**ಮುಂಬೈನ ವಿಧಾನಪರಿಷತ್ ಸದಸ್ಯ ಹಾಗು ಕನ್ನಡ ಕಾಳಜಿ:**

ಹಲವು ಸವಾಲುಗಳು, ವ್ಯಕ್ತಿಗತ ಈರ್ಷ್ಯೆಗಳು ಅವರ ಬೆಳವಣಿಗೆಗೇನೂ ಅಡ್ಡಿ ಬರಲಿಲ್ಲ. ಹೋರಾಟದ ಬದುಕಿನಲ್ಲಿ ಹಿಂತಿರುಗಿ ನೋಡದೆ ಮುನ್ನಡೆಯುತ್ತಾ ಸಾಗಿದರು. ಮುಂದೆ ದೊಡ್ಡ ಹುದ್ದೆಗಳೂ ಅವರನ್ನು ಹುಡುಕಿ ಬಂದವು. ಮುಂಬೈನ ವಿಧಾನ ಪರಿಷತ್ತಿನ ಸದಸ್ಯರಾದ ಬೆನ್ನಲ್ಲೇ ಉಪಸಭಾಪತಿಗಳಾಗಿಯೂ ಆಯ್ಕೆಯಾದರು. ಇದು 1924ರ ಅವಧಿ. ಅದೇ ಕಾಲಕ್ಕೆ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲೇ ಹಮ್ಮಿಕೊಳ್ಳಲಾಗಿದ್ದ ಮೊದಲನೇ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದರು. ಮರಾಠಿ, ಗುಜರಾತಿ ಭಾಷೆಗಳ ಪ್ರಾಬಲ್ಯ ಅಧಿಕವಾಗಿದ್ದ ಮುಂಬೈ ಸರ್ಕಾರದಲ್ಲಿ ಕನ್ನಡ ಕೇಳುವವರೇ ಇರಲಿಲ್ಲ. ರಾಜ್ಯದ ಒಳಭಾಗಗಳಾದ ಬೆಳಗಾವಿ, ಬಿಜಾಪುರ, ಬಳ್ಳಾರಿಗಳಲ್ಲೂ ಮರಾಠಿ, ಹಿಂದಿ, ತೆಲುಗು, ಪ್ರಾಬಲ್ಯತೆ ಹೊಂದಿದ್ದವು. ಕನ್ನಡದ ಹೀನಾಯ ಸ್ಥಿತಿಗೆ ಮರುಗಿದ ಕಂಬಳಿ ಅವರು, ಮುಂಬೈ ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಗೆ ಒತ್ತಾಯಿಸುತ್ತಾ ಬಂದರು. ಭಾಷೆಯ ಅಸಮಾನತೆ ತೊಡೆದು ಹಾಕಲು ಶ್ರಮಿಸಿದಾಗಲೇ ಕನ್ನಡದಲ್ಲೂ ಸರ್ಕಾರಿ ಆದೇಶಗಳು ಹೊರಡುವಂತೆ ಮಾಡಿದರು.

1927ರಲ್ಲಿ ಸೈಮನ್ ಕಮೀಷನ್ ಭಾರತಕ್ಕೆ ಬಂದಾಗ ಅವರೆದುರು ಹೋಗಿ ಕರ್ನಾಟಕ ಪ್ರಾಂತ್ಯದ ರಚನೆಯ ಬಗೆಗೆ ಒತ್ತಾಯಿಸಬೇಕೆಂಬ ಅಭಿಪ್ರಾಯ ಕಂಬಳಿ ಅವರದ್ದಾಗಿತ್ತು. ಆದರೆ ಕರ್ನಾಟಕದ ಕ್ರಾಂತಿಯ ಮುಂಚೂಣಿಯಲ್ಲಿದ್ದ ಕೆಲವು ಕಾಂಗ್ರೆಸ್ಸಿಗರು ಅವರೆದುರು ಹೋಗದಂತೆ ಒತ್ತಾಯಿಸಿದಾಗ ಅವರು ಹೋಗಲಿಲ್ಲ.

**ಶಿಕ್ಷಣ ಮಂತ್ರಿಯಾಗಿ ಕರ್ನಾಟಕ ಕಾಲೇಜು ಉಳಿಸಿದ್ದು:**

ಕಂಬಳಿಯವರು 1932ರಲ್ಲಿ ಮುಂಬೈ ಸರ್ಕಾರದಲ್ಲಿ ಮಹತ್ವದ ಹುದ್ದೆ ಅಲಂಕರಿಸಿದರು. ಶಿಕ್ಷಣ ಮಂತ್ರಿಯಾಗಿ ಅಧಿಕಾರ ಪಡೆದು ರಾಜ್ಯದ ಅನೇಕ ಮುಖಂಡರ ಅಭಿಮಾನಕ್ಕೆ ಪಾತ್ರರಾದರು. ದೇಶಪಾಂಡೆ ಗಂಗಾಧರರಾಯರು, ಕಂಬಳಿ ಅವರ ಬಳಿ ಹೋಗಿ ಅಭಿನಂದಿಸಿ ಬಂದರು. ಆದರೆ ಧಾರವಾಡದ ಕರ್ನಾಟಕ ಕಾಲೇಜಿಗೆ ಆರ್ಥಿಕ ಮುಗ್ಗಟ್ಟು ಎದುರಾದಾಗ ಅದನ್ನು ಮುಚ್ಚುವ ನಿರ್ಧಾರ ಹೊರಟಿತ್ತು. ಕಂಬಳಿ ಅವರು ಕಾಲೇಜನ್ನು ಉಳಿಸಿಕೊಳ್ಳಲು ಶತ ಪ್ರಯತ್ನ ನಡೆಸಿ, ಕಾಲೇಜನ್ನು ಮುಚ್ಚುವುದಾದರೆ ನನ್ನ ರಾಜೀನಾಮೆ ಸ್ವೀಕರಿಸಿ ಎಂದು ಸರ್ಕಾರದ ಮೇಲೆ ಒತ್ತಡ ಹಾಕಿದರು. ಕಂಬಳಿ ಅವರ ಮಾತಿಗೆ ಬೆಲೆ ಕೊಟ್ಟ ಸರ್ಕಾರ ಕಾಲೇಜನ್ನು ಉಳಿಸಿತು. ಜೊತೆಗೆ ಕರ್ನಾಟಕ ಕಾಲೇಜು ಮೇಲ್ದರ್ಜೆಗೂ ಏರಿತು. ಈ ನಡುವೆ ಬೆಳಗಾವಿಯ ಲಿಂಗರಾಜ ಕಾಲೇಜಿನ ಸ್ಥಾಪನೆಗೂ ಅವರು ಶ್ರಮಿಸಿದರು. ಜೊತೆಗೆ ರಾಜ್ಯದ ಅಭ್ಯುದಯದ ಕನಸು ಕಾಣುತ್ತಲೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಕನಸನ್ನೂ ಕಂಡರು.

ಈ ಸಂದರ್ಭದಲ್ಲಿ ಮಹತ್ವದ ಸಂಗತಿಯೊಂದನ್ನು ಪ್ರಸ್ತಾಪಿಸಲೇಬೇಕಾಗಿದೆ. ಅಪಾರ ವಿದ್ವತ್ ಹೊಂದಿದ್ದ ಭಾರತದ ಸಂವಿಧಾನದ ಶಿಲ್ಪಿ ಎಂದೇ ಕರೆಯಲ್ಪಡುವ ಶೋಷಿತ ಜನಾಂಗದ ಆಶಾಕಿರಣ ಡಾ. ಬಿ.ಆರ್ ಅಂಬೇಡ್ಕರ್ ಅವರಿಗೆ ಮುಂಬೈ ಕಾನೂನು ಕಾಲೇಜಿನಲ್ಲಿ ಮೊದಲಿಗೆ ಪ್ರಾಧ್ಯಾಪಕರನ್ನಾಗಿ ನೇಮಿಸುವ ಸಂದರ್ಭವು ಶಿಕ್ಷಣ ಸಚಿವರಾಗಿದ್ದ ಸಿದ್ದಪ್ಪ ಕಂಬಳಿ ಅವರಿಗೆ ಬಂದಿತ್ತು. ಇದಕ್ಕೂ ಮೊದಲು ಉದ್ಯೋಗದ ಅವಶ್ಯಕತೆ ಇದ್ದುದರಿಂದ ಅಂಬೇಡ್ಕರ್ ಅವರು ಶಾಹು ಮಹಾರಾಜರ ಆಸ್ಥಾನದಲ್ಲಿ ಯಾವುದಾದರೂ ನೌಕರಿ ಮಾಡಲು ಸಿದ್ಧರಿದ್ದರು. ಆದರೆ ಕಂಬಳಿ ಅವರೇ ಅಂಬೇಡ್ಕರ್ ಅವರ ಬುದ್ಧಿವಂತಿಕೆಗೆ ತಕ್ಕುದಾದ ಹುದ್ದೆಗೇ ಹೋಗುವಂತೆ ಸೂಚಿಸಿದ್ದರು.

**ನಾಸಿಕ್ ಲಂಚ ಪ್ರಕರಣ:**

ಮುಂಬೈ ಪ್ರಾಂತ್ಯದ ಶಿಕ್ಷಣ ಮಂತ್ರಿಯ ಸ್ಥಾನದ ಜೊತೆಗೆ ಅಬಕಾರಿ ಮಂತ್ರಿ ಆಗಿದ್ದ ಕಂಬಳಿ ಅವರ ಅಧಿಕಾರಾವಧಿಯಲ್ಲಿ ಪ್ರಾಮಾಣಿಕತೆ ಒರೆಗೆ ಹಚ್ಚುವ ಘಟನೆಯೊಂದು ನಡೆಯುತ್ತದೆ. ಇದು ಇವತ್ತಿನ ರಾಜಕಾರಣಕ್ಕೂ ಸಾಮಾಜಿಕ ವ್ಯವಸ್ಥೆಗೂ ಇರುವ ಅಂತರದ ಕಥೆ ಹೇಳುತ್ತದೆ.

ಕಂಬಳಿ ಅವರು ತಮ್ಮ ಸಿಬ್ಬಂದಿ ಜೊತೆಗೆ ನಾಸಿಕ್‌ನಲ್ಲಿದ್ದಾಗ ಮಹತ್ವದ ಕಾಮಗಾರಿ ಕೆಲಸವೊಂದು ತನಗೆ ಬೇಕೆಂದು ಒಬ್ಬ ಪಾರ್ಸಿ ಕಂಟ್ರಾಕ್ಟರ್ ಏಳು ಲಕ್ಷ ರೂ.ಗಳ ಲಂಚ ಕೊಡಲು ಹೋದ. ಆಗ ಅವರು ಆ ಹಣವನ್ನು ಅವನ ಮುಖಕ್ಕೆ ಎಸೆದು "ನಿನ್ನನ್ನು ಜೈಲಿಗೆ ಕಳುಹಿಸುತ್ತಿದ್ದೆ. ಸುಮ್ಮನೆ ಇಲ್ಲಿಂದ ಹೊರಟು ಹೋಗು. ನಾನು ಮಂತ್ರಿ ಆಗಿರುವವರೆಗೆ ನಿನ್ನ ಮುಖ ಕಾಣಿಸಬೇಡ. ನಿನ್ನ ಹೆಸರು ಸರ್ಕಾರದ ಕಪ್ಪು ಪಟ್ಟಿಯಲ್ಲಿರುತ್ತದೆ" ಎಂದು ಎಚ್ಚರಿಕೆ ಕೊಟ್ಟು ಕಳುಹಿಸಿದರು. ಮಂತ್ರಿಯಾಗಿದ್ದಾಗ ಹಾಗೂ ನಂತರವೂ ಖಾಸಗಿ ಭೋಜನಕೂಟಕ್ಕೆ ಅವರು ಎಂದೂ ಹೋದವರಲ್ಲ.

**ಏಕೀಕರಣದಲ್ಲಿ ತೊಡಗಿದ್ದು:**

ಭಾಷಾವಾರು ಪ್ರಾಂತ್ಯ ರಚನೆಗೆ ಆಯೋಗವನ್ನು ನೇಮಿಸುವ ಬಗ್ಗೆ ಕಂಬಳಿ ಅವರಿಗೆ ಅಸಮಾಧಾನವಿತ್ತು. ಯಾವುದೇ ಆಯೋಗದ ಶಿಫಾರಸ್ಸಿನ ಮೂಲಕ ಭಾಷಾವಾರು ಪ್ರಾಂತ್ಯ ರಚನೆ ಆಗುವ ಅವಶ್ಯಕತೆ ಇಲ್ಲ. ಅದು ಸಹಜವಾಗಿ ಆಗುವ ಪ್ರಕ್ರಿಯೆ ಎಂದು ನಂಬಿದ್ದರು. ಆದರೂ ಹುಬ್ಬಳ್ಳಿಗೆ ಬಂದ 'ಧರ್' ಸಮಿತಿಯ ಎದುರು ಸಾಕ್ಷ್ಯ ಹೇಳಿ (ಪ್ರಾರಂಭದಲ್ಲಿ ವಿರೋಧ ವ್ಯಕ್ತಪಡಿಸಿದ್ದರೂ) ಭಾಷಾವಾರೂ ಪ್ರಾಂತ್ಯ ರಚನೆಯು ಅವಶ್ಯಕ ಎಂದು ಅವರು ಮನವರಿಕೆ ಮಾಡಿಕೊಟ್ಟರು. ಅಧಿಕಾರದಲ್ಲಿದ್ದಾಗ ನೇರವಾಗಿ ಭಾಷಾವಾರು ಪ್ರಾಂತ್ಯ ರಚನೆಯ ಕುರಿತು ಕಂಬಳಿಯವರು ಏನೂ ಹೇಳುತ್ತಿರಲಿಲ್ಲ. ಆಗ ಅನೇಕರು ಕಂಬಳಿ ಅವರು ಏಕೀಕರಣದ ವಿರೋಧಿಗಳು ಎಂದೂ ಕರೆದಿದ್ದುದೂ ಉಂಟು. ತಮ್ಮ ಸ್ನೇಹಿತ ಸಿದ್ದಪ್ಪ ಹೊಸಮನಿ ಅವರ ಜೊತೆಗೆ ಕರ್ನಾಟಕ ಏಕೀಕರಣದ ವಿಚಾರದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದರು. ಕರ್ನಾಟಕ ಏಕೀಕರಣ ಆಗಲೇಬೇಕೆನ್ನುವ ಖಚಿತ ವಿಚಾರ ಹೊಂದಿದ್ದ ಕಂಬಳಿ ಅವರಿಗೆ ಮೊದಲಿನಿಂದಲೂ ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೀತಿ.

**ಕನ್ನಡ ಹಾಗೂ ಕರ್ನಾಟಕದ ಕನಸು:**

1937ರಲ್ಲಿ ಮುಂಬೈ ವಿಧಾನಸಭೆಯಲ್ಲಿ ಅಪರೂಪದ ಘಟನೆ ಜರುಗಿತು. ಶಾಸಕರಾಗಿ ಆಯ್ಕೆಯಾಗಿದ್ದ ಅಂದಾನಪ್ಪ ದೊಡ್ಡಮೇಟಿ ಅವರು ಮುಂಬೈ ವಿಧಾನಸಭೆಯಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ಮಾತಾಡಿದರು. ಆಗ ಸಿದ್ದಪ್ಪ ಕಂಬಳಿ ಅವರು ದೊಡ್ಡಮೇಟಿ ಅವರನ್ನು ಅಪ್ಪಿಕೊಂಡು ಸಂತೋಷ ವ್ಯಕ್ತಪಡಿಸಿದರು.

"ಕರ್ನಾಟಕ ರಾಜ್ಯ ಬಂದೇ ಬರುತ್ತದೆ. ಅದು ಬರುವುದು ಅನಿವಾರ್ಯ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ." ಎಂದು ನಂಬಿದ್ದ ಸಿದ್ದಪ್ಪ ಕಂಬಳಿ ಕರ್ನಾಟಕ ಏಕೀಕರಣ ಆಗುವ ಹೊತ್ತಿಗೆ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. 'ಸರ್' ಪದವಿಯನ್ನು ಪಡೆದಿದ್ದ ಸಿದ್ದಪ್ಪ ಕಂಬಳಿ ಅವರನ್ನು ಜನರು 'ಸರ್' ಸಾಹೇಬರು" ಎಂದೇ ಕರೆಯುತ್ತಿದ್ದರು. ಹಿಂದುಳಿದ ವರ್ಗಗಳ ಬಗ್ಗೆ ಕನಸು ಕಂಡದ್ದು ಮಾತ್ರವಲ್ಲದೆ ಅದನ್ನು ನನಸು ಮಾಡಿದವರು ಸರ್ ಸಿದ್ದಪ್ಪ ಕಂಬಳಿ ಅವರು. ಈ ನಾಡು ಗಡಿನಾಡು, ಗಡಿ ನಾಡಿ ನಾಚೆಯ ಕನ್ನಡ ಕಂಪಿನ ದಿಟ್ಟ ರಾಜಕಾರಣಿ ಮುತ್ಸದ್ದಿಯನ್ನು ಸದಾ ನೆನೆಯುತ್ತದೆ. ■



downloaded from: www.kpscvaani.com



# ಬಿಂಕದ ಬನವಾಸಿ

"ಚಾಗದಭೋಗದಕ್ಕರದಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೋ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್"

ಡಾ. ಬಿ. ಆರ್. ಮಮತಾ
ಕನ್ನಡಕ್ಕೆ-ರಮೇಶ ಕಂಗೇರಿ

ಏಳನೇ ತರಗತಿಯಲ್ಲಿ ಗೆಳೆಯರೊಂದಿಗೆ ಕೂಡಿ ರಾಗವಾಗಿ ಹಾಡಿದ ಈ ಪಂಪನ ಪದ್ಯ ಮನದಲ್ಲಿ ಮೂಡಿಸಿದ ಭಾವಗಳು, ಅನುರಣಿಸಿದ ಚಿತ್ರಗಳು ಅಪೂರ್ವ. ಪದ್ಯದ ಲಯಗಾರಿಕೆಗೋ, ಪದ್ಯವನ್ನು ವಿಂಗಡಿಸಿ, ವಿವರಿಸಿ, ಉದಾಹರಣೆಗಳೊಂದಿಗೆ ಹೇಳಿದ ಕನ್ನಡ ಪಂಡಿತರ ವಿವರಣೆಗೋ ಮನ ಆಗಲೇ ಸೋತಿತ್ತು.



ನಾಡಿನ ಕುರಿತು, ನಾಡವರ ಕುರಿತು ಅದೆಂತಹ ಉದಾತ್ತ ವಿವರಣೆ. ತ್ಯಾಗ, ಭೋಗ, ಗೇಯತೆ, ಕವಿಗೋಷ್ಠಿಗಳ ಇಂಪು, ಇವುಗಳನ್ನೆಲ್ಲ ಸವಿಯುವ ಜೀವಿತವೇ ಬಹು ದೊಡ್ಡ ಬದುಕು. ಬನವಾಸಿಯಲ್ಲಿ ಕೋಗಿಲೆಯಾಗಾದರೂ ಹುಟ್ಟಬೇಕು ಇಲ್ಲವೇ ಮರಿದುಂಬಿಯಾಗಾದರೂ ಹುಟ್ಟಬೇಕು ಎನ್ನುವ ಉತ್ಕಟ ಭಾವವನ್ನು ಕವಿಯಲ್ಲಿ ಹುಟ್ಟಿಸಿದ ಬನವಾಸಿಯನ್ನು ನೋಡಲೇ ಬೇಕು ಎಂದೆನಿಸಿತ್ತು.

ಸಿರ್ಸಿಯಲ್ಲಿ ಒಂದು ಕೌಟುಂಬಿಕ ಸಮಾರಂಭ. ನೋಡಿದ್ದ ಜನರನ್ನೇ ನೋಡಿ ಚಿಟ್ಟು ಹಿಡಿದಿತ್ತು. ಕೆಲಸಕ್ಕೆ ಬಾರದ ಕುಟುಂಬದ ರಗಳೆ ಅಲ್ಲಿಂದ ಓಡು ಓಡು ಎಂದಿತ್ತು. ಮಾತಿನ ಮಧ್ಯದಲ್ಲೆಲ್ಲೋ ಬನವಾಸಿ ಇಲ್ಲಿಂದ 23ಕಿ.ಮೀ.ಗಳಷ್ಟೇ ಎನ್ನುವ ಮಾಹಿತಿ ಕಿವಿಗೆ ಬಿದ್ದಿತ್ತು. ಕಾರು ಹತ್ತಿದೆ, ಅವರಿವರನ್ನು ಕೇಳಿ ಬನವಾಸಿಯ ದಾರಿ ಹಿಡಿದೆ. ಅಕ್ಕ ಪಕ್ಕದಲ್ಲಿ ಹಸಿರಿನ ಚಿತ್ತಣ. ಕಮಲ ತುಂಬಿದ ಕೆರೆಗಳು, ದೂರದಲ್ಲಿ ಇಣುಕುವ ಗುಡ್ಡ ಬೆಟ್ಟಗಳ ಸಾಲು. ಯಾವುದೋ ಒಂದು ಹೊಸ ನಾಡಿಗೆ ಹೊರಟಂತಿತ್ತು. ಬಳೆಗಾರನಿಗೆ ತವರೂರ ಚೆಲುವು ವಿವರಿಸಲು, ನಾನೇ ಸಿದ್ಧತೆ ಮಾಡಿಕೊಂಡಂತಿತ್ತು. ಕೆ.ಎಸ್.ಎನ್.ರನ್ನು ನೆನೆಯುತ್ತಾ ಸೌಂದರ್ಯದ ಸಿರಿಯನ್ನು ಸುರಿದುಕೊಳ್ಳುತ್ತಾ, ಕಾರೋಡಿಸುತ್ತಿದ್ದೆ.

ಬೆಂಗಳೂರು ರಾಜ್ಯದ ರಾಜಧಾನಿಯಾಗುವ ಎಷ್ಟೋ ಶತಮಾನಗಳ ಮುನ್ನವೇ ಬನವಾಸಿ ಕನ್ನಡದ ಮೊತ್ತಮೊದಲ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದಿತ್ತು. ಕ್ರಿ.ಶ 345ರಲ್ಲಿ ಕದಂಬ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಬನವಾಸಿಗೆ ಇದಕ್ಕೂ ಹಿಂದಿನ ಇತಿಹಾಸವಿದೆ ಎನ್ನುವುದು ನನಗೊಂದಿಷ್ಟು ಆಶ್ಚರ್ಯ ಮೂಡಿಸಿತ್ತು.

ಕ್ರಿ.ಪೂ.4000ದಲ್ಲಿ ಮಹಾಭಾರತದ ಕಾಲದಲ್ಲಿಯೇ ವನವಾಸಕ ಎಂದು ಈ ಪ್ರದೇಶವನ್ನು ಕರೆಯಲಾಗುತ್ತಿತ್ತು. ಗ್ರೀಕ್ ಪಂಡಿತ ಟಾಲೆಮಿಯು, 1 ನೇ ಶತಮಾನದ ತನ್ನ ಪ್ರವಾಸಿ ಪುಸ್ತಕದಲ್ಲಿ ಇದನ್ನು ಬನೌಸಿ ಎಂದು ಕರೆದಿದ್ದಾನೆ. ಕದಂಬ ಸಾಮ್ರಾಜ್ಯದ ಕಾಲದಲ್ಲಿ ಇದು ಜಯಂತೀಪುರ ಅಥವಾ ವೈಜಯಂತೀಪುರ ಎಂಬ ಹೆಸರಿನಿಂದ ಬೆಳಗಿತ್ತು.

ಸುಪ್ರಸಿದ್ಧ ಪ್ರವಾಸಿ ಹ್ಯೂ- ಯನ್- ತ್ಸಾಂಗ್ ಅಂತೂ ಕ್ರಿ.ಶ. 630-644ರ ಅವಧಿಯಲ್ಲಿ ಭಾರತ ಪ್ರವಾಸ ಮಾಡುತ್ತಾ ಈ ಪ್ರದೇಶವನ್ನು ಕೊಂಕಣಪುರ ಅಥವಾ ಕೊಂಕಣಪುಲೋ ಎಂದು ಹೆಸರಿಸಿದ್ದಾನೆ. ಅವ ಹೇಳಿದಂತೆ ಇಲ್ಲಿ ಜೈನ ಮತ್ತು ಭೌದ್ಧ ದರ್ಮಗಳೆರಡೂ ನೆಲೆ ನಿಂತಿದ್ದವು. 10,000ಕ್ಕೂ ಹೆಚ್ಚು ಭೌದ್ಧ ಭಿಕ್ಷುಗಳಿದ್ದ ಬನವಾಸಿಯಲ್ಲಿ ಹೀನಾಯಾನ ಮತ್ತು ಮಹಾಯಾನ ಪಂಥಗಳೆರಡಕ್ಕೂ ಸೇರಿದ 100ಕ್ಕೂ ಹೆಚ್ಚು ಬೌದ್ಧ ಮಂದಿರಗಳಿದ್ದವು. ಭೌದ್ಧ ಕೃತಿಯಾದ ಮಹಾವಂಶದಲ್ಲಿ, ಸಾಮ್ರಾಟ ಅಶೋಕನು ಬನವಾಸಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸಿದ್ದ ಎಂಬ ಉಲ್ಲೇಖವಿದೆ.

ದಾವಣಗೆರೆಯಲ್ಲಿ ಸಿಕ್ಕ ಕ್ರಿ.ಶ. 1100ರ ಶಾಸನವೊಂದು ಬನವಾಸಿಯನ್ನು ನಂದನವನ ಎಂದು ಉಲ್ಲೇಖಿಸಿದೆ. 1552ರ ವಿಜಯನಗರ ಶಾಸನದಲ್ಲಿ ಇದನ್ನು ಕನಕಾವತಿ ಎಂದು ಕರೆಯಲಾಗಿದೆ. ಐಹೊಳೆಯ 2ನೇ ಪುಲಕೇಶಿಯ ಶಾಸನಗಳಲ್ಲಿ ಇದನ್ನು ಜಲದುರ್ಗ ಎಂದು ಕರೆಯಲಾಗಿದೆ. ಮೂರು ಕಡೆಗಳಲ್ಲಿ ವರದಾ ನದಿಯಿಂದ ಸುತ್ತುವರಿದ ಬನವಾಸಿಯ ನಾಲ್ಕನೇ ದಿಕ್ಕಿನಲ್ಲಿ ಕೋಟೆಯೊಂದನ್ನು ಕಟ್ಟಿದ್ದಿರಬಹುದು.





ಖ್ಯಾತ ಕನ್ನಡ ತಜ್ಞ ರೇಕಿಟ್ಟೆಲ್ ಹೇಳುವಂತೆ, ಬನವಾಸಿ ಎನ್ನುವುದು ಬನ ಮತ್ತು ವಸಿ ಎಂಬ ಎರಡು ಪದಗಳಿಂದ ಹುಟ್ಟಿದ ಹೆಸರಾಗಿರಬಹುದು. ತೀರ ಇತ್ತೀಚೆಗೆ ಅಂದರೆ 2006ರಲ್ಲಿ ಇಲ್ಲಿ ಒಂದು ಐದನೇ ಶತಮಾನದ ನಾಣ್ಯ ದೊರೆತರಿದೆ. ನಾಣ್ಯದ ಮೇಲೆ ಕನ್ನಡ ಲಿಖಿತವಿದೆ. ಪ್ರಾಚ್ಯವಸ್ತುಶಾಸ್ತ್ರ ನಿರ್ದೇಶನಾಲಯದ ಅಭಿಪ್ರಾಯದಂತೆ ಹಳೆಗನ್ನಡ ಲಿಪಿಯನ್ನು ಹೊಂದಿರುವ ಈ ನಾಣ್ಯ ಕ್ರಿ.ಶ. 5ನೇ ಶತಮಾನಕ್ಕೂ ಹಿಂದೆಯೇ ಇಲ್ಲಿ ಟಂಕಸಾಲೆಯಿತ್ತು ಎನ್ನುವ ಅಭಿಪ್ರಾಯಕ್ಕೆ ಸಾಕ್ಷಿ ಒದಗಿಸುತ್ತದೆ.

ಬನವಾಸಿಯತ್ತ ಸಾಗುವಾಗ ನಮ್ಮ ಜೊತೆಯಾಗುವ ಬೆಟ್ಟಗುಡ್ಡಗಳು, ಕಾಡು ಕಣಿವೆಗಳು, ನಿಗೂಢ ಮಂಟಪಗಳು ತಮ್ಮ ಹಿಂದಿರುವ ಇತಿಹಾಸದ ತುಣುಕನ್ನು ನಮಗರುಹಲು ಕಾದಿವೆಯೇನೋ ಎಂಬ ಭಾವ ಮೂಡುತ್ತದೆ. ಗತಕಾಲದ ಸಂದುಗೊಂದುಗಳಲ್ಲಿ ಹಾದು ಹೋಗುವ ಬನವಾಸಿಯತ್ತಣ ಪಯಣವೊಂದು ನಿಲುದಾಣ ಕಂಡುಕೊಳ್ಳುವುದು ಮಧುಕೇಶ್ವರ ದೇವಾಲಯದ ಮುಂಭಾಗದಲ್ಲಿ.

**ಮಧುಕೇಶ್ವರ ದೇವಾಲಯ:**

ವಿವಿಧ ಶಿಲ್ಪಕಲಾ ಶೈಲಿಗಳ ಮಧುರ ಸಂಗಮ ಮಧುಕೇಶ್ವರ ದೇವಾಲಯ. ಐಹೊಳೆಯನ್ನು ಶಿಲ್ಪಕಲೆಯ ಪ್ರಯೋಗಾಲಯ ಎಂದು ಕರೆಯಬಹುದಾದರೆ, ಮಧುಕೇಶ್ವರ ದೇವಾಲಯ ಪ್ರಯೋಗ ಶಾಲೆಯ ಪಂಡಿತರ ಪ್ರಯತ್ನದ ಫಲಿತವಿದ್ದಿರಬಹುದು. ಆರನೇ ಶತಮಾನದಲ್ಲಿ ಆರಂಭಗೊಂಡು ಅನೇಕ ಶತಮಾನಗಳ ಕಾಲ ಕಟ್ಟಲ್ಪಟ್ಟ ಈ ದೇವಾಲಯದಲ್ಲಿ ಕದಂಬರು, ಚಾಲುಕ್ಯರು, ಹೊಯ್ಸಳರು ಮತ್ತು ಸೋಂದಾ ಸಂಸ್ಥಾನದ ಶಿಲ್ಪಿಗಳ ಕೈಚಳಕದ ಸಾಕ್ಷಿಗಳಿವೆ.





downloaded from: www.kpscvaani.com

**ಮಧುಕೇಶ್ವರ ದೇವಾಲಯ ವಾಸ್ತುಶಿಲ್ಪ ಪ್ರೇಮಿಗಳಿಗೆ ರಸದೌತಣ:**

ದೇವಾಲಯದ ಗರ್ಭಗುಡಿ ತುಂಬ ಸಾಧಾರಣವಾಗಿದ್ದು, ಬಾಗಿಲು ಮತ್ತು ಭಾವಣಿಗಳ ಮೇಲೆ ಕನಿಷ್ಠ ಕೆತ್ತನೆಗಳಿವೆ. ಇದರ ಮುಂದಿರುವ ಸಂಕಲ್ಪ ಮಂಟಪ ಚಾಲುಕ್ಯ ಶೈಲಿಯನ್ನು ಬಿಂಬಿಸುತ್ತದೆ. ಇಲ್ಲಿರುವ ಏಳಡಿಗಳ ನಂದಿ, ಒಂದು ಸುಂದರ ಏಕಶಿಲಾ ವಿಗ್ರಹ. ಹೊಯ್ಸಳರ ಕಾಲದಲ್ಲಿ ದೇವಾಲಯಕ್ಕೆ ಸೇರ್ಪಡೆಯಾದ ತ್ರಿಲೋಕ ಮಂಟಪ ಅತ್ಯಂತ ಸೂಕ್ಷ್ಮ ಕೆತ್ತನೆಯ ಕಂಬಗಳು ಮತ್ತು ಅತಿ ಸುಂದರ ಭಾವಣಿಗಳಿಂದ ಸಾಲಂಕೃತಗೊಂಡಿದೆ. ಈ ಮಂಟಪದಲ್ಲಿಯೇ ಹೊಯ್ಸಳರ ನಾಟ್ಯರಾಣಿ ಶಾಂತಲೆ ಅಲ್ಲಮಪ್ರಭುವಿನ ದೈವಿಕ ಸಂಗೀತ ಜ್ಞಾನಕ್ಕೆ, ಶಾಸ್ತ್ರೀಯ ನೃತ್ಯದ ಸವಾಲೊಡ್ಡಿ ನೃತ್ಯ ಮಾಡಿದಳೆನ್ನುವುದು ಇಲ್ಲಿನ ಪ್ರತೀತಿ. ದೇವಾಲಯದ ವಿವಿಧ ಭಾಗಗಳ ವಿವಿಧ ರೂಪಗಳೇ ವಿವಿಧ ಸಾಮ್ರಾಜ್ಯಗಳ ವಿಶಿಷ್ಟ ಶಿಲ್ಪಕಲಾ ಶೈಲಿಗಳಿಂದ ಪ್ರಭಾವಿತವಾದ ಈ ದೇವಾಲಯ ಇಂದಿನ ರೂಪ ಪಡೆಯಲು ಶತಮಾನಗಳ ಕಾಲ ತೆಗೆದುಕೊಂಡಿರಬಹುದು ಎನ್ನುವುದಕ್ಕೆ ಸಾಕ್ಷಿ ಒದಗಿಸುತ್ತದೆ.

ದೇವಾಲಯದಲ್ಲಿ ಪೂಜಿತವಾಗುತ್ತಿರುವ ದೈವ ಶಿವಲಿಂಗವಾದರೂ ಮೂಲತಃ ಈ ದೇವಾಲಯ ವಿಷ್ಣು ಮಂದಿರವಾಗಿದ್ದಿರಬಹುದು ಎನ್ನುವುದಕ್ಕೂ ಪುರಾವೆಗಳಿವೆ. ಇಲ್ಲಿರುವ ಕೇಶವ ಮತ್ತು ಕಾರ್ತಿಕೇಯನ ವಿಗ್ರಹಗಳು ಕದಂಬರ ಕಾಲದ್ದಾಗಿವೆ. ಕನ್ನಡದ ಖ್ಯಾತ ದಂತಕಥೆಯ ಮೂಲಪುರುಷನಾದ ಅಮರಶಿಲ್ಪಿ ಜಕಣಾಚಾರಿಯು ಈ ದೇವಸ್ಥಾನದ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ್ದ ಎಂದು ಹೇಳಲಾಗುತ್ತದೆ. ತ್ರಿಲೋಕ ಮಂಟಪವನ್ನು ಒಂದೇ ಕಲ್ಲಿನಿಂದ ಕಟೆದು ರೂಪಿಸಲಾಗಿದೆ ಎಂದೂ ಹೇಳಲಾಗುತ್ತದೆ.

ತ್ರಿಲೋಕ ಮಂಟಪ ನಿಸ್ಸಂಶಯವಾಗಿ ಹೊಯ್ಸಳ ಶಿಲ್ಪಿಗಳ ರಚನೆಯೇ. ಇಲ್ಲಿನ ನಾಲ್ಕೂ ಸ್ತಂಭಗಳೂ ಶಿಲ್ಪಕಲೆಯ ಪ್ರಾವೀಣ್ಯದ ಪರಮೋಚ್ಚ ಸಾಕ್ಷಿಗಳು. ನುಣುಪು ಗಾಜಿನಷ್ಟು ನಯವಾಗಿರುವ ಈ ಸ್ತಂಭಗಳ ಮೇಲ್ಭಾಗದ ಕೆತ್ತನೆಗಳು ಶಿಲ್ಪಕಲಾ ಚತುರತೆಯ ಉತ್ತುಂಗ ಭಾಗಗಳು. ಈ ಕಂಬಗಳು ಮಂಟಪದಲ್ಲಿ ನಾಟ್ಯ ಸೇವೆ ಸಲ್ಲಿಸುವವರ ಅಸಂಖ್ಯ ಪ್ರತಿಬಿಂಬಗಳನ್ನು ಮೂಡಿಸುತ್ತಾ ನಾಟ್ಯ ಸೇವೆಗೊಂದು ನಿಗೂಢ ದೈವಿಕ ಭಾವ ತಂದುಕೊಡುತ್ತಿದ್ದವು. ಶಿಲ್ಪಕಲಾ ಚತುರತೆಗೆ ಇದೊಂದು ಜ್ವಲ ಸಾಕ್ಷಿ.

ಸಂಕಲ್ಪ ಮಂಟಪದಲ್ಲಿರುವ ಏಳು ಅಡಿಯ ಏಕಶಿಲಾ ನಂದಿ ಕೂಡ ಒಂದು ವಿಸ್ಮಯಕಾರಿ ರಚನೆ. ನಂದಿಯನ್ನು ನೋಡಿದ ಕೂಡಲೇ ನಮಗನ್ನಿಸುವುದು ಈ ನಂದಿ ಶಿವಲಿಂಗವನ್ನು ಬಿಟ್ಟು ಬಲಗಡೆಗೆ ಬೇರೆಲ್ಲೋ ನೋಡುತ್ತಿದೆಯಲ್ಲಾ ಎನಿಸುತ್ತದೆ. ಇದಕ್ಕೆ ಕಾರಣವೂ ಇದೆ. ನಂದಿಯ ಎಡಗಣ್ಣು ಶಿವಲಿಂಗವನ್ನು ನೋಡುತ್ತಿದ್ದರೆ, ಬಲಗಣ್ಣು ಶಿವಾಲಯದ ಬಲಗಡೆಗಿರುವ ಪಾರ್ವತಿ ದೇವಿಯ ದೇವಾಲಯದ ದೇವಿಯ ಮೇಲೆ ನೆಟ್ಟಿದೆ. ಇಲ್ಲಿನ ಕಂಬಗಳ ಸಂಕೀರ್ಣತೆಯನ್ನೂ ಮೀರಿ ಈ ನಂದಿ ಪಾರ್ವತಿಯ ಮೇಲೆ ತನ್ನ ಬಲಗಣ್ಣಿನ ದೃಷ್ಟಿ ನೆಟ್ಟಿರುವುದು ನಿಜವಾಗಿ ಕೌತುಕ. ಇದನ್ನು ಪರೀಕ್ಷಿಸಲು ನಾನು ಪಾರ್ವತಿ ದೇವಿಯ ಮಂದಿರದ ಮುಂದೆ ನಿಂತು ನಂದಿಯೆಡೆಗೆ ನೋಡಿದಾಗ ಅದು ನನ್ನ ಕಣ್ಣಲ್ಲಿಯೇ ದೃಷ್ಟಿ ನೆಟ್ಟಿರುವುದನ್ನು ಕಂಡು ನಾನಂತೂ ನಿಬ್ಬೆರಗಾದ್ದೆ.

ದೇವಾಲಯದಲ್ಲಿರುವ ಸೋಂದಾದ ರಾಜ ರಘುನಾಥನಾಯಕನು ನೀಡಿರುವ ಏಕಶಿಲೆಯ ಶಿಲಾಮಂಚದ ಬೆಡಗು ಮತ್ತು ಅದರ ನಾಜೂಕು ಕೆತ್ತನೆ ಮನಮೋಹಕವಾದದ್ದು, ಗರ್ಭಗುಡಿಯ ಮುಂದಿರುವ ಪಂಚಲೋಹದ ಗಂಟೆ ಬಾರಿಸಿದಾಗಲೊಮ್ಮೆ ಓಂ ಎನ್ನುವ ಶಬ್ದವನ್ನು ಒಂದು ನಿಮಿಷದ ವರೆಗೆ ಅನುರಣಿಸುವ ರೀತಿ ಅಚ್ಚರಿ ಹುಟ್ಟಿಸುತ್ತದೆ. ಇತರ ಎಲ್ಲ ದೇಗುಲಗಳಲ್ಲಿನ ಆರಾಧ್ಯ ಮೂರ್ತಿಗಳು ಸಾಮಾನ್ಯವಾಗಿ ಕಪ್ಪು ಶಿಲೆಯವಾಗಿದ್ದರೆ, ಮಧುಕೇಶ್ವರ ದೇವಾಲಯದ ಶಿವಲಿಂಗದ ಬಣ್ಣ ಜೇನಿನಂತೆ. ಆದಕ್ಕಾಗಿಯೇ ಇವ ಮಧುಕೇಶ್ವರ.

ಇಲ್ಲಿನ ಈ ಸಂಕೀರ್ಣದ ಮತ್ತೊಂದು ಸುಂದರ ದೇವಾಲಯ ಶಾಂತ ನರಸಿಂಹ ದೇವಾಲಯ. ನರಸಿಂಹನದು ಸಾಮಾನ್ಯವಾಗಿ ಆಯುಧಗಳನ್ನು ಹಿಡಿದ ನಾಲ್ಕು ಕೈ, ಸಿಟ್ಟಿನಿಂದೊಡಗೂಡಿದ ಮುಖ, ಯೋಗಲಕ್ಷ್ಮಿಯೊಂದಿಗಿರುವ ದೈವಿಕ ಮುದ್ರೆ, ಆದರಿಲ್ಲಿ ಆತ ಎರಡೇ ಕೈಗಳ ಸೌಮ್ಯ ಸುಂದರ ಮೂರ್ತಿ. ಅದಕ್ಕಾಗಿಯೇ ಈತ ಶಾಂತ ನರಸಿಂಹ. ಈ ವಿಗ್ರಹದ ಕಣ್ಣುಗಳ ವೈಶಿಷ್ಟ್ಯತೆಯನ್ನು ಇಲ್ಲಿ ಹೇಳಲೇಬೇಕು. ಕತ್ತಲಲ್ಲಿ ತೆರೆದಂತೆ ಕಾಣುವ ಈ ಕಣ್ಣುಗಳು, ಬೆಳಕು ಬಿದ್ದಾಗ ಮುಚ್ಚಿರುವಂತೆ ಭಾಸವಾಗುತ್ತದೆ. ಭಕ್ತಜನರಿಗಿದು ದೈವಿಕ ಪವಾಡ. ಆಸಕ್ತರಿಗಿದು ಚತುರ ಶಿಲ್ಪಿಯ ಕೈವಾಡ. ಅವರವರ ಭಾವ ಅವರವರ ಭಕುತಿ. ನಂಬಿಕೆ ಅವರವರದು.

ಮಧುಕೇಶ್ವರ ದೇವಾಲಯಕ್ಕೆ ಕಾಲದಿಂದ ಕಾಲಕ್ಕೆ ಅನೇಕ ವಿಗ್ರಹಗಳು ಸೇರ್ಪಡೆಯಾಗುತ್ತಲೇ ಬಂದಿವೆ. ಪಾರ್ವತಿದೇವಿ, ಮಹಾವಿಷ್ಣು, ಪರಶುರಾಮ, ದುಂಡೀರಾಜ ಗಣಪತಿ, ಅಷ್ಟದಿಕ್ಪಾಲಕರು ನೋಡಲು ಅತಿ ಸುಂದರ, ಇವರು ದೇವಾಲಯದ ಪಾವಿತ್ರ್ಯತೆಯನ್ನೂ, ಅಂದವನ್ನೂ ಒಟ್ಟಿಗೆ ಹೆಚ್ಚಿಸಿದವರು.

ಇಲ್ಲಿ ಎರಡನೇ ಶತಮಾನದ ಐದು ಹೆಡೆಗಳ ನಾಗರ ಶಿಲ್ಪವೊಂದಿದೆ. ಈ ನಾಗರ ಶಿಲ್ಪದ ಮೇಲೆ ಪ್ರಾಕೃತದಲ್ಲಿ ಕೆತ್ತಲ್ಪಟ್ಟ ಶಾಸನವೊಂದಿದೆ. ಈ ಶಾಸನ ಹೇಳುವಂತೆ ರಾಜಕುಮಾರಿ ಶಿವಸ್ಕಂದ ನಾಗಶ್ರೀಯು, ಇಲ್ಲಿ ವಿಹಾರವೊಂದನ್ನು ಮತ್ತು ಕೆರೆಯೊಂದನ್ನೂ ಕಟ್ಟಿಸಿದ ನಂತರ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾಳೆ.

ಮಧುಕೇಶ್ವರ ದೇವರ ರಥ ಅತೀ ಎತ್ತರದ್ದು, ಅದ್ಭುತವಾದದ್ದು, ಇಡೀ ದಿನ ದೇವಾಲಯದಲ್ಲಿ ಕಳೆದ ಮೇಲೆ, ನಮ್ಮ ಇತಿಹಾಸದ ಪುಸ್ತಕಗಳು ದೇವಾಲಯದ ಭವ್ಯತೆಗೆ ಅದರ ಅದ್ಭುತ ಸೌಂದರ್ಯಕ್ಕೆ ನ್ಯಾಯ ಸಲ್ಲಿಸುವಲ್ಲಿ ವಿಫಲವಾಗಿವೆಯೇನೋ ಎನ್ನುವ ಭಾವ ಗಾಢವಾಗುತ್ತಾ ಹೋಗುತ್ತದೆ.

**ಬನವಾಸಿ ತಲುಪುವುದು ಹೇಗೆ ?**


ಇಲ್ಲಿನ ಸಮೀಪದ ರೈಲ್ವೆ ನಿಲ್ದಾಣದಿಂದ 70 ಕಿ.ಮೀ ದೂರದ ಹಾವೇರಿ. ಇಲ್ಲವೇ ಇತ್ತ ಕಡೆ ಬಂದರೆ ತಾಳಗುಪ್ಪ. ಸಿರ್ಸಿಯಿಂದ 23 ಕಿ.ಮೀ.ದೂರದ ಉತ್ತಮ ರಸ್ತೆ ಕೂಡ ಇದೆ.



**"ಗಾಂಧೀಜಿಯವರು 1915 ರಲ್ಲಿ ಪ್ರಥಮಬಾರಿಗೆ ತಮ್ಮ ಪತ್ನಿ ಕಸ್ತೂರ ಬಾ ಅವರೊಂದಿಗೆ ಕರ್ನಾಟಕಕ್ಕೆ ಆಗಮಿಸಿದ್ದರು. ಆನಂತರ ದಿನಗಳಲ್ಲಿ ಬೆಳಗಾವಿ ಅಧಿವೇಶನ ಒಳಗೊಂಡಂತೆ ಹಲವಾರು ಬಾರಿ ಭೇಟಿ ನೀಡಿದ್ದುಂಟು. ಇವುಗಳಲ್ಲಿ ಅವರು ಹರಿಜನೋದ್ಧಾರ ನಿಧಿಗಾಗಿ ಕರ್ನಾಟಕದ ಬಹುತೇಕ ಸ್ಥಳಗಳಿಗೆ ಭೇಟಿ ನೀಡಿರುವುದು ಅವಿಸ್ಮರಣೀಯವಾಗಿದೆ. ಗಾಂಧೀಜಿಯವರ ಕುರಿತಂತೆ ಇತ್ತೀಚಿಗಿನ ದಿನಗಳಲ್ಲಿ ನಿರಂತರವಾಗಿ ಬರೆಯುತ್ತಿರುವ ಶ್ರೀ ವೇಮಗಲ್ ಸೋಮಶೇಖರ್ ರವರ ಈ ಲೇಖನ ಇತ್ತೀಚಿಗೆ ಪ್ರಕೃತಿ ವಿಕೋಪಕ್ಕೆ ತುತ್ತಾದ ಕೊಡಗಿನ ಜೊತೆ ಗಾಂಧೀಜಿಗೆ ಇದ್ದ ಬಾಂಧವ್ಯವನ್ನು ಎತ್ತಿ ತೋರಿಸುತ್ತದೆ.**

# ಕೊಡಗಿನ ನಾಡಿನಲ್ಲಿ ಮಹಾತ್ಮ ಗಾಂಧೀಜಿ

ವೇಮಗಲ್ ಸೋಮಶೇಖರ್



ಮಹಾತ್ಮ ಗಾಂಧೀಜಿ ತಮ್ಮ ಪರಿವಾರದೊಂದಿಗೆ 1934ರಲ್ಲಿ ಹರಿಜನರ ಏಳ್ಗೆಗಾಗಿ ನಿಧಿ ಸಂಗ್ರಹಿಸಲು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಾ ಕೇರಳ, ತಮಿಳುನಾಡು, ಮಾರ್ಗವಾಗಿ 1934 ರ ಫೆಬ್ರವರಿ 22 ಶುಕ್ರವಾರ ಮೈಸೂರಿಗೆ ಆಗಮಿಸಿದರು. ಅಲ್ಲಿಂದ ಹುಣಸೂರು ಮೂಲಕ ಕಾರಿನಲ್ಲಿ ಕೊಡಗು ನಾಡಿಗೆ ಪ್ರವೇಶಿಸಿದ ಗಾಂಧೀಜಿ ಅಂದು ಮಧ್ಯಾಹ್ನ ಪ್ರಥಮವಾಗಿ ಭೇಟಿ ನೀಡಿದ ಸ್ಥಳ ಕೈಕೇರಿ. ಮೊದಲು ಅಲ್ಲಿನ ಹರಿಜನ ಕೇರಿಗೆ ಭೇಟಿ ನೀಡಿದರು. ಗಾಂಧೀಜಿ ಬರುತ್ತಾರೆಂದು ನೆರೆದಿದ್ದ ಸುಮಾರು ಹತ್ತು ಸಾವಿರದಷ್ಟು ಹರಿಜನರಲ್ಲಿ ಮಹಿಳೆಯರೂ ಸೇರಿದ್ದರು. "ನನ್ನ ಈ ಹರಿಜನ ಪ್ರವಾಸದಲ್ಲಿ ಇಷ್ಟು ಶುಚಿಯಾಗಿಟ್ಟುಕೊಂಡಿರುವಂತಹ ಹರಿಜನ ಕೇರಿಯನ್ನು ಎಲ್ಲಿಯೂ ನೋಡಲೇ ಇಲ್ಲ!" ಎಂದು ನೆರೆದಿದ್ದ ಜನರಿಗೆ ಬಾಪೂಜಿ ತಿಳಿಸಿದರು. ಅವರಿಂದ ಹರಿಜನ ನಿಧಿಯನ್ನು ಸ್ವೀಕರಿಸಿದರು. ಮಹಿಳೆಯರಲ್ಲಿ ಶ್ರೀಮತಿ ಚೆಪ್ಪುಡಿರ ಮುತ್ತಣ್ಣನವರು ಒಂದು ಉಂಗುರ, ಶ್ರೀಮತಿ ಆಟ್ರಂಗಳ ಬೋಳ್ಳವ್ವನವರು ಒಂದು ಜೊತೆ ಬೆಳ್ಳಿ ಬಳೆ, ಶ್ರೀಮತಿ ಪಟ್ಟದ್ಮಂಡ ಚಂಗಪ್ಪನವರು ಒಂದು ಉಂಗುರ, ಶ್ರೀಮತಿ ಪಾರ್ವಡಂಗ ಪೆಮ್ಮಯ್ಯನವರು ಒಂದು ಉಂಗುರ ಹೀಗೆ ಬಹಳಷ್ಟು ಮಹಿಳೆಯರು ಧಾರಾಳವಾಗಿ ಒಡವೆಗಳನ್ನು ಹರಿಜನ ಕಾರ್ಯಕ್ಕಾಗಿ ಬಿಚ್ಚಿಕೊಟ್ಟರು.

**ಪೊನ್ನಂಪೇಟೆಯಲ್ಲಿ :**

ಕೈಕೇರಿಯಿಂದ ಪೊನ್ನಂಪೇಟೆಗೆ ಆಗಮಿಸಿದ ಗಾಂಧೀಜಿ ಸ್ವಲ್ಪ ಸಮಯ ಶ್ರೀ ರಾಮಕೃಷ್ಣಾಶ್ರಮದಲ್ಲಿ ವಿಶ್ರಾಂತಿ ಪಡೆದರು. ಆಗ ಸ್ವಾಮಿ ಶಾಂಭವಾನಂದರು ಅಲ್ಲಿನ ಮುಖ್ಯಸ್ಥರು. ಅವರಿಗೆ ಹರಿಜನ ಸೇವೆಯಲ್ಲಿ ತುಂಬಾ ಆಸಕ್ತಿ. ಹರಿಜನ ಸಂಘವನ್ನೂ ಸ್ಥಾಪಿಸಿದ್ದರು. ಗಾಂಧೀಜಿ ಅಲ್ಲಿಂದ ಐದು ಮೈಲಿ ದೂರದಲ್ಲಿದ್ದ ಹರಿಜನ ಕೇರಿಗೆ ಹೋಗಿ 75 ರೂಪಾಯಿಗಳ ನಿಧಿಯನ್ನು ಸ್ವೀಕರಿಸಿ ಸಂಜೆ ಪೊನ್ನಂಪೇಟೆಗೆ



downloaded from: www.kpscvaani.com



ಹಿಂದಿರುಗಿ ಬಂದರು. ಪೊನ್ನಂಪೇಟೆಯಲ್ಲಿನ ಗದ್ದೆ ದಂಡೆಯ ಮೇಲೆ ನಿಂತು ಅಲ್ಲಿ ನೆರೆದಿದ್ದ ಜನರನ್ನುದ್ದೇಶಿಸಿ ಗಾಂಧೀಜಿ "ಈ ಸುಂದರವಾದ ದೇಶವನ್ನು ಅಸ್ಪೃಶ್ಯವೆಂಬ ಕೆಟ್ಟ ಬಾಳ್ವೆಯಿಂದ ಕುರೂಪಿಯನ್ನಾಗಿ ಮಾಡಬೇಡಿ. ಬಿಹಾರಿನಲ್ಲಿ (1934ರ ಜನವರಿ 15 ರಂದು) ಸಂಭವಿಸಿದ ಭೀಕರ ಭೂಕಂಪನದಿಂದ ನರಳುತ್ತಿರುವ ಸಾವಿರಾರು ಜನರಿಗೆ ಧನಸಹಾಯ ಮಾಡಿ" ಮುಂತಾಗಿ ವಿನಂತಿಸಿಕೊಂಡರು. ಅಲ್ಲಿ ಐದಾರು ಸಾವಿರ ಜನರು ಸೇರಿದ್ದರು. ಮಹಿಳೆಯರಲ್ಲಿ ಶ್ರೀಮತಿ ಅಜ್ಜಿಕುಟ್ಟಿರ ಪೊನ್ನಪ್ಪವರು ಒಂದು ಉಂಗುರ, ಶ್ರೀಮತಿ ಕಳ್ಳಿಚಂಡ ದೇವಯ್ಯನವರು ಒಂದು ಪದಕ, ಶ್ರೀಮತಿ ಪಾರ್ವಂಗಡ ಚಿನ್ನಯ್ಯನವರು ಒಂದು ಉಂಗುರ, ಮುಂತಾದವರು ತಾವು ಧರಿಸಿದ್ದ ಒಡವೆಗಳನ್ನು ಧಾರಾಳವಾಗಿ ಬಿಚ್ಚಿಕೊಟ್ಟರು. ಅವರ ಪರವಾಗಿ ಭಿನ್ನವತ್ತಳೆ ಹಾಗು 250 ರೂಪಾಯಿಗಳ ನಿಧಿಯನ್ನೂ ಅರ್ಪಿಸಲಾಯಿತು. ಅಷ್ಟೊತ್ತಿಗೆ ರಾತ್ರಿಯಾಗಿದ್ದರಿಂದ ಪೊನ್ನಂಪೇಟೆಯ ಶ್ರೀರಾಮಕೃಷ್ಣಾಶ್ರಮದಲ್ಲಿಯೇ ಗಾಂಧೀಜಿ ತಂಗಿದರು. (ಪೊನ್ನಂಪೇಟೆ ಗದ್ದೆ ದಂಡೆಯ ಮೇಲೆ ಗಾಂಧೀಜಿ ಭಾಷಣ ಮಾಡಿದ ಕಾರಣದಿಂದ ಆ ಸ್ಥಳ "ಗಾಂಧಿ ಗದ್ದೆ" ಎಂದು ಹೆಸರು ಪಡೆಯಿತು. ನಂತರದಲ್ಲಿ ಪೊನ್ನಂಪೇಟೆ ಕೊಡವ ಸಮಾಜದ ಅಧ್ಯಕ್ಷರಾಗಿದ್ದ ಚಪ್ಪುಡೇರ ಎಂ.ಪೊನ್ನಪ್ಪ ಅವರ ಸ್ವಾಧೀನದಲ್ಲಿದ್ದ ಆ ಗದ್ದೆಯಲ್ಲಿ ಬಹುತೇಕ ವರ್ಷಗಳ ಕಾಲ ಪ್ರತಿ ವರ್ಷ ಆಗಸ್ಟ್ 15 ರಂದು ಗದ್ದೆ ನಾಟಿ ಮಾಡಲಾಗುತ್ತಿದ್ದು ಅಂದು ನಾಟಿ ಮಾಡಿದ ಕೆಲಸಗಾರರಿಗೆಲ್ಲಾ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಸಿಹಿ ಹಂಚಲಾಗುತ್ತಿತ್ತು).

**ವೀರಾಜಪೇಟೆಯಲ್ಲಿ :**

ಮರು ದಿವಸ ಅಂದರೆ 23 ರಂದು ಬೆಳಗ್ಗೆ ಪೊನ್ನಂಪೇಟೆಯ ಶ್ರೀರಾಮಕೃಷ್ಣಾಶ್ರಮದಲ್ಲಿ ಗಾಂಧೀಜಿ ತಮ್ಮ ಪರಿವಾರದವರಿಗೆ ಸೇವೆ ಸಲ್ಲಿಸಿದ್ದ ಶಾಂಭವಿ ಅಪ್ಪಣಮಯ್ಯನವರನ್ನು ತಮ್ಮ ಕಾರಿನಲ್ಲಿಯೇ ಕುಳ್ಳಿರಿಸಿಕೊಂಡು ಹುದಿಕೇರಿ ಸಭೆಗೆ ಹೋಗಿ ಅಲ್ಲಿಂದ ವಿರಾಜಪೇಟೆಗೆ ಗಾಂಧೀಜಿ ಆಗಮಿಸಿದರು. ಮಹಾತ್ಮರನ್ನು ಕಾಣಲು ಮತ್ತು ಅವರ ಮಾತನ್ನು ಕೇಳಲು ಮುಸಲ್ಮಾನರು ಸೇರಿದಂತೆ ಸುಮಾರು ಹತ್ತು ಸಾವಿರ ಜನ ಸೇರಿದ್ದರು. ಮುಸಲ್ಮಾನ್ ನಿವಾಸಿಗಳ ಪರವಾಗಿ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಬಿನ್ನವತ್ತಳೆ ಹೀಗಿತ್ತು "ಹರಿಜನರ ಉದ್ಧಾರಕ್ಕಾಗಿ ತಾವು ಕೈಗೊಂಡಿರುವ ಈ ಪ್ರವಾಸದ ಬಗ್ಗೆ ನಮಗೆ ತುಂಬಾ ಗೌರವವಿದೆ. ಇದರ ಹಿನ್ನೆಲೆಯಲ್ಲಿ ಮನುಷ್ಯರ ಸಮ್ಮತಿಯನ್ನು ಸಾಧಿಸುವ ಪವಿತ್ರ ಉದ್ದೇಶ ನಿಮ್ಮದಾಗಿದೆ. ಇಸ್ಲಾಮಿನ ಮೂಲ ಸತ್ಯಗಳಲ್ಲಿ ಇದೂ ಒಂದು. ನಿಮ್ಮ ಈ ಸಂಕಲ್ಪಕ್ಕೆ ನಾವು ಸಹಾನುಭೂತಿ ತೋರಿಸಲೇ ಬೇಕು. ಏಕೆಂದರೆ ನಾವು ಮುಸಲ್ಮಾನರು. ದೇವರು ನಿಮ್ಮ ಈ ಸಂಕಲ್ಪಕ್ಕೆ ಸಫಲತೆ ನೀಡಲಿ. ಈ ದರಿದ್ರ ಮಾನವ ವರ್ಗವು ಭಾರ ಮುಕ್ತವಾಗಲಿ, ಸಮಾನತೆ ಪಡೆಯಲಿ. ನೀವು ಹಿಂದೂ ಮುಸ್ಲಿಂ ಸೌಹಾರ್ದದಲ್ಲಿ ದೃಢ ನಂಬಿಕೆ ಉಳ್ಳವರು. ಭಾರತದ ಈ ಭಾಗದಲ್ಲಿ ಹಿಂದೂ–ಮುಸಲ್ಮಾನರಲ್ಲಿ ಸಂಪೂರ್ಣ ಐಕಮತ್ಯ ಇದೆ ಎಂದು ತಿಳಿದು ನಮಗೆ ಸಂತೋಷವಾಗುತ್ತದೆ. ಈ ಐಕಮತ್ಯವನ್ನು ಇಡೀ ಭಾರತದಲ್ಲಿ ನೀವು ಸ್ಥಾಪಿಸುತ್ತೀರಿ ಎಂದು ನಮ್ಮ ಅಪೇಕ್ಷೆ ಮತೀಯ ಕಲಹಗಳು ಭಾರತವನ್ನು ಪೀಡಿಸುವಂತೆ ನಿಮ್ಮ ಸಾಮರ್ಥ್ಯ ಪ್ರಭಾವಗಳನ್ನು ಉಪಯೋಗಿಸಬೇಕು. ಅದಕ್ಕಾಗಿ ಹಿಂದೂ ಮುಸಲ್ಮಾನರ ಸಂಯುಕ್ತ ಸಮ್ಮೇಳನ ಕರೆಯಬೇಕೆಂದು ಬಯಸುತ್ತೇನೆ" ಎಂಬುದಾಗಿತ್ತು.

ಈ ಭಿನ್ನವತ್ತಳೆಯನ್ನು ಓದಿದ ಗಾಂಧಿಯವರ ಹೃದಯ ಕಲಕಿತು. ಅದಕ್ಕೆ ಗಾಂಧೀಜಿ ಉತ್ತರ ಕೊಡುತ್ತಾ "ಶುದ್ಧವಾದ ಉತ್ತಮ ಹಿಂದೂಸ್ಥಾನಿಯಲ್ಲಿ ಬಿನ್ನವತ್ತಳೆ ಪಡೆದದ್ದು ನನಗೆ ಬಹಳ ಆಶ್ಚರ್ಯವಾಗಿದೆ. ಉರ್ದು ಸಾಹಿತ್ಯ ಎಂದರೆ ನನಗೆ ತುಂಬ ಪ್ರೀತಿ, ಆದರೆ ದಕ್ಷಿಣ ಭಾರತದಲ್ಲಿ ಉರ್ದು ವಿದ್ವಾಂಸರನ್ನು ಕಾಣುವುದು ಕಷ್ಟ. ಕೊಡಗಿನಲ್ಲಿ ಇಂಥ ಒಳ್ಳೆಯ ಉರ್ದು ಬರೆಯುವ ಹಾಗೂ ಮಾತನಾಡುವ ಜನ ಇರುವುದು ಆನಂದವಾಗಿದೆ" ಎಂದರು. ಅಲ್ಲಿನ ಜನರು 501 ರೂಪಾಯಿ ನಿಧಿಯನ್ನು ಅರ್ಪಿಸಿದ್ದಲ್ಲದೆ ಬಿಹಾರದ ಭೂಕಂಪ ನಿಧಿಗೂ ಧನಸಹಾಯ ಮಾಡಿದರು. ಮಹಿಳೆಯರು ತಮ್ಮ ಒಡವೆಗಳನ್ನು ಬಿಚ್ಚಿ ಕೊಟ್ಟರು. ಇವರಲ್ಲಿ ಮುಖ್ಯವಾಗಿ ಶ್ರೀಮತಿ ಐನಂಡ ಕಾರಿಯಪ್ಪನವರು ಒಂದು ಜಡೆ ಬಿಲ್ಲೆ, ಶ್ರೀಮತಿ ಮಂಡೇಪಂಡ ಸೋಮಯ್ಯನವರು ಒಂದು ಉಂಗುರ, ಶ್ರೀಮತಿ ಚೇದಂಡ ಪೊನ್ನಪ್ಪನವರು ಒಂದು ಉಂಗುರ, ಶ್ರೀಮತಿ ನೆಲ್ಲಮಕ್ಕಳ ಅಕ್ಕವ್ವ ಒಂದು ಉಂಗುರ, ಶ್ರೀಮತಿ ಬಲ್ಯಾಟಂಡ ಮುತ್ತಮ್ಮ ಒಂದು ಪದಕ ಕೊಟ್ಟರು. ತರುವಾಯ ಗಾಂಧೀಜಿ ಬೆಳ್ಳೂರು ಮೂಲಕ ಸೋಮವಾರಪೇಟೆಗೆ ಹೋಗಿ ಭಾಷಣ ಮಾಡಿದರು. ಅಲ್ಲಿನ ಜನರು 275 ರೂಪಾಯಿಯನ್ನು ಹರಿಜನೋದ್ಧಾರಕ್ಕಾಗಿ ಅರ್ಪಿಸಿದರು.

**ಗುಂಡುಕುಟ್ಟಿಯಲ್ಲಿ ಗೌರಮ್ಮ :(ಕೊಡಗಿನ ಗೌರಮ್ಮ)**

ಸೋಮವಾರ ಪೇಟೆಯಿಂದ ಗುಂಡುಕುಟ್ಟಿಗೆ ಮಧ್ಯಾಹ್ನ ಆಗಮಿಸಿದ ಗಾಂಧೀಜಿ ಅಲ್ಲಿ ಹರಿಜನ ಸಂಘದ ಅಧ್ಯಕ್ಷರಾದ ಗುಂಡುಕಟ್ಟಿ ಮಂಜುನಾಥಯ್ಯನವರ ಎಸ್ಟೇಟ್‌ನ ಮನೆಯಲ್ಲಿ ಸ್ವಲ್ಪ ಸಮಯ ವಿಶ್ರಮಿಸಿ ಆಹಾರ ಸ್ವೀಕರಿಸಿದರು. ಗಾಂಧೀಜಿ ಕನ್ನಡದಲ್ಲಿ ಮೋ.ಕ.ಗಾಂಧಿ ಎಂದು ಸಹಿ ಮಾಡಿ ಕೆಲವರಿಗೆ ಕೊಡುತ್ತಿದ್ದರು. ಇದನ್ನು ಕಂಡ ಮಂಜುನಾಥಯ್ಯನವರು ತಮ್ಮ ಹಿರಿಯ ಮಗನಾದ ಮೋಹನನಿಗೆ "ಮೋಕ" ಎಂದು ಹೆಸರು ಬದಲಾಯಿಸಿದರು. ಅಲ್ಲಿ ನೆರೆದಿದ್ದ ಜನರು ಹರಿಜನ ನಿಧಿಯನ್ನು ಅರ್ಪಿಸಿದರೆ, ಮಹಿಳೆಯರು ತಮ್ಮ ಆಭರಣಗಳನ್ನು ಹರಿಜನರ ಕಾರ್ಯಕ್ಕಾಗಿ ಮಹಾತ್ಮರಿಗೆ ಅರ್ಪಿಸಿದರು. ಒಬ್ಬ ತರುಣಿ ತನ್ನ ಬಂಗಾರದ ಬಳೆಗಳನ್ನು ಗಾಂಧೀಜಿಗೆ ನೀಡಿದಳು. ಆಕೆಯ ಗಂಡನೂ ಎದುರಿಗೇ ಇದ್ದ, ಆತನಿಗೆ ಗಾಂಧೀಜಿ ಅವರು "ನಿನ್ನ ಹೆಂಡತಿ ನನಗೆ ಬಂಗಾರದ ಬಳೆ ಕೊಟ್ಟಿದ್ದಾಳೆ, ಗೊತ್ತೆ? ಅದಕ್ಕೆ ನಿನ್ನ ಅನುಮತಿ ಇದೆಯೇ?" ಎಂದು ಕೇಳಿದರು. ಅದಕ್ಕೆ ಆತ ಹೌದು ನನ್ನ ಅನುಮತಿಯಿಂದಲೇ ಕೊಟ್ಟಿದ್ದಾಳೆ. ಅದು ಆಕೆಯ ಇಷ್ಟ, ಸಂತೋಷ, ಒಡವೆ ಆಕೆಯದು, ನಾನು ಅನುಮತಿ ಕೊಡದೆ ಹೇಗೆ ಇರಲಿ?" "ಎಲ್ಲಾ ಗಂಡಂದಿರೂ ಇಷ್ಟು ವಿವೇಕದಿಂದ ನಡೆಯುವುದಿಲ್ಲ. ನಿನ್ನ ವಯಸ್ಸೆಷ್ಟು?" " ಮೂವತ್ತು" " ನಿನ್ನ ವಯಸ್ಸಿನಲ್ಲಿ ನಾನು ಇಷ್ಟು ವಿವೇಕದಿಂದ ನಡೆದುಕೊಳ್ಳಲಿಲ್ಲ. ನನಗೆ ವಿವೇಕ ಬಂದದ್ದು ಆಮೇಲೆ" ಅಲ್ಲಿದ್ದವರೆಲ್ಲರೂ ಗಾಂಧೀಜಿಯ ಮಾತನ್ನು ಕೇಳಿ ಗೊಳ್ಳೆಂದು ನಕ್ಕರು.

ಗಾಂಧೀಜಿ ಇಳಿದುಕೊಂಡಿದ್ದ ಮಂಜುನಾಥಯ್ಯನವರ ಮನೆಯ ಸ್ವಲ್ಪ ದೂರದಲ್ಲೇ ಗೌರಮ್ಮನ ಮನೆ, ಆಕೆಗೆ 21 ವರ್ಷ. ಮದುವೆಯೂ ಆಗಿತ್ತು. ಟೆನಿಸ್ ಮತ್ತು ಈಜುಗಾರ್ತಿ ಹಾಗೂ ಕೊಡಗಿನ ಸಣ್ಣಕತೆಗಳ ಪ್ರಥಮ ಕಥೆಗಾರ್ತಿಯಾಗಿದ್ದ ಗೌರಮ್ಮನಿಗೆ ಗಾಂಧೀಜಿಯನ್ನು ತಮ್ಮ ಮನೆಗೆ ಕರೆತರಬೇಕೆಂದು ಆಸೆಯಾಗಿತ್ತು, ಆ ಊರಿನ ಸ್ವಾಗತ ಸಮಿತಿಯವರು ಅದಕ್ಕೆ ಗಮನ ಕೊಡಲಿಲ್ಲ. ಆಕೆಗೆ ತುಂಬ ನೋವಾಯಿತು. ಬೆಳಗಿನಿಂದ ಉಪವಾಸವಿದ್ದ ಆಕೆ ಗಾಂಧೀಜಿ ಇದ್ದಲ್ಲಿಗೇ ಬಂದು ಅಳತೊಡಗಿದಳು. ಬೆಳಗಿನಿಂದ ಆಕೆ ಉಪವಾಸವಿದ್ದದ್ದು ಬೇರೆಯವರ ಮೂಲಕ ತಿಳಿದುಕೊಂಡಿದ್ದ ಗಾಂಧೀಜಿ "ಉಪವಾಸ ಏಕಮ್ಮ ತಾಯಿ" ಎಂದರು "ನೀವು ನಮ್ಮ ಮನೆಗೆ ಬರಲಿಲ್ಲ; ನಿಮಗಾಗಿ ಕೆಲವು ಒಡವೆ ತೆಗೆದಿಟ್ಟಿದ್ದೇನೆ" ಎಂದಳು. ಗಾಂಧೀಜಿ "ಮೊದಲ ನೀನು ಉಪವಾಸ ನಿಲ್ಲಿಸಬೇಕು" ಎಂದಾಗ, ಆಕೆ "ನೀವು ನಮ್ಮ ಮನೆಗೆ ಬರುತ್ತೇನೆಂದು ಮಾತು ಕೊಟ್ಟರೆ ನಿಲ್ಲಿಸುತ್ತೇನೆ" ಎಂದಳು. ಇದನ್ನೆಲ್ಲಾ ಗಮನಿಸುತ್ತಿದ್ದ ಮೀರಾಬೆನ್ ಹಣ್ಣು ಸುಲಿದು ಗೌರಮ್ಮನಿಗೆ ಕೊಟ್ಟಳು. ಗಾಂಧೀಜಿ ಒಂದು ಕರಾರು ಹಾಕಿದರು. " ನೀನು ನನಗೆ ಆಭರಣ ಕೊಟ್ಟ ನಂತರ ಪುನಃ ಯಾವ ಒಡವೆಯನ್ನೂ ಧರಿಸಬಾರದು" ಅದಕ್ಕೆ ಗೌರಮ್ಮ ಒಪ್ಪಿದಳು. ಆಕೆಯ ಗಂಡ ಗೋಪಾಲಕೃಷ್ಣಯ್ಯನೂ ಜೊತೆಯಲ್ಲಿದ್ದರು. ಗಾಂಧೀಜಿ ಆತನನ್ನು ಕುರಿತು "ಒಡವೆ







downloaded from: www.kpscvaani.com

ನನಗೆ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?"

"ಯಾರೂ ಇಲ್ಲ, ಆಕೆಯದೇ ಒಡವೆ; ಆಕೆಯ ಇಚ್ಛೆ,ನನ್ನ ಒಪ್ಪಿಗೆಯೂ ಇದೆ." ಎಂದರು. ಕೊನೆಗೆ ಗಾಂಧೀಜಿ ಅವರ ಮನೆಗೆ ಹೋದರು. ಮಾಂಗಲ್ಯ, ಮೂಗುಬೊಟ್ಟು, ಕಿವಿಯೋಲೆ ಬಿಟ್ಟು ಉಳಿದ ಎಲ್ಲಾ ಆಭರಣಗಳನ್ನು ಗೌರಮ್ಮ ಗಾಂಧೀಜಿಗೆ ಸಮರ್ಪಿಸಿ "ಇನ್ನು ಮುಂದೆ ಸೌಭಾಗ್ಯದ ಸಂಕೇತವಾದ ಕರಿಮಣಿ, ಕಿವಿಯ ಬೆಂಡೋಲೆ, ಮೂಗುಬೊಟ್ಟು ಬಿಟ್ಟು ಬೇರೆ ಯಾವುದೇ ಒಡವೆ ಧರಿಸುವುದಿಲ್ಲ" ಎಂದು ಪ್ರತಿಜ್ಞೆ ಮಾಡಿದಳು. "ಸರಳವಾದ ಮಿತಜೀವನ ಎಂದಿಗೂ ಒಳ್ಳೆಯದು" ಎಂದ ಗಾಂಧೀಜಿ, ಗೌರಮ್ಮನ ಮನೆಯಿಂದ ತುಂಬು ಹೃದಯದಿಂದ ಹೊರಬಂದರು (ಇಂತಹ ಗೌರಮ್ಮ ಕೇವಲ 27 ವಯಸ್ಸಿನಲ್ಲಿ ಅಂದರೆ 1939 ರ ಏಪ್ರಿಲ್ 13 ರಂದು ಆರು ವರ್ಷದ ಪುತ್ರ ವಸಂತನನ್ನು ಅಗಲಿ ಹಾರಂಗಿ ಹೊಳೆಯಲ್ಲಿ ಈಜಲು ಹೋದಾಗ ಆಕಸ್ಮಿಕವಾಗಿ ಮುಳುಗಿ ದುರಂತ ಸಾವಿಗೀಡಾದರು) ತರುವಾಯ ಗಾಂಧೀಜಿ ಗುಂಡುಕುಟ್ಟಿಯಿಂದ ಸೊಂಟಿಕೊಪ್ಪ ಮಾರ್ಗವಾಗಿ ಮಡಿಕೇರಿಗೆ ಹೊರಟರು.

**ಮಡಿಕೇರಿಯಲ್ಲಿ :**


ಸಂಜೆ ಮಡಿಕೇರಿಯಲ್ಲಿ ಸಭೆ. ಹದಿನೈದು ಸಾವಿರಕ್ಕೂ ಹೆಚ್ಚು ಜನ ರಾಜಪೀಠದ ಬಳಿಯ ಮೈದಾನದಲ್ಲಿ ನೆರೆದಿದ್ದರು. ಗಾಂಧೀಜಿಗೆ ಅರ್ಪಿಸಿದ ಮಾನಪತ್ರದಲ್ಲಿ ಕೊಡಗಿನ ಹರಿಜನರ ವಿಷಯ ಎಲ್ಲವೂ ಸೂಚಿಸಿತ್ತು. ಅಲ್ಲದೆ 750 ರೂಪಾಯಿಗಳ ಒಂದು ನಿಧಿಯೂ ಅರ್ಪಿಸಲ್ಪಟ್ಟಿತು. ಗಾಂಧೀಜಿ ಸಾರ್ವಜನಿಕ ಭಾಷಣ ಮಾಡುತ್ತಾ "ಬಹುಶಃ ನಿಮ್ಮನ್ನು ನೋಡುವುದು ಇದು ಮೊದಲನೆಯ ಸಲ, ಇದು ಕಡೆಯ ಸಲವೂ ಆಗಬಹುದು. ಇಲ್ಲಿಗೆ ಬರುವ ಮೊದಲು ಈ ಪ್ರದೇಶದ ನಿಸರ್ಗ ಸೌಂದರ್ಯವನ್ನು ಕುರಿತು ನಾನು ಏನೇನೋ ಊಹಿಸಿದ್ದೆ,

**"ಶುದ್ಧವಾದ ಉತ್ತಮ ಹಿಂದೂಸ್ಥಾನಿಯಲ್ಲಿ ಬಿನ್ನವತ್ತಳೆ ಪಡೆದದ್ದು ನನಗೆ ಬಹಳ ಆಶ್ಚರ್ಯವಾಗಿದೆ. ಉರ್ದು ಸಾಹಿತ್ಯ ಎಂದರೆ ನನಗೆ ತುಂಬ ಪ್ರೀತಿ, ಆದರೆ ದಕ್ಷಿಣ ಭಾರತದಲ್ಲಿ ಉರ್ದು ವಿದ್ವಾಂಸರನ್ನು ಕಾಣುವುದು ಕಷ್ಟ. ಕೊಡಗಿನಲ್ಲಿ ಇಂಥ ಒಳ್ಳೆಯ ಉರ್ದು ಬರೆಯುವ ಹಾಗೂ ಮಾತನಾಡುವ ಜನ ಇರುವುದು ಆನಂದವಾಗಿದೆ"**

ಅದೆಲ್ಲವೂ ಇಂದು ಸಾರ್ಥಕವಾಯಿತು. ನಿಮ್ಮ ಪ್ರಾಂತಕ್ಕೆ ನಾನು ಕೊಟ್ಟ ಈ ಎರಡು ದಿನದ ಪ್ರವಾಸ ಸ್ವಲ್ಪ ಪ್ರಯಾಸ ಆಗಿದ್ದರೂ ಸಂತೋಷವಾಗಿದೆ. ನಿಮ್ಮ ಪ್ರಾಂತದಲ್ಲಿರುವ ನಿಸರ್ಗ ರಮಣೀಯತೆಯನ್ನು ಇಂದು ಸವಿಯುತ್ತಿದ್ದೇನೆ, ನಿಮ್ಮ ನಾಡಿನ ಪ್ರಕೃತಿ ದೃಶ್ಯ ಎಷ್ಟು ಚೆನ್ನಾಗಿದೆಯೋ ನಿಮ್ಮ ಹೃದಯಗಳೂ ಅಷ್ಟೇ ಚೆಲುವಾಗಿದೆ, ಆದರೂ ನನ್ನ ಮನಸ್ಸಿನಲ್ಲಿ ನಿಮ್ಮ ಹೃದಯ ಮಾಧುರ್ಯದ ಬಗ್ಗೆ ಏನೋ ಸಂದೇಹ. ನಿಮ್ಮಲ್ಲಿ ಇನ್ನೂ ಸ್ವಲ್ಪ ಅಸ್ಪೃಶ್ಯತೆ ಅಂಟಿಕೊಂಡಿದೆಯೆಂದು ಕಾಣುತ್ತದೆ. ನಿಮ್ಮ ಮಾನಪತ್ರದಲ್ಲಿ ಇಲ್ಲಿ ಹರಿಜನರಿಗೆ ಪ್ರವೇಶವಿಲ್ಲವೆಂದು ಹೇಳಿದ್ದೀರಿ. ಒಬ್ಬ ತಂದೆ ತನ್ನ ಮಕ್ಕಳಿಗೆ ಅನ್ನ ಬಟ್ಟೆ ಕೊಡುತ್ತಾನೆ. ಮನೆ ಕೊಡುತ್ತಾನೆ, ಆದರೆ ನನ್ನ ಹೃದಯದಲ್ಲಿ ನಿಮಗೆ ಸ್ಥಳವಿಲ್ಲವೆಂದು ಹೇಳಿದರೆ ಆ ಮಕ್ಕಳಿಗೆ ಹೇಗೆ ಅನಿಸುತ್ತದೆಯೋ ಯೋಚನೆ ಮಾಡಿ, ನಿಮ್ಮ ಹಾಗೆಯೇ ಹರಿಜನರಿಗೂ ದೇವಾಲಯ ಪ್ರವೇಶ ನೀಡದಿದ್ದರೆ, ನಿಮ್ಮ ಹೃದಯ ಸುಂದರ ಎನ್ನಲಾರೆ. ಪ್ರಕೃತಿಯಿಂದ ಪಾಠ ಕಲಿತು ನಿಮ್ಮ ಹೃದಯದಿಂದ ಆ ಕಳಂಕವನ್ನು ತೊಳೆದು ಹಾಕಿ" ಎಂದು ಮನವಿ ಮಾಡಿದರು.

ರಾತ್ರಿ ಕೊಡಗಿನ ಹರಿಜನ ಕೆಲಸಗಾರರೊಂದಿಗೆ ಸಂಭಾಷಣೆ ನಡೆಸಿ ಹರಿಜನರ ಉದ್ಧಾರಕ್ಕಾಗಿ ನಡೆಸಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಲ್ಪಟ್ಟವು. ಕೊಡಗಿನ ಪ್ರವಾಸದಲ್ಲಿ ಒಟ್ಟು ಎರಡು ಸಾವಿರ ರೂಪಾಯಿಗಳೂ ಮತ್ತು ಒಂದು ಸಾವಿರ ರೂಪಾಯಿಗಳ ಬೆಲೆ ಬಾಳುವ ಒಡವೆಗಳೂ ದೊರಕಿತು. ಬಿಹಾರಿನಲ್ಲಿ ಸಂಭವಿಸಿದ ಭೀಕರ ಭೂಕಂಪದ ವಿಷಯ ಎಲ್ಲರಿಗೂ ತಿಳಿಸಿ ಒಡವೆಗಳನ್ನು ಹರಾಜು ಹಾಕಿದರು. ಆನಂತರ ಮೈಸೂರಿನಲ್ಲಿ ವೈದ್ಯರಾಗಿದ್ದ ದಿವಂಗತ ನಂಜಪ್ಪನವರ ಬಿಡಾರದಲ್ಲಿ ಉಳಿದುಕೊಂಡು ಮರು ದಿವಸ ಅಂದರೆ ಫೆಬ್ರವರಿ 24 ರ ಮುಂಜಾನೆ ಮಡಿಕೇರಿಯಿಂದ ಪುತ್ತೂರು, ಬಂಟ್ವಾಳ ಮಾರ್ಗವಾಗಿ ಮಂಗಳೂರಿನತ್ತ ಪ್ರಯಾಣ ಬೆಳೆಸಿದರು.

ಪರಿಣಾಮವಾಗಿ ಮಹಾತ್ಮ ಗಾಂಧೀಜಿಯವರ ಈ ಪ್ರವಾಸ ಕೊಡಗು ಜಿಲ್ಲೆಯಾದ್ಯಂತ ರಾಜಕೀಯ ಜಾಗೃತಿ, ಸಾಮಾಜಿಕ ಕಳಕಳಿ ಹಾಗೂ ಸಾಂಸ್ಕೃತಿಕ ಅರಿವನ್ನು ಮೂಡಿಸುವ ಮೂಲಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕ ವೇದಿಕೆಯನ್ನು ಒದಗಿಸಿತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.







# ಅನ್ನದಾತರ ಆಪ್ತಮಿತ್ರ ಎರೆಹುಳು

ಸಂಗಮೇಶ ಜವಾದಿ



**ಕಾ**ಯಕಯೋಗಿ,ನಿಸ್ವಾರ್ಥ ಜೀವಿ, ತಮ್ಮತನವನ್ನು ಧಾರೆಯೆರೆದು, ಕೋಟ್ಯಾಂತರ ಜೀವಿಗಳಿಗೆ ಅನ್ನವ ನೀಡುವ ಅನ್ನದಾತನೇ ವಿಶ್ವ ಶ್ರೇಷ್ಠ ರೈತ.

ಭಾರತದ ಬೆನ್ನೆಲುಬಾಗಿರುವ ಇಂತಹ ರೈತರ ಜೀವನದಲ್ಲಿ ಆಶಾಕಿರಣವಾಗಿ ,ರೈತರ ದುಡಿಮೆಗೆ ಸ್ಫೂರ್ತಿಯಾಗಿ, ಉತ್ತಮ ರೀತಿಯಲ್ಲಿ ಇಳುವರಿ ಪಡೆಯಲು ರೈತ ಮಿತ್ರನೆಂದೇ ಖ್ಯಾತಿಯಾದ ಎರೆಹುಳು ಅಕ್ಷರಶಃ ನಿಸ್ವಾರ್ಥ ದುಡಿಮೆಗಾರ. ಅಪ್ಪಟ ಭೂಮಿಪುತ್ರ, ನೆಲ ಪೋಷಕ, ಸಸ್ಯಗಳ ಜೀವ ರಕ್ಷಕ. ರೈತನಿಗೆ ಬೆಳೆ ಬೆಳೆಯಲು ಬೇಕಾದ ಉತ್ಕೃಷ್ಟ ಗೊಬ್ಬರ ಕೊಡುವ ಇದು ಮಹಾನ್ ತ್ಯಾಗಜೀವಿ. ಈ ನಿರುಪದ್ರವಿ ಜೀವಿಗಳು ಮಣ್ಣಿನ ಆಳದಲ್ಲಿ ತೆರಪಿಲ್ಲದೆ ಶ್ರಮಿಸುತ್ತವೆ. ಪ್ರತಿಫಲ ನಿರೀಕ್ಷಿಸದೇ ದುಡಿಯುವ ಎರೆಹುಳುವನ್ನು ನಿಜವಾದ ಕಾಯಕಯೋಗಿ ಅಂದರೆ ತಪ್ಪಾಗಲಾರದು.

ಮಣ್ಣಿನಲ್ಲಿರುವ ಸಾವಯುವ ವಸ್ತುಗಳನ್ನು ತಿಂದು, ಅವುಗಳನ್ನು ಜಠರದಲ್ಲಿ ವಿಭಜಿಸಿ, ವಿವಿಧ ಪೋಷಕಾಂಶಗಳನ್ನು ಒಳಗೊಂಡ ಸತ್ವಯುತ ಗೊಬ್ಬರವನ್ನಾಗಿ ಪರಿವರ್ತಿಸುವ ಎರೆಹುಳುಗಳು ಅನ್ನದಾತನ ಆಪ್ತಮಿತ್ರ ಎಂದೇ ಪ್ರಸಿದ್ಧಿ. ನೆಲದಡಿಯಲ್ಲಿ ಇವುಗಳ ಉಳಿಮೆ ನಿತ್ಯ ನಿರಂತರ ಸಾಗಿರುವುದರಿಂದ ಎರೆಹುಳುಗಳನ್ನು ಜೈವಿಕ ನೇಗಿಲು ಅಂತಲೂ ಕರೆಯುವುದುಂಟು. ದಿನದ 24 ಘಂಟೆಗಳ ಕಾಲ ನಿರಂತರವಾಗಿ ಕೆಲಸವನ್ನು ಮಾಡುತ್ತಾ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಹಾಗಾಗಿ ಎರೆಹುಳು ನಿಸರ್ಗದ ನೇಗಿಲು ಎಂದು ಹೆಸರು ಮಾಡಿದೆ.

ಪ್ರತಿ ಎರೆಹುಳುವೂ ತನ್ನ ತೂಕದ ಒಂದೂವರೆ ಪಟ್ಟು ಹೆಚ್ಚು ತೂಕದ ಮಣ್ಣನ್ನು ಪ್ರತಿ ದಿನವೂ ತಿರುವಿಹಾಕುತ್ತದೆ. ಪ್ರತಿ ರಾತ್ರಿಯೂ ಒಂದು ಎರೆಹುಳು ತಿಂದದ್ದನ್ನು ವಿಸರ್ಜಿಸಲು ಆರ ರಿಂದ ಎಂಟು ಬಾರಿ ಭೂಮಿಯ ಮೇಲ್ಭಾಗಕ್ಕೆ ಬರುತ್ತದೆ. ಪ್ರತಿ ಬಾರಿಯೂ ಅದು ಬೇರೆ ಬೇರೆ ದಾರಿಯಲ್ಲಿಯೇ ಹೊರ ಬರುತ್ತದೆ ಮತ್ತು ಒಳ ಹೋಗುತ್ತದೆ. ಅಂದರೆ ಒಂದು ಎರೆಹುಳು ಒಂದು ರಾತ್ರಿಗೆ ಅಂದಾಜು 15 ರಿಂದ 20 ರಂಧ್ರಗಳನ್ನು ಭೂಮಿಗೆ ಕೊರೆಯುತ್ತದೆ.

ಎರೆಹುಳುಗಳು ಪಕ್ಷಿಗಳಿಗೆ ಪ್ರಿಯವಾದ ಆಹಾರ. ಆದ್ದರಿಂದ ಅವು



downloaded from: www.kpscvaani.com

## ವಿದ್ಯಾರ್ಥಿಗಳ ಉತ್ತೀರ್ಣ ಆಧಾರಿತ ಜಿಲ್ಲಾವಾರು ಫಲಿತಾಂಶ ಮತ್ತು ಸ್ಥಾನ–2019

| ಜಿಲ್ಲೆ | ಶೇಕಡ | 2019 | 2018 |
|---|---|---|---|
| ಹಾಸನ | 89.33 | 1 | 7 |
| ರಾಮನಗರ | 88.49 | 2 | 17 |
| ಬೆಂಗಳೂರು ಗ್ರಾ | 88.34 | 3 | 14 |
| ಉತ್ತರ ಕನ್ನಡ | 88.12 | 4 | 2 |
| ಉಡುಪಿ | 87.97 | 5 | 1 |
| ಚಿತ್ರದುರ್ಗ | 87.46 | 6 | 16 |
| ಮಂಗಳೂರು | 86.73 | 7 | 4 |
| ಕೋಲಾರ | 86.71 | 8 | 8 |
| ದಾವಣಗೆರೆ | 85.94 | 9 | 15 |
| ಮಂಡ್ಯ | 85.65 | 10 | 28 |
| ಮಧುಗಿರಿ | 84.81 | 11 | 5 |
| ಶಿರಸಿ | 84.67 | 12 | 21 |
| ಚಿಕ್ಕೋಡಿ | 84.09 | 13 | 3 |
| ಚಿಕ್ಕಮಗಳೂರು | 82.76 | 14 | 26 |
| ಚಾಮರಾಜನಗರ | 80.58 | 15 | 24 |
| ಕೊಪ್ಪಳ | 80.45 | 16 | 19 |
| ಮೈಸೂರು | 80.32 | 17 | 11 |
| ತುಮಕೂರು | 79.92 | 18 | 10 |
| ಹಾವೇರಿ | 79.75 | 19 | 23 |
| ಚಿಕ್ಕಬಳ್ಳಾಪುರ | 79.69 | 20 | 31 |
| ಶಿವಮೊಗ್ಗ | 79.13 | 21 | 20 |
| ಕೊಡಗು | 78.81 | 22 | 18 |
| ಬಳ್ಳಾರಿ | 77.98 | 23 | 12 |
| ಬೆಳಗಾವಿ | 77.43 | 24 | 6 |
| ವಿಜಯಪುರ | 77.36 | 25 | 9 |
| ಬೆಂಗಳೂರು ಉತ್ತರ | 76.21 | 26 | 22 |
| ಬಾಗಲಕೋಟೆ | 75.28 | 27 | 25 |
| ಧಾರವಾಡ | 75.04 | 28 | 13 |
| ಬೀದರ್ | 74.96 | 29 | 33 |
| ಕಲಬುರ್ಗಿ | 74.65 | 30 | 30 |
| ಗದಗ್ | 74.05 | 31 | 32 |
| ಬೆಂಗಳೂರು ದಕ್ಷಿಣ | 68.83 | 32 | 27 |
| ರಾಯಚೂರು | 65.33 | 33 | 29 |
| ಯಾದಗಿರಿ | 53.95 | 34 | 34 |



downloaded from: www.kpscvaani.com

## ಗುಣಮಟ್ಟ ಆಧಾರಿತ ಜಿಲ್ಲಾವಾರು ಸ್ಥಾನ–2019

| ಜಿಲ್ಲೆ | ಶೇಕಡ | 2019 | 2018 |
|---|---|---|---|
| ಹಾಸನ | 81.88 | 1 | 7 |
| ಉಡುಪಿ | 79.21 | 2 | 1 |
| ಬೆಂಗಳೂರು ಗ್ರಾ | 78.78 | 3 | 14 |
| ಉತ್ತರ ಕನ್ನಡ | 77.41 | 4 | 2 |
| ಮಂಗಳೂರು | 76.94 | 5 | 4 |
| ಚಿತ್ರದುರ್ಗ | 76.14 | 6 | 16 |
| ಕೋಲಾರ | 75.95 | 7 | 8 |
| ಮಂಡ್ಯ | 75.79 | 8 | 28 |
| ರಾಮನಗರ | 75.61 | 9 | 17 |
| ಶಿರಸಿ | 75.44 | 10 | 21 |
| ದಾವಣಗೆರೆ | 75.37 | 11 | 15 |
| ಮಧುಗಿರಿ | 75.20 | 12 | 5 |
| ಚಿಕ್ಕಮಗಳೂರು | 74.94 | 13 | 26 |
| ಚಿಕ್ಕೋಡಿ | 74.24 | 14 | 3 |
| ಕೊಪ್ಪಳ | 71.67 | 15 | 19 |
| ತುಮಕೂರು | 71.32 | 16 | 10 |
| ಹಾವೇರಿ | 70.57 | 17 | 23 |
| ಮೈಸೂರು | 70.23 | 18 | 11 |
| ಚಿಕ್ಕಬಳ್ಳಾಪುರ | 70.18 | 19 | 31 |
| ಶಿವಮೊಗ್ಗ | 69.74 | 20 | 20 |
| ಬೆಂಗಳೂರು ಉತ್ತರ | 69.51 | 21 | 22 |
| ಕೊಡಗು | 69.16 | 22 | 18 |
| ಚಾಮರಾಜನಗರ | 68.54 | 23 | 24 |
| ಬಳ್ಳಾರಿ | 68.07 | 24 | 12 |
| ಬೆಳಗಾವಿ | 67.94 | 25 | 6 |
| ವಿಜಯಪುರ | 67.61 | 26 | 9 |
| ಬೀದರ್ | 65.94 | 27 | 33 |
| ಬಾಗಲಕೋಟೆ | 65.88 | 28 | 25 |
| ಕಲಬುರ್ಗಿ | 65.82 | 29 | 30 |
| ಗದಗ್ | 65.66 | 30 | 32 |
| ಧಾರವಾಡ | 64.97 | 31 | 13 |
| ಬೆಂಗಳೂರು ದಕ್ಷಿಣ | 62.22 | 32 | 27 |
| ರಾಯಚೂರು | 59.21 | 33 | 29 |
| ಯಾದಗಿರಿ | 50.00 | 34 | 34 |

ಕೃಪೆ–ಶಿಕ್ಷಣ ಇಲಾಖೆ

ವರ್ಜಿನ್ ಪ್ಲಾಸ್ಟಿಕ್ ಚೀಲಗಳು ದೊರೆಯುತ್ತವೆ. ಆದರೆ ಇದು ಮರು ಬಳಕೆಗೆ ಹೋದಾಗ ಹೊರ ಬರುವುದು ಎರಡನೇ ದರ್ಜೆ ಪ್ಲಾಸ್ಟಿಕ್. ಇನ್ನು ಹಲವು ರಕ್ಷಿತ ನೈಸರ್ಗಿಕ ಪ್ರದೇಶಗಳಲ್ಲಿ ಇದರ ಬಳಕೆ ಪೂರ್ಣ ನಿಷೇಧ ಎನ್ನುವ ಫಲಕ ಇದ್ದರೂ ಅಲ್ಲಿ ಇವುಗಳ ತ್ಯಾಜ್ಯ ಇದ್ದೇ ಇರುತ್ತದೆ. ಇದರ ಮರು ಬಳಕೆಯಲ್ಲಿ ಇದನ್ನು ಕರಗಿಸಿ ರಸ್ತೆಗಳಿಗೆ ಡಾಂಬರು ರೀತಿಯಲ್ಲಿ ಬಳಕೆ ಮಾಡುವ ಪ್ರಯತ್ನಗಳು ಆಗುತ್ತಿದ್ದರೂ ಅದಿನ್ನೂ ವ್ಯಾಪಕವಾಗಿಲ್ಲ.

ಇನ್ನು ವಿಘಟಿತಗೊಳ್ಳುವ ಮತ್ತು ಜೈವಿಕ ವಿಘಟನೆಗೊಳ್ಳುವ ಪ್ಲಾಸ್ಟಿಕ್ ತಯಾರಿಕೆಯಲ್ಲಿ ಒಂದಷ್ಟು ಪ್ರಯತ್ನಗಳಾಗಿದ್ದರೂ ಅದೇನೂ ದೊಡ್ಡ ಪ್ರಮಾಣದಲ್ಲಿ ಆಗುತ್ತಿಲ್ಲ. ಇಂತಹ ಪ್ಲಾಸ್ಟಿಕ್ ಬಳಕೆಯಿಂದ ಅವು ತ್ಯಾಜ್ಯಗಳಾಗಿ ಹೊರ ಬಂದಾಗ ಅದಷ್ಟು ಬೇಗ ನಿಸರ್ಗಕ್ಕೆ ಹಾನಿಯಾಗದಂತೆ ಅವುಗಳನ್ನು ನಾಶ ಮಾಡಬಹುದು. ಇದನ್ನು ಕಾರ್ಖಾನೆಗಳ ಕಾಂಪೋಸ್ಟ್‌ಗಳಲ್ಲಿ ನಾಶ ಮಾಡಬಹುದಾದರೂ ಗೃಹ ಬಳಕೆಯ ಕಾಂಪೋಸ್ಟ್‌ಗಳಲ್ಲಿ ಸಾಧ್ಯವಾಗುವುದಿಲ್ಲ. ಬ್ರಿಟನ್ ಮತ್ತು ಇನ್ನೂ ಅನೇಕ ಐರೋಪ್ಯ ದೇಶಗಳಲ್ಲಿ ಮಕ್ಕಳ ಹಾಲಿನ ಬಾಟಲ್ ಮೊದಲಾಗಿ ದ್ರವ ರೂಪದಲ್ಲಿ ಕೊಡಿಡುವ ಎಲ್ಲ ಬಗೆಯ ಪ್ಲಾಸ್ಟಿಕ್ ಪಾಕೆಟ್‌ಗಳನ್ನು ಸಂಪೂರ್ಣವಾಗಿ ನಿಷೇಧ ಮಾಡಿದ್ದಾರೆ. ಅದೇ ರೀತಿ ನಮ್ಮ ದೇಶದಲ್ಲೂ ಆದರೆ ಒಳಿತು.

**ಸಾರ್ವಜನಿಕರಲ್ಲಿ ಜಾಗೃತಿ ಮೂಡಬೇಕು**

ಪ್ಲಾಸ್ಟಿಕ್ ತ್ಯಾಜ್ಯದಿಂದಾಗುವ ದುಷ್ಪರಿಣಾಮದ ಕುರಿತು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಹೀಗಾಗಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳ ಕುರಿತ ಅಧ್ಯಯನಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚು ಒತ್ತು ನೀಡಲಾಗುತ್ತಿದೆ.

ನಿರುಪಯುಕ್ತ ಪ್ಲಾಸ್ಟಿಕ್ ಅನ್ನು ಸಿಕ್ಕ ಸಿಕ್ಕಲ್ಲಿ ಎಸೆಯುವುದರಿಂದ ಪ್ಲಾಸ್ಟಿಕ್ ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಸಮರ್ಪಕವಾಗಿ ಆಗುತ್ತಿಲ್ಲ. ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಇತರೆ ತ್ಯಾಜ್ಯದೊಂದಿಗೆ ಸೇರಿಸದೆ ಮರು ಬಳಕೆಯಾಗುವಂತೆ ರದ್ದಿ ಅಂಗಡಿಗೆ ಮಾರಾಟ ಮಾಡಬೇಕು. ಇದರಿಂದ ನಮಗೆ ಸ್ವಲ್ಪ ಹಣ ಕೂಡ ದೊರಕುವ ಜೊತೆಗೆ ಪರಿಸರ ನೈರ್ಮಲ್ಯವನ್ನು ಕಡೆಗಟ್ಟುವಲ್ಲಿ ಅಳಿಲು ಸೇವೆ ಸಲ್ಲಿಸಿದಂತಾಗುತ್ತದೆ. ನಾವೊಬ್ಬರೇ ಮಾಡಿದರೆ ಏನು ಪ್ರಯೋಜನ ಎಂದು ನಾವು ಪ್ಲಾಸ್ಟಿಕ್ ಅನ್ನು ತ್ಯಾಜ್ಯದೊಂದಿಗೆ ಸೇರಿಸಿ ಎಸೆಯಬಾರದು. ನಮ್ಮಿಂದಲೇ ಈ ಕೆಲಸವನ್ನು ಪ್ರಾರಂಭಿಸಬೇಕು. ನಮ್ಮನ್ನು ನೋಡಿಯಾದರೂ ಮತ್ತೊಬ್ಬರಿಗೆ ಪ್ರೇರಣೆಯಾಗಲಿದೆ.

ಪ್ಲಾಸ್ಟಿಕ್ ನಿರ್ಮೂಲನೆಯಲ್ಲಿ ಸಾರ್ವಜನಿಕರ ಪಾತ್ರ ಬಹಳ ಮುಖ್ಯ. ಇದರ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು. ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ನಿಷೇಧಿಸುವ ಕುರಿತು ಮನವರಿಕೆ ಮಾಡಿಕೊಡಬೇಕು. ಅಂಗಡಿಗಳಲ್ಲಿ ಕಳಪೆ ಮಟ್ಟದ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ವಿತರಿಸುತ್ತಿರುವುದು ಕಂಡು ಬಂದರೆ ಕೂಡಲೇ ನಗರಪಾಲಿಕೆಯ ಅಧಿಕಾರಿಗಳಿಗೆ ದೂರು ನೀಡಬೇಕು.

ಎಲ್ಲರೂ ಆದಷ್ಟೂ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಬೇಕು. ಸರ್ಕಾರಿ ಕಾರ್ಯಕ್ರಮಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ ನೀರು ಸರಬರಾಜು ಮಾಡಲು ಪ್ಲಾಸ್ಟಿಕ್ ಬಾಟಲಿಗಳ ಬಳಕೆಯನ್ನು ನಿಷೇಧಿಸಬೇಕು. ಪ್ಲಾಸ್ಟಿಕ್ ತಟ್ಟೆ,



ಲೋಟ, ಸ್ಪೂನ್, ಇವುಗಳನ್ನು ಬಳಕೆ ಮಾಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ವ್ಯಾಪಾರಸ್ಥರು ಹಾಗೂ ಕೈಗಾರಿಕೋದ್ಯಮಿಗಳು ಈಗಾಗಲೇ ಜಾರಿಯಲ್ಲಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಅಂಗಡಿ ಮಳಿಗೆಗಳಲ್ಲಿ ಪ್ಲಾಸ್ಟಿಕ್ ವಸ್ತುಗಳ ದಾಸ್ತಾನು ಇರಿಸದಂತೆ ನೋಡಿಕೊಳ್ಳಬೇಕು. ಹಾಗೆಯೇ ಸಾರ್ವಜನಿಕರು ಕೂಡ ವ್ಯಾಪಾರದ ಸಂದರ್ಭಗಳಲ್ಲಿ ಅಂಗಡಿಯವರು ನೀಡುವ ಪ್ಲಾಸ್ಟಿಕ್ ಕವರ್‌ಗಳನ್ನು ತಿರಸ್ಕರಿಸಬೇಕು. ಜೊತೆಗೆ ಪದಾರ್ಥಗಳ ಖರೀದಿಗೆ ಹೊರಟಾಗ ಬಟ್ಟೆಯ ಬ್ಯಾಗ್ ಅನ್ನು ಜೊತೆಯಲ್ಲಿ ಕೊಂಡೊಯ್ಯಬೇಕು.

ಊಟಿಯಲ್ಲಿ ಪ್ಲಾಸ್ಟಿಕ್ ತರುವ ಪ್ರವಾಸಿಗರ ಮೇಲೆ ದೂರು ದಾಖಲಿಸಲಾಗುತ್ತದೆ. ಅದೇ ರೀತಿಯಲ್ಲಿ ಎಲ್ಲಾ ಪ್ರವಾಸಿ ಸ್ಥಳಗಳಲ್ಲಿ ಪ್ಲಾಸ್ಟಿಕ್ ತರುವ ಪ್ರವಾಸಿಗರ ಮೇಲೆ ದೂರು ದಾಖಲಿಸಿ ಕಠಿಣ ಕ್ರಮ ಕೈಗೊಂಡಲ್ಲಿ ಮಾತ್ರ ಸ್ವಲ್ಪ ಮಟ್ಟಿಗಾದರೂ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಬಹುದು.

ಪ್ರತಿ ವರ್ಷ ಜೂನ್ 5 ರಂದು ಪರಿಸರ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಅಂದು ಎಲ್ಲೆಡೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕೇವಲ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಸಾಲದು. ನಾವು ಸ್ವಯಂ ಪ್ರೇರಿತರಾಗಿ ಪರಿಸರ ನೈರ್ಮಲ್ಯವನ್ನು ಕಡೆಯಲು ಮುಂದಾದಲ್ಲಿ ಖಂಡಿತವಾಗಿ ನಮ್ಮ ಮಕ್ಕಳ ಆರೋಗ್ಯವನ್ನು ಕಾಪಾಡಿದಂತಾಗುತ್ತದೆ. ಆದ್ದರಿಂದ ಇನ್ನು ಮುಂದೆ ಪ್ಲಾಸ್ಟಿಕ್ ಬಾಟಲ್ ಮತ್ತು ಪ್ಲಾಸ್ಟಿಕ್ ಚೀಲಗಳನ್ನು ಬಳಸುವುದಿಲ್ಲ, ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೆ ಮರು ಬಳಕೆಗೆ ನೀಡುತ್ತೇನೆಂದು ಪ್ರಮಾಣ ಮಾಡಿ.

ನಮ್ಮ ಹಿಂದಿನವರು ನಮಗೆ ನೀಡಿದ ಬಳುವಳಿ ಈ ಭೂಮಿ. ಅದು ನಮ್ಮ ಮನೆ ಕೂಡ. ನಮ್ಮ ಬದುಕಿಗೆ ನಿರಂತರವಾಗಿ ಬೇಕಾಗಿದೆ. ಇದು ನಮಗಷ್ಟೇ ಅಲ್ಲ ಮುಂದಿನ ಪೀಳಿಗೆಯವರಿಗೂ ನಾವು ಸುಸ್ಥಿತಿಯಲ್ಲಿ ನೀಡ ಬೇಕಾಗಿದೆ. ಅದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.





# ಸದಭಿರುಚಿ ಚಿತ್ರ ನಿರ್ಮಾಪಕ

# ಜಿ.ಎನ್. ಲಕ್ಷ್ಮೀಪತಿ

ಡಾ. ಕೆ. ಪುಟ್ಟಸ್ವಾಮಿ

ಇಪ್ಪತ್ತನೆಯ ಶತಮಾನದ ಚಾರಿತ್ರಿಕ ಸಂಗತಿಗಳಿಗೆ ಸಾಕ್ಷಿಯಾಗಿ, ಬದಲಾವಣೆಗಳಿಗೆ ಮುಖಾಮುಖಿಯಾಗಿ ಬದುಕು ರೂಪಿಸಿಕೊಂಡ ಗುಬ್ಬಿ ನರಸಿಂಹಯ್ಯ ಲಕ್ಷ್ಮೀಪತಿ ಅವರು ಕನ್ನಡದಲ್ಲಿ ಸದಭಿರುಚಿಯ ಚಿತ್ರಗಳ ನಿರ್ಮಾಪಕರಾಗಿ ಕನ್ನಡ ಸಂಸ್ಕೃತಿಗೆ ಮೌಲ್ಯಯುತ ಕೊಡುಗೆ ನೀಡಿದವರು. ಶತಾಯುಷಿಗಳಾಗಿ ನೂರಾ ಎರಡು ವರ್ಷ ಬದುಕಿದ್ದ ಜಿ.ಎನ್. ಲಕ್ಷ್ಮೀಪತಿಯವರು ಮೇ 16ರಂದು ಬೆಂಗಳೂರಿನಲ್ಲಿ ನಿಧನರಾದರು. ಆದರೆ ಅವರು ನಿರ್ಮಿಸಿದ ಚಿತ್ರಗಳು ಸಂಖ್ಯೆಯಲ್ಲಿ ಕಡಿಮೆಯೇ ಆದರೂ ಚಲನಚಿತ್ರರಂಗದ ಬೆಳವಣಿಗೆಗೆ ನೀಡಿದ ಕಾಣಿಕೆಯಿಂದ ಅಮರರಾಗಿದ್ದಾರೆ.

ಲಕ್ಷ್ಮೀಪತಿ ಅವರು ಜನಿಸಿದ್ದು 7ನೇ ಮೇ 1917ರಂದು ಗುಬ್ಬಿಯಲ್ಲಿ. ಅವರದು ನಿರ್ಮಾಣ ಗುತ್ತಿಗೆ ಮತ್ತು ನಿರ್ಮಾಣ ಉದ್ದಿಮೆಯ ಕುಟುಂಬ. ಕಾಮಗಾರಿ ಗುತ್ತಿಗೆಯ ಜೊತೆಗೆ ಇಪ್ಪತ್ತನೇ ಶತಮಾನದ ಆರಂಭದಲ್ಲಿಯೇ ಸಿಮೆಂಟ್ ಬ್ಲಾಕ್, ಮೋಸೆಕ್ ಹಾಸುಗಳನ್ನು ತಯಾರಿಸುವ ಉದ್ದಿಮೆಯಲ್ಲಿ ಕುಟುಂಬ ತೊಡಗಿತ್ತು. ಬೆಂಗಳೂರಿನಲ್ಲಿಯೇ ಇಂಟರ್‌ಮೀಡಿಯೇಟ್‌ವರೆಗೆ ಓದಿದ ಲಕ್ಷ್ಮೀಪತಿಯವರು ಬಹುಬೇಗನೆ ತಂದೆಯವರ ಉದ್ದಿಮೆಯಲ್ಲಿ ತೊಡಗಿಸಿಕೊಂಡರು.

ಇಪ್ಪತ್ತನೆಯ ಶತಮಾನದಲ್ಲಿ ಮಹಾರಾಜರ ಆಳ್ವಿಕೆಯಲ್ಲಿದ್ದ ಬೆಂಗಳೂರು, ಇಂದಿನ ಜನದಟ್ಟಣೆಯ, ಆರ್ಥಿಕ ಚಟುವಟಿಕೆಯ ಕೇಂದ್ರವಾಗಿ ಅದು ಹಾದು ಬಂದ ಪಲ್ಲಟಗಳಿಗೆ ಸಾಕ್ಷಿಯಾದವರು. ಎರಡನೇ ಮಹಾಯುದ್ಧ, ಕುಮಾರಕೃಪಾದಲ್ಲಿ ತಂಗಿದ್ದ ಗಾಂಧೀಜಿಯ ದರ್ಶನ (1929), ಭಾರತದ ಸ್ವಾತಂತ್ರ್ಯ, ಮೊದಲ ರೇಡಿಯೋ–ಹೀಗೆ ಹಲವಾರು ವಿಶಿಷ್ಟ ಕ್ಷಣಗಳಿಗೆ ಸಾಕ್ಷಿಯಾದವರು. ಮಾರುತಿ ಮೂವೀಸ್ ಸಂಸ್ಥೆಯನ್ನು ಹುಟ್ಟು ಹಾಕಿ ತಮ್ಮ ಕ್ಷೇತ್ರ ಕಾರ್ಯವನ್ನು ಚಲನಚಿತ್ರ ನಿರ್ಮಾಣಕ್ಕೂ ವಿಸ್ತರಿಸಿಕೊಂಡವರು. ಅವರಲ್ಲಿ ಆಧುನಿಕ ಕಾಲದ ಬದಲಾವಣೆಗಳಿಗೆ ಸ್ಪಂದಿಸುವ ಗುಣವಿದ್ದ ಕಾರಣ, ಚಿತ್ರ ನಿರ್ಮಾಣದಲ್ಲಿ ನವೀನ ಪ್ರಯೋಗಗಳಿಗೆ ಬೆಂಬಲ ನೀಡಲು ಸಾಧ್ಯವಾಯಿತು.

ಅವರು ಮತ್ತೊಬ್ಬ ನಿರ್ಮಾಪಕ ಕೆ.ಎಸ್. ನಾರಾಯಣ್ ಅವರೊಡನೆ ಚಿತ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡರು. ಮೊದಲು ಗೋಪಾಲ್–ಲಕ್ಷ್ಮಣ್ ಅವರ ಭಾರತ್ ಎಂಟರ್‌ಪ್ರೈಸಸ್ ಸಂಸ್ಥೆಯಲ್ಲಿ ಪಾಲುದಾರರಾಗಿ ನಿರ್ಮಿಸಿದ 'ಉಯ್ಯಾಲೆ' (1969) ಅವರು ನಿರ್ಮಾಣದಲ್ಲಿ ತೊಡಗಿಸಿಕೊಂಡ ಮೊದಲ ಚಿತ್ರ. ಚದುರಂಗದ ಅದೇ ಹೆಸರಿನ ಕಾದಂಬರಿ ಆಧರಿಸಿ ಎನ್. ಲಕ್ಷ್ಮೀನಾರಾಯಣ ನಿರ್ದೇಶನದ 'ಉಯ್ಯಾಲೆ' ಆ ಕಾಲದ ಮಹಿಳೆಯ ಮಾನಸಿಕ ತುಮುಲ ಮತ್ತು ಗಂಡು–ಹೆಣ್ಣಿನ ನಡುವಿನ ವಿವಾಹದಾಚೆಗಿನ ಆಕರ್ಷಣೆಗಳನ್ನು ಕುರಿತ ಚಿತ್ರವಾಗಿತ್ತು. ಈ ಚಿತ್ರದಲ್ಲಿ ನಾಯಕ ನಟರಾಗಿದ್ದ ಡಾ. ರಾಜ್‌ಕುಮಾರ್ ಅವರಿಗೆ ಆ ಕಾಲದಲ್ಲಿಯೇ







downloaded from: www.kpscvaani.com

ಅತ್ಯಂತ ಹೆಚ್ಚು ಎನ್ನುವ ಮೊತ್ತದ ಸಂಭಾವನೆ ನೀಡಿದ್ದರೆಂದು ಸುದ್ದಿಯಾಗಿತ್ತು. ಈ ಚಿತ್ರ ರಾಜ್ಯ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ಕಥಾಲೇಖಕ ಮತ್ತು ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು ಗಳಿಸಿತು.

ಅನಂತರ ಲಕ್ಷ್ಮೀಪತಿ ಅವರು ಡಾ. ರಾಜ್, ಕಲ್ಪನಾ, ಜಯಂತಿ, ರಾಜೇಶ್ ನಟಿಸಿದ್ದ 'ದೇವರ ಮಕ್ಕಳು' (1970) ಚಿತ್ರದ ನಿರ್ಮಾಣಕ್ಕೂ ಆಸರೆಯಾಗಿ ನಿಂತರು.



1970ರ ದಶಕದಲ್ಲಿ ವಾಣಿಜ್ಯ ಚಿತ್ರಗಳು ಅಳವಡಿಸಿಕೊಳ್ಳುತ್ತಿದ್ದ ಮಸಾಲೆಯ ಸೂತ್ರಗಳನ್ನು ಹೊರಗಿರಿಸಿ, ಲಾಭ ನಷ್ಟಗಳ ಪೂರ್ವಾಪರಗಳನ್ನು ಲೆಕ್ಕಿಸದೆ, ಸದಭಿರುಚಿಯ ಚಿತ್ರಗಳ ನಿರ್ಮಾಣಕ್ಕೆ ಇಳಿದ ಸಾಹಸಿಗರೆಂದರೆ ಜಿ.ಎನ್. ಲಕ್ಷ್ಮೀಪತಿ ಮತ್ತು ಕೆ.ಎನ್. ನಾರಾಯಣ್. ಅವರು ಎಲ್.ಎನ್. ಕಂಬೈನ್ಸ್ ಸಂಸ್ಥೆಯಡಿ ನಿರ್ಮಿಸಿದ 'ಕಾಡು' (1973) ಚಿತ್ರವು ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿತು. 'ಕಾಡು' ಕಾದಂಬರಿಯನ್ನು ರಚಿಸಿ ಕನ್ನಡ ಸಾಹಿತ್ಯ ವಲಯದಲ್ಲಿ ಸಂಚಲನ ಸೃಷ್ಟಿಸಿದ್ದ ತರುಣ ಸಾಹಿತಿ ಶ್ರೀಕೃಷ್ಣ ಆಲನಹಳ್ಳಿಯವರ ಕಾದಂಬರಿಯನ್ನು ಚಿತ್ರರೂಪಕ್ಕೆ ತರಲು ಅವರು ಸಿದ್ಧವಾದರು. ಆಗ ತಾನೆ ನಾಟಕಕಾರರಾಗಿ ಮತ್ತು ರಂಗಕರ್ಮಿ ಬಿ.ವಿ. ಕಾರಂತರ ಜೊತೆಗೂಡಿ 'ವಂಶವೃಕ್ಷ' ನಿರ್ದೇಶಿಸಿ ಅಖಿಲ ಭಾರತ ಮನ್ನಣೆ ಗಳಿಸಿದ್ದ ಗಿರೀಶ್ ಕಾರ್ನಾಡ್ ನಿರ್ದೇಶನದಲ್ಲಿ 'ಕಾಡು' ಹೊಸ ಅಲೆಯ ಚಿತ್ರಗಳಲ್ಲಿ ವಿಶೇಷ ಸ್ಥಾನ ಗಳಿಸಿತ್ತು. ಈ ಚಿತ್ರವನ್ನು ವೀಕ್ಷಿಸಿದ ಅಂದಿನ ಸೋವಿಯತ್ ರಷ್ಯಾ ದೇಶದ ಖ್ಯಾತ ನಿರ್ದೇಶಕ ಅಲಿ ಖಿಮರೇಫ್ ಅವರು "ಕಾಡು ಚಿತ್ರದ ಅಭಿನಯ, ನಿರ್ದೇಶನ, ಸಂಗೀತ, ಛಾಯಾಗ್ರಹಣ, ಎಲ್ಲವೂ ಅದ್ಭುತ" ಎಂದು ಪ್ರಶಂಸಿಸಿದ್ದರು. ತನ್ನ ಸೋದರಮಾವನ ಊರಿಗೆ ಓದಲು ಬರುವ ಬಾಲಕನೊಬ್ಬ ಹಳ್ಳಿಯ ಊಳಿಗಮಾನ್ಯ ಕುಟುಂಬಗಳ ನಡುವಿನ ದ್ವೇಷ, ಸಂಘರ್ಷಗಳಲ್ಲಿ ಸಮಾಜದ ಭೀಕರ ಸ್ವರೂಪಕ್ಕೆ ಸಾಕ್ಷಿಯಾಗುವುದನ್ನು ನಿರೂಪಿಸುವ ಚಿತ್ರವು ರಾಜ್ಯ ಪ್ರಶಸ್ತಿಗಳನ್ನಲ್ಲದೆ, ಅತ್ಯುತ್ತಮ ನಟಿ, ಅತ್ಯುತ್ತಮ ಬಾಲನಟ ರಾಷ್ಟ್ರೀಯ ಪುರಸ್ಕಾರಗಳನ್ನು ಪಡೆಯಿತು.

ಪ್ರಖ್ಯಾತ ನಿರ್ದೇಶಕ ಎಂ.ಎಸ್. ಸತ್ಯು ಅವರ ನಿರ್ದೇಶನದಲ್ಲಿ ರಾಜಕೀಯ ವಿಡಂಬನಾತ್ಮಕ ಚಿತ್ರ 'ಚಿತೆಗೂ ಚಿಂತೆ' (1978) ಚಿತ್ರವನ್ನು ನಿರ್ಮಿಸುವ ಮುನ್ನ ಎಲ್.ಎನ್. ಕಂಬೈನ್ಸ್ ಲಾಂಛನದಡಿ 'ಒಂದಾನೊಂದು ಕಾಲದಲ್ಲಿ' ಎಂಬ ವಿನೂತನ ಚಿತ್ರವೊಂದನ್ನು ಲಕ್ಷ್ಮೀಪತಿಯವರು ಎನ್.ಕೆ. ನಾರಾಯಣ್ ಅವರ ಜೊತೆ ಗೂಡಿ ನಿರ್ಮಿಸಿದರು. ಜಪಾನ್‌ನ ಮಹಾನ್ ನಿರ್ದೇಶಕ ಅಕಿರಾ ಕುರಸೋವಾ ಅವರ ಸಮುರಾಯ್ ಸಾಹಸದ ಚಿತ್ರಗಳನ್ನು ಆಧರಿಸಿ (ಮುಖ್ಯವಾಗಿ ಯೋಜಿಂಬೋ ಮತ್ತು ಸಂಜುರೋ), ಕರ್ನಾಟಕದಲ್ಲಿ ಮಧ್ಯಯುಗೀನ ಕಾಲದಲ್ಲಿ ಆಚರಣೆಯಲ್ಲಿತ್ತೆಂದು ಹೇಳಲಾದ ಬಾಡಿಗೆ ಭಂಟರ ಕಥನಕ್ಕೆ ಅನ್ವಯಿಸಿ ಗಿರೀಶ್ ಕಾರ್ನಾಡ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದರು. ಹೊಸ ಅಲೆಯ ಸಾಹಸಮಯ ಚಿತ್ರಕ್ಕೆ ನಿರ್ಮಾಪಕರು ಅಪಾರವಾಗಿ ವೆಚ್ಚ ಮಾಡಿದ್ದರು. ಇದು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಪ್ರತಿಭಾವಂತರ ಸಂಗಮದ ಚಿತ್ರ, ರಾಷ್ಟ್ರಮಟ್ಟದಲ್ಲಿ ಖ್ಯಾತಿಯಾಗಿದ್ದ ಎ.ಕೆ. ಬೀರ್ (ಛಾಯಾಗ್ರಹಣ), ಭಾಸ್ಕರ್ ಚಂದಾವರ್ಕರ್ (ಸಂಗೀತ), ನಚಿಕೇತ್ ಪಟವರ್ಧನ್ (ಕಲೆ), ಮತ್ತು ಖ್ಯಾತ ಸಾಹಿತಿಗಳಾದ ಚಂದ್ರಶೇಖರ ಕಂಬಾರ (ಹಾಡುಗಳು), ಜಿ.ಬಿ. ಜೋಶಿ (ಸಂಭಾಷಣೆ) ಅಲ್ಲದೆ ನಟ ಶಂಕರನಾಗ್ ಅವರನ್ನು ಪರಿಚಯಿಸಿದ, ಸುಂದರಕೃಷ್ಣ ಅರಸು ಅವರ ನಟನಾ ಪ್ರತಿಭೆಗೆ ಸಾಕ್ಷಿ ಹಿಡಿದ ಚಿತ್ರವಾಗಿತ್ತು. ಶಂಕರನಾಗ್ ಅವರು 1979ರಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಗಳಿಸಿದರು.

'ಚಿತೆಗೂ ಚಿಂತೆ' ಚಿತ್ರದ ನಂತರ ನಿರ್ಮಾಣ ಕ್ಷೇತ್ರದಿಂದ ಹಿಂದೆಗೆದ ಲಕ್ಷ್ಮೀಪತಿ ಅವರು ಸಾವನ್ ಮೂವೀಸ್ ಲಾಂಛನದಡಿಯಲ್ಲಿ ವಿಷ್ಣುವರ್ಧನ್, ಆರತಿ ಜೋಡಿಯಾಗಿದ್ದ 'ನೆಂಟರೋ ಗಂಟು ಕಳ್ಳರೋ' ಚಿತ್ರವೇ ಅವರು ನಿರ್ಮಾಣದಲ್ಲಿ ಪಾಲ್ಗೊಂಡ ಕೊನೆಯ ಚಿತ್ರ. ಕ್ರಮೇಣ ಅವರು ಇತರ ಆಸಕ್ತ ಕ್ಷೇತ್ರಗಳಿಗೆ ತಮ್ಮ ಚಟುವಟಿಕೆಯನ್ನು ವಿಸ್ತರಿಸಿಕೊಂಡರು.

ಜಿ.ಎನ್. ಲಕ್ಷ್ಮೀಪತಿಯವರ ನೆರವು ಮತ್ತು ಸಲಹೆಯಿಂದಲೇ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಶೇಷಾದ್ರಿಪುರಂನಲ್ಲಿ ಅಮೂಲ್ಯವಾದ ನಿವೇಶನವನ್ನು ಪಡೆದು ಕಚೇರಿಯನ್ನು ಆರಂಭಿಸಲು ಸಾಧ್ಯವಾಯಿತು. ಅವರು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಅವರು ನಿರ್ಮಿಸಿದ ಚಿತ್ರಗಳ ಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರೂ, ನಿರ್ಮಿಸಿದ ಚಿತ್ರಗಳೆಲ್ಲವೂ ಮೌಲಿಕವಾದವು. ಗುಣಮಟ್ಟದಲ್ಲಿ ಅತ್ಯುತ್ತಮವಾಗಿ ಮೂಡಿ ಬಂದಂಥವು.

ಕರ್ನಾಟಕ ಚಲನಚಿತ್ರರಂಗದ ವಿವಿಧ ಕ್ಷೇತ್ರಗಳಿಗೆ ಸಲ್ಲಿಸಿದ ಶ್ರೀ ಜಿ.ಎನ್. ಲಕ್ಷ್ಮೀಪತಿ ಅವರ ಸೇವೆಯನ್ನು ಗುರುತಿಸಿ 2017ನೇ ಸಾಲಿನ 'ಡಾ. ವಿಷ್ಣುವರ್ಧನ್' ಪ್ರಶಸ್ತಿ ನೀಡಿ ಪುರಸ್ಕರಿಸಲು ರಾಜ್ಯ ಸರ್ಕಾರವು ಅವರನ್ನು ಆಯ್ಕೆ ಮಾಡಿತ್ತು. ಹಲವು ಅನಿವಾರ್ಯ ಕಾರಣಗಳಿಂದ ಪ್ರಶಸ್ತಿ ಪ್ರದಾನ ಸಮಾರಂಭ ಮುಂದೂಡಲಾಯಿತು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010
downloaded from: www.kpscvaani.com